ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಸೆಪ್ಟೆಂಬರ್ 12 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 146 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಡಾ.ವಿಷ್ಣುವರ್ಧನ್, ಬಿ.ಸರೋಜಾದೇವಿಗೆ 'ಕರ್ನಾಟಕ ರತ್ನ' ಗೌರವ

ಕುವೆಂಪುಗೆ 'ಭಾರತ ರತ್ನ'ಕ್ಕೆ ಶಿಫಾರಸು

ಸಚಿವ ಸಂಪುಟ ಸಭೆ ಮಹತ್ವದ ನಿರ್ಧಾರ


ಡಾ. ವಿಷ್ಣುವರ್ಧನ್


ಬಿ. ಸರೋಜಾದೇವಿ


ಕುವೆಂಪು

ಬೆಂಗಳೂರು, ಸೆ.11– ಕನ್ನಡ ಚಿತ್ರರಂಗದಲ್ಲಿನ ಜೀವಮಾನ ಸೇವೆಯನ್ನು ಪರಿಗಣಿಸಿ ರಾಜ್ಯ ಸರ್ಕಾರ ಸಾಹಸಸಿಂಹ, ನಟ ಡಾ.ವಿಷ್ಣುವರ್ಧನ್ ಹಾಗೂ ಅಭಿನಯ ಸರಸ್ವತಿ ಎಂದೇ ಜನಪ್ರಿಯತೆ ಗಳಿಸಿದ್ದ ಬಹುಭಾಷಾ ನಟಿ ಬಿ.ಸರೋಜಾದೇವಿ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಘೋಷಣೆ ಮಾಡಲಾಗಿದೆ. ಈ ಇಬ್ಬರಿಗೂ ಮರಣೋತ್ತರವಾಗಿ ಈ ಪ್ರತಿಷ್ಠಿತ ಪ್ರಶಸ್ತಿ ನೀಡಲಾಗುತ್ತದೆ. ಜೊತೆಗೆ ರಾಷ್ಟ್ರಕವಿ ಕುವೆಂಪು ಅವರಿಗೆ 'ಭಾರತರತ್ನ' ಪ್ರಶಸ್ತಿ ನೀಡುವಂತೆ ಕೇಂದ್ರಕ್ಕೆ ಶಿಫಾರಸು ಮಾಡಲು ರಾಜ್ಯ ಸಚಿವ ಸಂಪುಟ ತೀರ್ಮಾನ ಕೈಗೊಂಡಿದೆ.

ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಹೆಚ್.ಕೆ ಪಾಟೀಲ್, ಪ್ರಶಸ್ತಿಯನ್ನು ಯಾವಾಗ, ಎಲ್ಲಿ ಪ್ರದಾನ ಮಾಡಬೇಕೆಂಬುದನ್ನು ಮುಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ಧರಿಸಲಿದೆ ಎಂದು ತಿಳಿಸಿದ್ದಾರೆ.

ರಾಜ್ಯದ ಎಲ್ಲಾ ಸಿನಿಮಾ ಗಣ್ಯರಿಂದ ವಿಷ್ಣುವರ್ಧನ್‌ಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡುವಂತೆ ಒತ್ತಾಯ ಕೇಳಿ ಬಂದಿತ್ತು. ಕಳೆದೊಂದು ತಿಂಗಳಿಂದ ವಿಷ್ಣುವರ್ಧನ್‌ಗೆ ಕರ್ನಾಟಕ ಪ್ರಶಸ್ತಿ ನೀಡಲೇಬೇಕು ಎಂದು ನೂರಕ್ಕೂ ಅಧಿಕ ಹಿರಿಯ ಕಲಾವಿದರು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಕೆ ಮಾಡಿದ್ದರು.

ಇತ್ತೀಚೆಗೆ ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿದ್ದ ವಿಷ್ಣುವರ್ಧನ್ ಸ್ಮಾರಕವನ್ನು ರಾತ್ರೋರಾತ್ರಿ ತೆರವು ಮಾಡಲಾಗಿದ್ದರಿಂದ ಅಭಿಮಾನಿಗಳ ಆಕ್ರೋಶ ಕಟ್ಟೆ ಒಡೆದಿತ್ತು. ಅಭಿಮಾನ್ ಸ್ಟುಡಿಯೋದಲ್ಲಿ ಜಾಗ ಕೊಡದ ಸರ್ಕಾರದ ವಿರುದ್ಧ ವಿಷ್ಣುವರ್ಧನ್ ಅಭಿಮಾನಿಗಳು ಆಕ್ರೋಶ ಹೊರಹಾಕಿದ್ದರು. ಇದೀಗ ಸಾಹಸಸಿಂಹ ವಿಷ್ಣುವರ್ಧನ್‌ಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡುವ ಮೂಲಕ ಎಲ್ಲರ ಆಕ್ರೋಶ ತಣಿಸುವ ಕಾರ್ಯಕ್ಕೆ ಮುಂದಾಗಿದೆ.

ಅಲ್ಪಸಂಖ್ಯಾತರ ಹಿಂದುಳಿದ ಕಾಲೋನಿಗಳ ಅಭಿವೃದ್ಧಿಗೆ 398 ಕೋಟಿ: ಅಲ್ಪಸಂಖ್ಯಾತ ಸಮುದಾಯದವರಿಗೆ ಸರ್ಕಾರದಿಂದ ಮತ್ತೊಂದು ಬಂಪರ್ ಕೊಡುಗೆ ಸಿಕ್ಕಿದೆ. ಅಲ್ಪಸಂಖ್ಯಾತರು ವಾಸಿಸುವ ನಗರ ಪ್ರದೇಶದ ಹಿಂದುಳಿದ ಕಾಲೋನಿಗಳು ಮಾದರಿ ಕಾಲೋನಿಯಾಗಿ ಅಭಿವೃದ್ಧಿಗೆ ಸರ್ಕಾರ ಮುಂದಾಗಿದೆ. 22 ವಿಧಾನಸಭಾ ಕ್ಷೇತ್ರಗಳಲ್ಲಿ ಮಾದರಿ ಕಾಲೋನಿ ನಿರ್ಮಾಣಕ್ಕೆ ಸರ್ಕಾರ ತೀರ್ಮಾನ ಮಾಡಿದ್ದು, 398 ಕೋಟಿ ರೂ. ಮೊತ್ತದ ಯೋಜನೆ ಜಾರಿಗೆ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಅಲ್ಪಸಂಖ್ಯಾತರು ಇರುವ ಅತೀ ಹಿಂದುಳಿದ ಹಾಗೂ ಹಿಂದುಳಿದ ಕಾಲೋನಿಗಳನ್ನು ಮಾದರಿ ಕಾಲೋನಿಗಳಾಗಿ ಅಭಿವೃದ್ಧಿಪಡಿಸುವುದು ಉದ್ದೇಶ. ಇದಕ್ಕಾಗಿ ಈಗಾಗಲೇ 1,000 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಮೀಸಲಿಟ್ಟಿದೆ. ಆ ಮೊತ್ತಕ್ಕೆ ಕ್ರಿಯಾ ಯೋಜನೆ ಸಿದ್ಧಪಡಿಸಿ ಹಂತಹಂತವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ. ಅದರ ಭಾಗವಾಗಿ ಈಗ 398 ಕೋಟಿ ರೂ ವೆಚ್ಚದಲ್ಲಿ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೈಗೊಳ್ಳಲಿದೆ

ಕುಶಾಲನಗರ, ಮಾಲೂರು, ಮಾಗಡಿ, ಕೊರಟಗೆರೆ, ಜಗಳೂರು, ಸವಣೂರು, ರಾಮದುರ್ಗ ಮತ್ತು ಸವದತ್ತಿ ತಾಲೂಕು ಮಟ್ಟದ ಆಸ್ಪತ್ರೆಗಳನ್ನು ಹಾಗೂ ದಾವಣಗೆರೆ ಜಿಲ್ಲಾ ಆಸ್ಪತ್ರೆ ಮತ್ತು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗಳ ನವೀಕರಣ ಕಾಮಗಾರಿಗಳನ್ನು ಒಟ್ಟು 542 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ.

ಆದಿವಾಸಿ ಗೃಹಭಾಗ್ಯ ಯೋಜನೆ: ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಹಾಗೂ ಅರಣ್ಯಾಧಾರಿತ ಸೂಕ್ಷ್ಮ ಸಮುದಾಯಗಳ 6,856 ವಸತಿ ರಹಿತ ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ಒಪ್ಪಿಗೆ ನೀಡಿದೆ. ಸೋಲಿಗ, ಹಸಲರು, ಗೌಡಲು, ಸಿದ್ಧಿ, ಕುಡಿಯ, ಮಲೆಕುಡಿಯ, ಕಾಡುಕುರುಬ, ಇರುಳಿಗ, ಬೆಟ್ಟ ಕುರುಬ, ಮತ್ತು ಪಣಿಯನ್ ಸಮುದಾಯಗಳಿಗೆ ಸೇರಿದ ಈ ಕುಟುಂಬಗಳಿಗಾಗಿ ರೂ.160 ಕೋಟಿ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಲು ಅನುಮೋದನೆ ದೊರೆತಿದೆ. ಈ ಮಹತ್ವಾಕಾಂಕ್ಷಿ ಯೋಜನೆಗೆ 'ಮುಖ್ಯಮಂತ್ರಿಗಳ ಆದಿವಾಸಿ ಗೃಹ ಭಾಗ್ಯ ಯೋಜನೆ' ಎಂದು ಹೆಸರಿಸಲಾಗಿದೆ. ■ 6ನೇ ಪುಟಕ್ಕೆ

ಲಕ್ಷ ಲಕ್ಷ ಪರಿಹಾರದ ಆಸೆಗೆ ತಾನೇ ಗಂಡನ ಕೊಂದು ಹುಲಿ ಕೊಂದ ಕತೆ ಕಟ್ಟಿದ ಖತರ್ನಾಕ್ ಹೆಂಡತಿ!

ಮಹಿಳೆ ಮಾತಿಗೆ ಬೇಸ್ತು ಬಿದ್ದು ಹುಲಿ, ವ್ಯಕ್ತಿಯ ದೇಹವನ್ನು ಶೋಧಿಸಿದ ಪೊಲೀಸ್, ಅರಣ್ಯ ಸಿಬ್ಬಂದಿ


ಸಲ್ಲಾಪುರಿ


ವೆಂಕಟಸ್ವಾಮಿ

ಮೈಸೂರು, ಸೆ.11(ಆರ್‌ಕೆ)– ಹೊಟ್ಟೆಪಾಡಿಗಾಗಿ ಮಂಡ್ಯ ಜಿಲ್ಲೆ ಹಲಗೂರು ಹೋಬಳಿ ಕದಂಪುರ ಗ್ರಾಮದಿಂದ ಬಂದು, ಹುಣಸೂರು ತಾಲೂಕು ಚಿಕ್ಕ ಹೆಜ್ಜೂರು ಗ್ರಾಮದ ಅಡಿಕೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ಬಡ ದಂಪತಿ ವೆಂಕಟಸ್ವಾಮಿ(45) ಮತ್ತು ಸಲ್ಲಾಪುರಿ.

ಈ ಅಡಿಕೆ ತೋಟ ಬೆಂಗಳೂರಿನ ಸಿವಿಲ್ ಎಂಜಿನಿಯರ್‌ಗಳಾದ ರವಿಕುಮಾರ್ ಮತ್ತು ಅರುಣ್‌ಕುಮಾರ್ ಅವರ ಮಾಲೀಕತ್ವದ್ದು. ಇಲ್ಲಿ ಕೆಲಸ ಮಾಡಿಕೊಂಡು, ಇಲ್ಲಿಯೇ ವಾಸವಿದ್ದ ಈ ದಂಪತಿ ಪೈಕಿ ಕಳೆದ ಸೋಮವಾರ ಮಧ್ಯರಾತ್ರಿ ಹುಲಿ ಘರ್ಜನೆ ಕೇಳಿ ಮನೆಯಿಂದ ಹೊರಬಂದ ಪತಿ ವೆಂಕಟಸ್ವಾಮಿ ನಾಪತ್ತೆ.

ತೀವ್ರ ಆತಂಕಗೊಂಡ ಪತ್ನಿ ಸಲ್ಲಾಪುರಿ, ಮಂಗಳವಾರ ಸಂಜೆ ಹುಣಸೂರು ಗ್ರಾಮಾಂತರ ಠಾಣೆಗೆ ತೆರಳಿ ತನ್ನ ಪತಿ ನಾಪತ್ತೆಯಾಗಿದ್ದಾನೆ ಎಂದು ಇನ್ಸ್‌ಪೆಕ್ಟರ್ ಮುನಿಯಪ್ಪ ಅವರಿಗೆ ದೂರು ಸಲ್ಲಿಸಿದ್ದಾಳೆ. ಆಕೆ ತನ್ನ ದೂರಿನಲ್ಲಿ, ಸೋಮವಾರ ಮಧ್ಯರಾತ್ರಿ ಮನೆಯ ಹೊರಗೆ ಹುಲಿ ಘರ್ಜನೆ ಕೇಳಿಸಿತು. ಆಗ ಪತಿ ವೆಂಕಟಸ್ವಾಮಿ ಎದ್ದು, ಮನೆ ಬಾಗಿಲು ಹಾಕಿಕೋ ಎಂದು ತಿಳಿಸಿ, ಹೊರ ಹೋದರು. ಅವರು ಇದುವರೆಗೂ ವಾಪಸ್ ಬಂದಿಲ್ಲ. ಅವರನ್ನು ಹುಲಿ ಹೊತ್ತೊಯ್ದಿರಬಹುದು ಎಂದು ಅನುಮಾನ ವ್ಯಕ್ತಪಡಿಸಿದಳು.

ದಿನವಿಡೀ ಕೂಂಬಿಂಗ್: ವೆಂಕಟಸ್ವಾಮಿಯನ್ನು ಹುಲಿ ಹೊತ್ತೊಯ್ದಿರಬಹುದು ಎಂದಾಗ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿದ ಇನ್ಸ್‌ಪೆಕ್ಟರ್ ಮುನಿಯಪ್ಪ, ತಕ್ಷಣವೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಮಂಗಳವಾರ ರಾತ್ರಿಯಿಂದಲೇ ಹುಲಿ ಹಾಗೂ ವೆಂಕಟಸ್ವಾಮಿಗಾಗಿ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಲಾಯಿತು. ಬುಧವಾರ ಸಂಜೆವರೆವಿಗೂ ಅಡಿಕೆ ತೋಟ ಹಾಗೂ ಸುಮಾರು 3 ಕಿ.ಮೀ. ಸುತ್ತಳತೆಯಲ್ಲಿ ಅರಣ್ಯ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿ ಕೂಂಬಿಂಗ್ ನಡೆಸಿದರೂ ಯಾವುದೇ ಕುರುಹು ದೊರೆಯಲಿಲ್ಲ.

ಹುಲಿ ಇರಲಿ, ನಾಪತ್ತೆಯಾದ ವೆಂಕಟಸ್ವಾಮಿ ಮೃತದೇಹವಿರಲಿ, ಅಡಿಕೆ ತೋಟಕ್ಕೆ ಯಾವುದೇ ವನ್ಯಜೀವಿ ಬಂದು ಹೋಗಿರುವುದರ ಕುರುಹು ಸಿಗಲಿಲ್ಲ. ಸೋಮವಾರ ಮಳೆ ಬಿದ್ದಿದ್ದರಿಂದ ಯಾವುದೇ ವನ್ಯಜೀವಿ ಅಡಿಕೆ ತೋಟಕ್ಕೆ ಬಂದಿದ್ದರೂ, ಅದರ ಹೆಜ್ಜೆ ಗುರುತು ಇರಲೇಬೇಕಿತ್ತು. ಅಂತಹ ಯಾವುದೇ ಗುರುತು ಪತ್ತೆಯಾಗಲಿಲ್ಲ.

ಆದರೆ ಇದ್ದಕ್ಕಿದ್ದಂತೆ ಸಲ್ಲಾಪುರಿ ಆನೆ ಹೆಜ್ಜೆ ಗುರುತನ್ನು ತೋರಿಸಿ ಆನೆ ಬಂದಿರಬಹುದು ಎಂದು ಹೇಳಿದ್ದಾಳೆ. ಆದರೆ ಅಷ್ಟರಲ್ಲಾಗಲೇ ತೋಟಕ್ಕೆ ಬಂದಿದ್ದ ಅದರ ಮಾಲೀಕರು, ನಮ್ಮ ತೋಟಕ್ಕೆ ಸುಮಾರು ಎರಡು ತಿಂಗಳ ಹಿಂದೆ ಆನೆ ಬಂದಿತ್ತು ನಂತರ ಯಾವುದೇ ಆನೆ ಬಂದಿಲ್ಲ ಎಂದರು. ಅದೇ ವೇಳೆ ಅರಣ್ಯ ಇಲಾಖೆ ಸಿಬ್ಬಂದಿಯೂ ಈ ಆನೆ ಹೆಜ್ಜೆ ಗುರುತು ಬಹಳ ಹಳೆಯದು ಎಂಬುದನ್ನು ಖಚಿತಪಡಿಸಿದರು.

ಮನೆಯಿಂದ ತಿಪ್ಪೇಗುಂಡಿವರೆಗೆ ಏನೋ ಎಳೆದೊಯ್ದ ಗುರುತು: ಮಂಗಳವಾರ ರಾತ್ರಿಯಿಂದ ಬುಧವಾರ ಸಂಜೆವರೆಗೆ ಅಡಿಕೆ ತೋಟಕ್ಕೆ ಹೊಂದಿಕೊಂಡಿರುವ ಕಾಡಿನಲ್ಲಿ ಅಲೆದು ಸುಸ್ತಾಗಿದ್ದ ಅರಣ್ಯ ಹಾಗೂ ಪೊಲೀಸ್ ಸಿಬ್ಬಂದಿ ತೋಟದ ಮನೆ ಬಳಿ ಬಂದಾಗ ಮನೆಯಿಂದ ■ 6ನೇ ಪುಟಕ್ಕೆ

ಖಾಕಿ ಸರ್ಪಗಾವಲು: ಸಹಜ ಸ್ಥಿತಿಯತ್ತ ಮದ್ದೂರು

- ಉಳಿದ ಏಳು ಆರೋಪಿಗಳ ಬಂಧನಕ್ಕೆ ಮೂರು ತಂಡ ರಚನೆ
- ಶೀಘ್ರವೇ ಬಂಧಿತ ಆರೋಪಿಗಳು ಪೊಲೀಸ್ ಕಸ್ಟಡಿಗೆ



ಮದ್ದೂರು, ಸೆ.11– ಗಣೇಶಮೂರ್ತಿ ವಿಸರ್ಜನೆ ವೇಳೆ ಸಂಭವಿಸಿದ್ದ ಕಲ್ಲು ತೂರಾಟ ಹಾಗೂ ಪ್ರತಿಭಟನೆ ವೇಳೆ ನಡೆದಿದ್ದ ಲಾಠಿ ಚಾರ್ಜ್‌ನಿಂದ ಪ್ರಕ್ಷುಬ್ಧಗೊಂಡಿದ್ದ ಮಂಡ್ಯ ಜಿಲ್ಲೆಯ ಮದ್ದೂರು ನಗರ ಇದೀಗ ಸಹಜ ಸ್ಥಿತಿಗೆ ಮರಳಿದ್ದು, ಆಯಕಟ್ಟಿನ ಪ್ರದೇಶದಲ್ಲಿ ಪೊಲೀಸ್ ಭದ್ರತೆ ಮುಂದುವರೆದಿದೆ.

ಸೋಮವಾರದಿಂದ ಮೂರು ದಿನಗಳ ಕಾಲ ಸ್ವಯಂಪ್ರೇರಿತ ಬಂದ್ ಆಚರಿಸಿದ್ದ ಅಂಗಡಿ, ಮುಂಗಟ್ಟುಗಳು ಹಾಗೂ ವರ್ತಕರು ಇಂದು ಎಂದಿನಂತೆ ವ್ಯಾಪಾರ ಮತ್ತು ವಹಿವಾಟು ನಡೆಸಿದರು. ಮೂರು ದಿನ ಬಂದ್‌ನಿಂದ ಸಂಪೂರ್ಣ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ವ್ಯಾಪಾರ ವಹಿವಾಟು ನಿಲ್ಲಿಸಿ ಹೋರಾಟಕ್ಕೆ ಬೆಂಬಲ ನೀಡಿದ್ದರು. ಇಂದು ಬೆಳಿಗ್ಗೆಯಿಂದಲೇ ಅಂಗಡಿ ತೆರೆದು ವ್ಯಾಪಾರ ಶುರು ಮಾಡಿದರು.

ಭಾನುವಾರ ರಾತ್ರಿ ಗಣೇಶ ಮೆರವಣಿಗೆ ಮೇಲೆ ಕಲ್ಲು ಎಸೆತವಾಗಿತ್ತು. ನಗರದ ರಾಮ್ ರಹೀಮ್ ನಗರದ ಮಸೀದಿ ಮುಂಭಾಗ ದುಷ್ಕೃತ್ಯ ನಡೆದಿದ್ದರಿಂದ ಘಟನೆ ಖಂಡಿಸಿ, ಸೋಮವಾರ ಹಿಂದು ಪರ ಕಾರ್ಯಕರ್ತರಿಂದ ಬೃಹತ್ ಪ್ರತಿಭಟನೆ ನಡೆದಿತ್ತು. ಮಂಗಳವಾರ ಸ್ವಯಂಪ್ರೇರಿತ ಬಂದ್ ನಡೆಸಲಾಗಿತ್ತು. ಇನ್ನು ನಿನ್ನೆ ಬುಧವಾರ ಸಾಮೂಹಿಕ ಗಣೇಶ ವಿಸರ್ಜನಾ ಮೆರವಣಿಗೆ ಹಿನ್ನೆಲೆಯಲ್ಲಿ ಮೂರು ದಿನವೂ ವ್ಯಾಪಾರ ವಹಿವಾಟು ಸ್ಥಗಿತಗೊಂಡಿತ್ತು.

ಸಹಜ ಸ್ಥಿತಿಗೆ ಮರಳುತ್ತಿದ್ದರೂ ಪೊಲೀಸ್ ಭದ್ರತೆ: ಮುಂಜಾಗ್ರತಾ ಕ್ರಮವಾಗಿ ನಗರದಾದ್ಯಂತ ಭದ್ರತೆ ಮುಂದುವರೆಸಿದ ಪೊಲೀಸ್ ಇಲಾಖೆ, ಕಲ್ಲು ಎಸೆತವಾಗಿದ್ದ ಮಸೀದಿ ಸೇರಿದಂತೆ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸರ ನಿಯೋಜನೆ ಮಾಡಲಾಗಿತ್ತು. ಮಸೀದಿ, ದರ್ಗಾದ ಬಳಿ ಪೊಲೀಸ್ ಭದ್ರತೆ ಇತ್ತು ಸಾಮೂಹಿಕ ಗಣೇಶ ವಿಸರ್ಜನೆಯಿಂದ ಕೊಂಚ ಆತಂಕ ದೂರವಾಗಿದ್ದರೂ ಇನ್ನು ಪಟ್ಟಣದಲ್ಲಿ ಹಲವು ಗಣಪತಿಗಳ ವಿಸರ್ಜನೆ ಬಾಕಿ ■ 6ನೇ ಪುಟಕ್ಕೆ

ಪ್ರಚೋದನಾಕಾರಿ ಭಾಷಣ: ಸಿ.ಟಿ.ರವಿ ವಿರುದ್ಧ ಎಫ್‌ಐಆರ್

ಲಾಠಿ ಏಟು ತಿಂದಿದ್ದ ಜ್ಯೋತಿ ವಿರುದ್ಧವೂ ಸುಮೊಟೊ ಕೇಸು ದಾಖಲು


ಸಿ.ಟಿ. ರವಿ

ಮದ್ದೂರು, ಸೆ.11– ಪ್ರಚೋದನಾಕಾರಿ ಭಾಷಣ ಮಾಡಿದ ಆರೋಪದ ಮೇಲೆ ವಿಧಾನಪರಿಷತ್ ಸದಸ್ಯ ಹಾಗೂ ಬಿಜೆಪಿ ಮುಖಂಡ ಸಿ.ಟಿ. ರವಿ ವಿರುದ್ಧ ಮದ್ದೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲು ಮಾಡಲಾಗಿದೆ.

ನಿನ್ನೆ ಮದ್ದೂರಿನಲ್ಲಿ ನಡೆದ ಸಾಮೂಹಿಕ ಗಣಪತಿ ವಿಸರ್ಜನೆ ಹಾಗೂ ಬಿಜೆಪಿಯ ಶೋಭಾಯಾತ್ರೆ ಸಂದರ್ಭದಲ್ಲಿ ನೆರೆದಿದ್ದ ಹಿಂದೂಪರ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ್ದ ಸಿ.ಟಿ. ರವಿ, ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆ ಎಂದು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ್ ದೂರಿನ ಅನ್ವಯ ಸುಮೊಟೊ ಪ್ರಕರಣ ದಾಖಲಾಗಿದೆ.

ದೂರಿನ ಸಾರಾಂಶ: ಸಿ.ಟಿ.ರವಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಜನರನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದ ಸಮಯದಲ್ಲಿ ಶೇ.5 ಇದ್ದಾಗಲೇ ಬಾಲ ಬಿಚ್ಚುತ್ತಿದ್ದಾರೆ. ಇನ್ನೂ ಶೇ.50 ರಷ್ಟು ಆದಲ್ಲಿ ನಮ್ಮ ಮಕ್ಕಳು, ಮೊಮ್ಮಕ್ಕಳು ಬದುಕುವುದಕ್ಕೆ ಆಗುತ್ತಾ, ಸಮಾಜ ಒಡೆಯುತ್ತಾರೆ. ಕೆಲವು ಕುತಂತ್ರಿಗಳು ಓಟಿನ ಆಸೆಗಾಗಿ ಹಿಂದೂ ಸಮಾಜವನ್ನು ಒಡೆಯುತ್ತಿದ್ದಾರೆ ಎಂದಿದ್ದರು.

ಮುಸಲ್ಮಾನರು ಪಾಕಿಸ್ತಾನ ಜಿಂದಾಬಾದ್ ಅಂದರು, ಬಾಯ್ ಹಾಕಿದ್ರೂ ಎಸ್‌ಎಸ್ ಅಂತಾರೆ. ಮುಸಲ್ಮಾನರು ರಾಮಮಂದಿರದಲ್ಲಿ ಪೆಟ್ರೋಲ್ ಬಾಂಬ್ ಹಾಕಿ ದ್ದಾಗಲೇ ಇವರಿಗೆ ಬುದ್ಧಿ ಕಲಿಸ ಬೇಕಾಗಿತ್ತು. ಈಗ ಈ ರೀತಿ ಆಗುತ್ತಿರಲಿಲ್ಲ ನೀವು ಹೊರಗಡೆಯಿಂದ ಬಂದ ವರು, ನಾವು ಇಲ್ಲೇ ಇರುವವರು. ತೊಡೆ ತಟ್ಟೋ ಕೆಲಸ ಮಾಡಬೇಡಿ. ತೊಡೆ ಮುರಿತೀವಿ. ■ 6ನೇ ಪುಟಕ್ಕೆ

ಕಾಡಾನೆ ದಾಳಿಗೆ ಅರಣ್ಯ ಸಿಬ್ಬಂದಿ ಸಾವು



ಹೆಚ್.ಡಿ.ಕೋಟೆ, ಸೆ.11– ಕಾಡಾನೆ ದಾಳಿಗೆ ಅರಣ್ಯ ಸಿಬ್ಬಂದಿ ಬಲಿಯಾಗಿರುವ ಘಟನೆ ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಡಿ.ಬಿ.ಕುಪ್ಪೆ ಅರಣ್ಯ ವಲಯದಲ್ಲಿ ಗುರುವಾರ ನಡೆದಿದೆ.

ತಾಲೂಕಿನ ಮಾನಿಮೂಲೆ ಹಾಡಿ ನಿವಾಸಿ ಟಿ.ರಾಜು (45) ಕಾಡಾನೆ ದಾಳಿಯಿಂದ ಸಾವನ್ನಪ್ಪಿದವರು. ಗುರುವಾರ ಬೆಳಗ್ಗೆ 11 ಗಂಟೆ ಸಮಯದಲ್ಲಿ ಅರಣ್ಯ ವೀಕ್ಷಕರಾದ ಹರೀಶ್, ರಾಜು, ಟಿ.ರಾಜು ಅವರು ಡಿ.ಬಿ.ಕುಪ್ಪೆ ಅರಣ್ಯ ವಲಯದ ಕುದುರೆ ಸತ್ತಳ್ಳ ಬೀಟ್‌ನ ಬಸಪ್ಪನ ಸರ್ಕಲ್ ವ್ಯಾಪ್ತಿಯಲ್ಲಿ ಗಸ್ತಿನಲ್ಲಿದ್ದ ವೇಳೆ ಮರಿ ಆನೆಗಳ ಜೊತೆ ಇದ್ದ ಸಲಗ ಏಕಾಏಕಿ ದಾಳಿ ನಡೆಸಿದೆ. ಈ ವೇಳೆ ಮೂವರು ದಿಕ್ಕಾಪಾಲಾಗಿ ಓಡಿದರಾದರೂ, ಟಿ.ರಾಜು ಅವರನ್ನು ಬೆನ್ನಟ್ಟಿ ತನ್ನ ಸೊಂಡಿಲಿನಿಂದ ಕೆಳಗೆ ಬೀಳಿಸಿದೆ. ಪರಿಣಾಮ ತೀವ್ರ ಗಾಯಗೊಂಡ ರಾಜು ಅವರ ಮೂಗಿನಿಂದ ರಕ್ತಸ್ರಾವವಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಟಿ.ರಾಜು ಜೊತೆಯಲ್ಲಿದ್ದ ಮತ್ತಿಬ್ಬರು ಅರಣ್ಯ ವೀಕ್ಷಕರಾದ ಹರೀಶ್, ರಾಜು ಪ್ರಾಣಾಪಾಯದಿಂದ ಪಾರಾಗಿದ್ದು, ■ 6ನೇ ಪುಟಕ್ಕೆ

ಹಾಡು, ನೃತ್ಯದ ಮೂಲಕ ನಾಡು–ನುಡಿಯ ವೈಭವ ಅನಾವರಣ

ನೆರೆದಿದ್ದ ಸಾವಿರಾರು ಪ್ರೇಕ್ಷಕರಿಂದ 'ಯುವ ಸಂಭ್ರಮ' ಮಸ್ತ್ ಮಜಾ!


ಪರಿಸರ ಸಂರಕ್ಷಣೆ ಕುರಿತು ನೃತ್ಯ ಪ್ರದರ್ಶಿಸಿದ ಜ್ಞಾನಸರೋವರ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು.

> ಸುಂದರವಾದ ಈ ಬಯಲು ರಂಗಮಂದಿರದಲ್ಲಿ ಯುವ ಸಂಭ್ರಮ ಪ್ರಸ್ತುತವಾಗುತ್ತಿರುವುದು ಸಂತೋಷದ ವಿಷಯ. ದಸರಾ ಮುಂಚೆ ಯುವ ಸಂಭ್ರಮ ಆಚರಿಸುವುದು ಪದ್ಧತಿಯೇ ಆಗಿ ಹೋಗಿದೆ. ಬಹಳ ಉತ್ಸಾಹದಿಂದ ಯುವ ಸಮೂಹ ಸೇರಿದೆ. ಈ ಕಲಾತಂಡಗಳ ಪ್ರದರ್ಶನ ನಮ್ಮ ಪರಂಪರೆ ಸಾರಲು ವೇದಿಕೆಯಾಗಿದೆ. ಎಲ್ಲರ ಮೇಲೂ ಚಾಮುಂಡಿ ತಾಯಿಯ ಆಶೀರ್ವಾದವಿರಲಿ
> -ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದರು.


ಪೂಜಾ ಕುಣಿತ ನೃತ್ಯ ಪ್ರದರ್ಶಿಸಿದ ಡಾ.ಜಿ.ಮಾದೇಗೌಡ ಕಾಲೇಜ್ ಆಫ್ ಎಕ್ಸ್‌ಲೆನ್ಸ್ ವಿದ್ಯಾರ್ಥಿನಿಯರು.

ಮೈಸೂರು, ಸೆ.11(ವಿವಿಹೆಚ್)– ಕನ್ನಡ ಸಂಭ್ರಮ, ಹಳೆ ಮೈಸೂರು ಭಾಗದ ಜಾನಪದ ಝೇಂಕಾರ, ಪಾಶ್ಚಿಮಾತ್ಯ ಕಲಾಪ್ರಕಾರಗಳ ರಮಣೀಯ ನೃತ್ಯ, ಅರ್ಜುನ ಆನೆ ಸ್ಮರಣೆ, ಅಪ್ಪು ನೆನಪು, ಯುವಕ–ಯುವತಿಯರ ಟಪಾಂಗುಚ್ಚಿ.... ಮೈಸೂರು ದಸರಾ ಮಹೋತ್ಸವದ 'ಯುವ ಸಂಭ್ರಮ'ದ ಎರಡನೇ ದಿನ ಇಂತಹ ಹತ್ತು ಹಲವು ವೈವಿಧ್ಯಮಯ ಕಾರ್ಯಕ್ರಮಗಳು ಪ್ರಸ್ತುತಗೊಳ್ಳುವ ಮೂಲಕ ವೈವಿಧ್ಯತೆಯ ಸಂಸ್ಕೃತಿಗಳ ಅನಾವರಣಕ್ಕೆ ವೇದಿಕೆಯಾಗಿತ್ತು.

ಮಾನಸ ಗಂಗೋತ್ರಿ ಬಯಲು ರಂಗಮಂದಿರಲ್ಲಿ ನೆರೆದಿದ್ದ ಅಪಾರ ಪ್ರೇಕ್ಷಕರಿಗೆ ಹಾಡು, ನೃತ್ಯಗಳೊಂದಿಗೆ ಕನ್ನಡ ನಾಡು–ನುಡಿ, ಜಾನಪದ ಕಲೆ, ಸಂಸ್ಕೃತಿ, ಪರಿಸರ ಸಂರಕ್ಷಣೆ ಬಗ್ಗೆ ಸಂದೇಶ ಸಾರುವ ಘೋಷಣೆಯೂ ಮೊಳಗಿತು.

ಚನ್ನಪಟ್ಟಣದ ಜ್ಞಾನಸರೋವರ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು 'ಪರಿಸರ ಸಂರಕ್ಷಣೆ' ಸಂದೇಶ ಸಾರಿದರೆ, ಮೈಸೂರಿನ ವಿಶ್ವೇಶ್ವರ ನಗರದ ಸರ್ಕಾರಿ ಕೈಗಾರಿಕಾ ಸಂಸ್ಥೆಯ 'ವಿಶೇಷಚೇತನ ಮಕ್ಕಳು' 'ನಮಗೆ ಅನುಕಂಪಬೇಡ ಅವಕಾಶ ಬೇಕು, ನಮ್ಮ ಬದುಕು ನಮ್ಮ ಹಕ್ಕು' ಧ್ಯೇಯ ವಾಕ್ಯದೊಂದಿಗೆ ನೃತ್ಯವನ್ನು ಆರಂಭಿಸಿ 'ನೇತ್ರದಾನ ಮಹಾದಾನ' ಘೋಷಣೆ ಮೊಳಗಿಸಿದರು. ಈ ಮಕ್ಕಳ ನೃತ್ಯಕ್ಕೆ ನೆರೆದಿದ್ದ ಯುವ ಸಮೂಹ ಮೊಬೈಲ್ ಟಾರ್ಚ್ ಬೆಳಗಿಸುವುದರ ಮೂಲಕ ಬೆಂಬಲ ಸೂಚಿಸಿದರು.



ಯುವ ಸಂಭ್ರಮದಲ್ಲಿ ನಟ ರಾಣಾ, ನಟಿ ಪ್ರಿಯಾಂಕ ಆಚಾರ್ ಮಾತಿನ ಮೋಡಿ.

ಮೈಸೂರಿನ ಕಾವೇರಿ ಎಕ್ಸಲೆನ್ಸ್ ಪಿಯು ಕಾಲೇಜು ವಿದ್ಯಾರ್ಥಿಗಳು 'ವಿಜಯನಗರ ಸಾಮ್ರಾಜ್ಯ ಪರಿಕಲ್ಪನೆ' ಬಗ್ಗೆ ನೃತ್ಯ ಮಾಡಿದರೆ, ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಶಾಸ್ತ್ರೀಯ ಕಲೆಗಳನ್ನು ಪರಿಚಯಿಸಿದರು. ಇತ್ತ ಬೆಂಗಳೂರಿನ ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ಕಾಲೇಜು ವಿದ್ಯಾರ್ಥಿಗಳ ವಿಷ್ಣುವಿನ ಹತ್ತು ಅವತಾರಗಳ 'ದಶಾವತಾರಂ' ನೃತ್ಯ ರೂಪಕ ■ 6ನೇ ಪುಟಕ್ಕೆ

ಮೈಸೂರು ಮಿತ್ರ

ಶುಕ್ರವಾರ 12 ಸೆಪ್ಟೆಂಬರ್ 2025

ಮೈಸೂರು ವಿವಿ ಸಿಎಸ್ಆರ್ ಸಂಶೋಧನಾ ಅನುದಾನಗಳ ಗೌರವ ನಿರ್ದೇಶಕರಾಗಿ ಗಿರೀಶ್ ಬಾಗ ನೇಮಕ



ಮೈಸೂರು, ಸೆ.11–ಭಾರತದ ಅತೀ ಹಳೆಯ ಮತ್ತು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಮೈಸೂರು ವಿಶ್ವವಿದ್ಯಾಲಯವು ಗಿರೀಶ್ ಬಾಗ (MBA-ಮಾರ್ಕೆಟಿಂಗ್ ಮತ್ತು ಮಾರಾಟ) ಅವರನ್ನು ಸಿಎಸ್ಆರ್ (ಕಂಪನಿ ಸಾಮಾಜಿಕ ಹೊಣೆಗಾರಿಕೆ) ಹಾಗೂ ಸಂಶೋಧನಾ ಅನುದಾನಗಳ ಗೌರವ ನಿರ್ದೇಶಕರನ್ನಾಗಿ ನೇಮಿಸಿದೆ.

ಈ ಸ್ಥಾನ ಭಾರತದ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಅತ್ಯಂತ ಜವಾಬ್ದಾರಿ ಹಾಗೂ ಗೌರವಯುತವಾದುದು. ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಲೋಕನಾಥ ಅವರ ವಿಶಿಷ್ಟ ಪರಿಕಲ್ಪನೆ ಹಾಗೂ ಕಳಕಳಿಯಿಂದ ರೂಪಿಸಲಾಗಿದೆ. ಅವರ ದೂರದೃಷ್ಟಿಯನ್ವಯ ವಿಶ್ವವಿದ್ಯಾಲಯವು ಕಂಪನಿಗಳು, ಧಾರ್ಮಿಕ/ದಾನಿ ಸಂಸ್ಥೆಗಳು ಹಾಗೂ ರಾಷ್ಟ್ರೀಯ–ಅಂತಾರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳೊಂದಿಗೆ ದೀರ್ಘಕಾಲಿಕ ಸಹಭಾಗಿತ್ವ ಹೊಂದುವಲ್ಲಿ ಮಹತ್ವದ ಹೆಜ್ಜೆಯಿಟ್ಟಿದೆ. ಈ ನೂತನ ಹುದ್ದೆಯು ವಿಶ್ವವಿದ್ಯಾಲಯಕ್ಕೆ ಶೈಕ್ಷಣಿಕ ಶ್ರೇಷ್ಠತೆ, ಆರ್ಥಿಕ ದೃಢತೆ ಹಾಗೂ ಜಾಗತಿಕ ಸ್ಪರ್ಧಾತ್ಮಕತೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಗಿರೀಶ್ ಬಾಗ ಅವರಿಗೆ ಶೈಕ್ಷಣಿಕ ಹಾಗೂ ಇತರೆ ಸಂವಹನ ಕ್ಷೇತ್ರಗಳಲ್ಲಿ 25 ವರ್ಷಗಳಿಗಿಂತ ಹೆಚ್ಚು ಅನುಭವ ವಿದ್ದು, ಬ್ಯಾಂಕಿಂಗ್, ವಿಮೆ, ಶಿಕ್ಷಣ ಹಾಗೂ ಉದ್ಯಮ ಶೀಲತೆಯ ವಿವಿಧ ಕ್ಷೇತ್ರಗಳಲ್ಲಿ ಪ್ರಮುಖ ಸ್ಥಾನಗಳಲ್ಲಿ ಈಗಾಗಲೇ ಸೇವೆ ಸಲ್ಲಿಸಿದ್ದಾರೆ. ಅವರು ಜೆಎಸ್ಎಸ್ ಮಹಾ ವಿದ್ಯಾಪೀಠ ದಲ್ಲಿ ಉಪನಿರ್ದೇಶಕರಾಗಿ 15 ಶೈಕ್ಷಣಿಕ ಸಂಸ್ಥೆಗಳ ನಿರ್ವಹಣೆ ಮಾಡಿದ್ದಾರೆ (17,000ಕ್ಕೂ ಹೆಚ್ಚು ವಿದ್ಯಾರ್ಥಿ ಗಳು ಹಾಗೂ 850 ಸಿಬ್ಬಂದಿ). ಜೊತೆಗೆ ಎಸ್‌ಜೆಸಿಇ, ಮೈಸೂರು ಇಲ್ಲಿ ಸಹ ಪ್ರಾಧ್ಯಾಪಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇಂಡಸ್‌ಇಂಡ್ ಬ್ಯಾಂಕ್, ಐಸಿ ಐಸಿಐ ಪ್ರುಡೆನ್ಶಿಯಲ್, ಐಎನ್‌ಜಿ ವೈಶ್ಯ ಲೈಫ್ ಮತ್ತು ಹೆಚ್‌ಡಿಎಫ್‌ಸಿ ಬ್ಯಾಂಕ್‌ಗಳಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದು, ಬಳಿಕ ಅಥೀನಾ ಎಜುಕೇಶನಲ್ ಸರ್ವಿಸಸ್ ಸಂಸ್ಥೆ ಸ್ಥಾಪಿಸಿದ್ದಾರೆ. ಗಿರೀಶ್ ಬಾಗ ಅವರ ನೇಮಕಾತಿ, ಮೈಸೂರು ವಿವಿಯ ಸಂಶೋಧನೆ ಹಾಗೂ ಸಿಎಸ್ಆರ್ ಸಹಭಾಗಿತ್ವಗಳನ್ನು ಬಲಪಡಿಸುವಲ್ಲಿ ರಾಷ್ಟ್ರದ ಇತರೆ ವಿಶ್ವವಿದ್ಯಾಲಯಗಳಿಗೆ ಮಾದರಿಯಾಗಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.

ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗೆ ವಯೋಮಿತಿ ಏರಿಸಲು ಆಗ್ರಹ

ಕರ್ನಾಟಕ ರಕ್ಷಣಾ ವೇದಿಕೆಯಿಂದ ಮೆರವಣಿಗೆ

ಮೈಸೂರು, ಸೆ.11(ಎಂಕೆ)– ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗೆ ವಯೋಮಿತಿ ಹೆಚ್ಚಳಕ್ಕೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಎಸ್ಸಿ, ಎಸ್ಟಿ, ಒಬಿಸಿಗೆ 27 ರಿಂದ 33 ವರ್ಷಕ್ಕೆ ಹಾಗೂ ಸಾಮಾನ್ಯ ವರ್ಗಕ್ಕೆ 30 ವರ್ಷಗಳವರೆಗೆ ವಯೋಮಿತಿ ಹೆಚ್ಚಿಸುವ ಮೂಲಕ ನಿರುದ್ಯೋಗ ಸಮಸ್ಯೆ ನಿವಾರಿಸಬೇಕು ಎಂದು ಆಗ್ರಹಿಸಲಾಯಿತು.

ವಯೋಮಿತಿಯನ್ನು 27 ರಿಂದ 33 ವರ್ಷಕ್ಕೆ ಏರಿಸುವ ಬಗ್ಗೆ ಗೃಹ ಸಚಿವರಿಗೆ ತಿಳಿಸಿರುವುದಾಗಿ 2024ರ ಸೆಪ್ಟೆಂಬರ್‌ನಲ್ಲಿ ಸಿಎಂ ಮಾಧ್ಯಮ ಹೇಳಿಕೆ ನೀಡಿದ್ದರು. ಅದರಂತೆ ಆಕಾಂಕ್ಷಿಗಳು ಪರೀಕ್ಷೆಗೆ ತಯಾರಿ ನಡೆಸಿದ್ದಾರೆ. ಆದರೆ ಈ ಕುರಿತು ಸರ್ಕಾರ ಆದೇಶ ಹೊರಡಿಸದಿರುವುದು ಆತಂಕ ಮೂಡಿಸಿದೆ ಎಂದರು. ಇತರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ವಯೋಮಿತಿ ಕಡಿಮೆ ಇದೆ. ತೆಲಂಗಾಣದಲ್ಲಿ ಸಾಮಾನ್ಯ ವರ್ಗಕ್ಕೆ ಕನಿಷ್ಠ 18 ವರ್ಷ, ಗರಿಷ್ಠ 31 ವರ್ಷ, ಪರಿಶಿಷ್ಟ ಜಾತಿ, ವರ್ಗ ಹಾಗೂ ಒಬಿಸಿಗೆ 33 ವರ್ಷ ವಯೋಮಿತಿ ಇದೆ. ಆದರೆ ಕರ್ನಾಟಕದಲ್ಲಿ ಸಾಮಾನ್ಯ ವರ್ಗಕ್ಕೆ 25 ಹಾಗೂ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗೆ 27 ವರ್ಷದವರೆಗೆ ವಯೋಮಿತಿ ನಿಗದಿಪಡಿಸಲಾಗಿದೆ. ಇದನ್ನು ಸಾಮಾನ್ಯ ವರ್ಗಕ್ಕೆ 30 ವರ್ಷ ಎಸ್‌ಸಿ, ಎಸ್‌ಟಿಗೆ 33 ವರ್ಷಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು. ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಪ್ರವೀಣ್‌ಕುಮಾರ್, ಚಂದ್ರೇಶ್, ಹೇಮಂತ್‌ಗೌಡ, ಅಸ್ಲಾಂ, ರಘು, ಗಣೇಶ್, ಶಾರದಾ, ದೀಪಾ, ರಾಜೇಶ್ವರಿ, ಹೇಮಲತಾ, ಶಿವು, ಕಾಂತರಾಜ್, ಕಾಂತಕುಮಾರ್, ಪ್ರದೀಪ್ ಮತ್ತಿತರರಿದ್ದರು.



ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗೆ ವಯೋಮಿತಿ ಹೆಚ್ಚಳಕ್ಕೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಇಂದು 'ರಾವಣನ ತಂಗಿ' ಏಕವ್ಯಕ್ತಿ ತಾಳ ಮದ್ದಲೆ

ಮೈಸೂರು, ಸೆ.11–ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್‌ನ ಕನ್ನಡ ಸಂಘದ ವತಿಯಿಂದ ಸೆ.12ರಂದು ಸಂಜೆ 6 ಗಂಟೆಗೆ ಸರಸ್ವತಿಪುರಂನಲ್ಲಿರುವ ರೋಟರಿ ಪಶ್ಚಿಮ ಸಭಾಂಗಣದಲ್ಲಿ 'ರಾವಣನ ತಂಗಿ' ಏಕವ್ಯಕ್ತಿ ತಾಳ ಮದ್ದಲೆಯನ್ನು ಏರ್ಪಡಿಸಲಾಗಿದೆ.

ದೀವಾಕರ್ ಹೆಗ್ಡೆ ಕೆರೆಹೊಂಡ ಪ್ರಸ್ತುತಪಡಿಸಲಿದ್ದಾರೆ. ಅನಂತ ಹೆಗ್ಡೆ ಭಾಗವತರು, ಮದ್ದಲೆಯಲ್ಲಿ ಜಿ.ಎಸ್. ಮಂಜುನಾಥ್ ಸಾಥ್ ನೀಡಲಿದ್ದಾರೆ.

ಅಧ್ಯಕ್ಷತೆಯನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ನ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕ ಕೆ.ರಘುಶೆಟ್ಟಿ ವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಹುಟ್ಟುಹಬ್ಬದ ಶುಭಾಶಯ...



ಮೈಸೂರು ಬಿಜೆಪಿ ನಗರಾಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ ಅವರಿಗೆ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ ಹುಟ್ಟುಹಬ್ಬದ ಶುಭಾಶಯ ಕೋರಿದರು. ಮಾಜಿ ಕಾರ್ಪೋರೇಟರ್ ಎಂ.ಚಿಕ್ಕವೆಂಕಟು, ಎನ್.ಯೋಗಾನಂದ್, ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಟೆನ್ನಿಸ್ ಗೋಪಿ, ತ್ಯಾಗರಾಜ್ ಇನ್ನಿತರರು ಉಪಸ್ಥಿತರಿದ್ದರು.

ಜಾಗತಿಕ ವ್ಯವಸ್ಥೆಗಳಲ್ಲಿ ನ್ಯೂನ್ಯತೆಗಳು; ಯುಪಿಒ ಹೆಸರಲ್ಲಿ ಹೊಸ ವ್ಯವಸ್ಥೆ ಅಗತ್ಯ

ಮೈಸೂರು, ಸೆ.11(ಜಿಎ)–ವಿಶ್ವಸಂಸ್ಥೆ ಸೇರಿದಂತೆ ಮೊದಲಾದ ಜಾಗತಿಕ ವ್ಯವಸ್ಥೆಯ ಸಂಸ್ಥೆಗಳಲ್ಲಿ ಕೆಲವೊಂದು ನ್ಯೂನತೆಗಳಿವೆ. ಹೀಗಾಗಿ ಹೊಸದಾದ ಮತ್ತೊಂದು ವ್ಯವಸ್ಥೆ ಅಗತ್ಯವಿದ್ದು, ಈ ಕುರಿತ ತಮ್ಮ ಪರಿಕಲ್ಪನೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ದೊರೆತಿದೆ ಎಂದು ತಿ.ನರಸೀಪುರ ಮೂಲದ ಮಾಜಿ ಪೊಲೀಸ್ ಪೇದೆ ಹಾಗೂ ರಾಜಕೀಯ ವಿಷಯ ಲೇಖಕ ಮಿಟ್ ಮೀಗೈನ್ ಅದ್ವೈತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತದಲ್ಲಿ ಪರ್ಯಾಯವಾದ ಜಾಗತಿಕ ವ್ಯವಸ್ಥೆ ಅತ್ಯಗತ್ಯ. ಈಗಿರುವ ವ್ಯವಸ್ಥೆಯನ್ನೇ ಬಹುತೇಕ ರಾಷ್ಟ್ರಗಳು ಅವಲಂಬಿಸಿವೆ. ಪೆಟ್ರೋಲ್, ಡಾಲರ್‌ನಂತಹವು ಇದಕ್ಕೆ ಉದಾಹರಣೆ. ಹೀಗಾಗಿ ಹಲವಾರು ರಾಷ್ಟ್ರಗಳ ಗಡಿ, ಸಂಸ್ಕೃತಿ, ಸ್ವಯಂ ನಿರ್ಣಯ ಮೊದಲಾದವುಗಳ ಮೇಲೆ ಅತಿಕ್ರಮಣ ನಡೆದಿದೆ. ಆದರೆ ತಮ್ಮ ಪರಿಕಲ್ಪನೆಯಲ್ಲಿ ಮತ್ತೊಂದು ಹೊಸ ವ್ಯವಸ್ಥೆಯನ್ನು ಯುಪಿಒ ಹೆಸರಿನಲ್ಲಿ ರಚಿಸಬಹುದಾಗಿದೆ. ಇದರಿಂದಾಗಿ ವ್ಯಾಪಾರ ಜಾಲ ವಿಸ್ತರಿಸುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಎದುರಿಸಬಹುದಾಗಿದೆ. ರಾಷ್ಟ್ರಗಳು ತಮ್ಮನ್ನು ತಾವು ಸ್ವತಂತ್ರವಾಗಿ ಅರಿತುಕೊಳ್ಳಬಹುದಾಗಿದೆ. ಅಧಿಕಾರ ಜನರಿಗೆ ಸೇರುವುದಾಗಿದ್ದು, ಗಣ್ಯರ ಪ್ರಾಬಲ್ಯ ತಪ್ಪುತ್ತದೆ. ಇದೊಂದು ಕ್ರಾಂತಿಕಾರಿ ಪರಿಕಲ್ಪನೆಯಾಗಿದೆ ಎಂದು ವಿವರಿಸಿದರು.

ಶ್ರೀಬೀರೇಶ್ವರ ಶ್ರೀರಾಮಮಂದಿರ ಟ್ರಸ್ಟ್‌ನ ಸಮುದಾಯ ಭವನ ಕಾಮಗಾರಿಗೆ ಚಾಲನೆ

ಮೈಸೂರು,ಸೆ.11(ವಿವಿಹೆಚ್)–ನಗರದ ಶಿವಾಜಿ ರಸ್ತೆಯಲ್ಲಿರುವ ಕುರುಬರ ಶ್ರೀ ಬೀರೇಶ್ವರ ಶ್ರೀ ರಾಮಮಂದಿರ ಟ್ರಸ್ಟ್‌ಗೆ ಸೇರಿದ ಸಮುದಾಯ ಭವನದ ಕಾಮಗಾರಿಯನ್ನು ಶಾಸಕ ತನ್ವೀರ್ ಸೇಠ್ ವೀಕ್ಷಿಸಿದರು.

ಬಳಿಕ ಮಾತನಾಡಿ, ಬೀರೇಶ್ವರ ದೇವಸ್ಥಾನ ಅತ್ಯಂತ ಪುರಾತನ ದೇವಾಲಯವಾಗಿದೆ. ನಮ್ಮ ತಂದೆ ಅಜೀಜ್ ಸೇಠ್ ಅವರು ಸಚಿವರಾಗಿದ್ದ ಕಾಲದಲ್ಲಿ ದೇವಾಲಯದ ಮೂರು ಮಳಿಗೆಗಳ ನಿರ್ಮಾಣಕ್ಕೆ ಅನುದಾನ ನೀಡುವ ಮೂಲಕ ಪೂಜಾ ಕಾರ್ಯಗಳಿಗೆ ಅನುವು ಮಾಡಿ ಕೊಟ್ಟಿದ್ದರು. ನಂತರ ನಾನು ಶಾಸಕನಾದ ಮೇಲೆ ಮತ್ತೆ ನಾಲ್ಕು ಮಳಿಗೆ ಕಟ್ಟಿಸಲು ಅನುದಾನ ನೀಡಿದ್ದೆ, ಸರ್ಕಾರದಿಂದ ದೇವಾಲಯದ ಅಭಿವೃದ್ಧಿಗೆ 3 ಕೋಟಿ ರೂ. ಅನುದಾನಕ್ಕೆ ಬೇಡಿಕೆ ಇಟ್ಟಿದ್ದೆವು. ಆದರೆ, ಸರ್ಕಾರದಿಂದ 30 ಲಕ್ಷ ಮಾತ್ರ ಮಂಜೂರಾಗಿತ್ತು. ದಾನಿಗಳ ನೆರವಿನಿಂದ ಕಾಮಗಾರಿ ಮುಂದುವರಿಸಲಾಗಿತ್ತು. ಇದೀಗ ರಾಜ್ಯ ಸರ್ಕಾರದಿಂದ 2 ಕೋಟಿ ರೂ. ಅನುದಾನ ಮಂಜೂರಾಗಿದ್ದು, ದೇವಾ ಲಯ ಕಾಮಗಾರಿಗೆ ವೇಗ ಸಿಕ್ಕಿರುವುದು ಸಂತಸದ ವಿಷಯವಾಗಿದೆ ಎಂದರು.

ಟ್ರಸ್ಟ್ ಅಧ್ಯಕ್ಷ ಎಂ.ಎನ್.ಮಹದೇವು ಮಾತನಾಡಿ, ಬೀರೇಶ್ವರ ದೇವಾಲಯದ ಅಭಿವೃದ್ಧಿ ಮತ್ತು ಸಮುದಾಯ ಭವನ ನಿರ್ಮಾಣಕ್ಕೆ ಶಾಸಕ ತನ್ವೀರ್ ಸೇಠ್ ಹಾಗೂ ಅವರ ತಂದೆ ಅಜೀಜ್ ಸೇಠ್ ನೀಡಿದ ಸೇವೆ ಮತ್ತು ಸಹಾಯವನ್ನು ನಾವು ಮರೆಯುವುದಿಲ್ಲ.. ಅವರ ಕೆಲಸ ಶಾಶ್ವತವಾಗಿರಲಿದೆ ಎಂದು ಶ್ಲಾಘಿಸಿದರು. ಇದೇ ವೇಳೆ ದೇವಾಲಯದ ವತಿಯಿಂದ ಶಾಸಕ ತನ್ವೀರ್ ಸೇಠ್ ಅವರನ್ನು ಆತ್ಮೀಯವಾಗಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಕೆಪಿಸಿಸಿ ಸಂಯೋಜಕ ಶೌಕತ್ ಅಲಿ ಖಾನ್, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್, ಇಲ್ಯಾಸ್ ಅಹಮದ್ (ಬಾಬು), ಕುರುಬರ ಶ್ರೀ ಬೀರೇಶ್ವರ ಶ್ರೀ ರಾಮಮಂದಿರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎಸ್.ಬಸವರಾಜು, ಉಪಾಧ್ಯಕ್ಷ ಸಿದ್ದಯ್ಯ, ಖಜಾಂಚಿ ಚುಂಚಯ್ಯ, ನಿರ್ದೇಶಕರಾದ ದಾಸಪ್ಪ, ಮಲ್ಲಯ್ಯ, ಗಾಯಿತ್ರಿ ಕರಿಯಪ್ಪ, ಆರ್.ಮಹದೇವು, ನಾಗೇಶ್, ಮಹದೇವು, ದಿನೇಶ್, ರಂಗಸ್ವಾಮಿ ಮತ್ತಿತರರಿದ್ದರು.



ಕುರುಬರ ಸಮುದಾಯ ಭವನದ ಕಾಮಗಾರಿ ವೀಕ್ಷಿಸಿದ ಶಾಸಕ ತನ್ವೀರ್ ಸೇಠ್.

ಪಡುವಾರಹಳ್ಳಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಸರ್ವ ಸದಸ್ಯರ ಮಹಾಸಭೆ



ಮೈಸೂರಿನ ಪಡುವಾರಹಳ್ಳಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಸರ್ವ ಸದಸ್ಯರ ಮಹಾಸಭೆಯು ಭಾನುವಾರ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಸಂಘದ ಅಧ್ಯಕ್ಷ ಎಂ.ಭೈರಪ್ಪ ಅಧ್ಯಕ್ಷತೆಯಲ್ಲಿ ನಡೆಯಿತು. ಈ ವೇಳೆ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕರಾದ ಈ.ಲೋಕೇಶ್ವರ, ಎಂ.ಸೋಮಣ್ಣ, ಟಿ.ಸೋಮು, ಚಂದ್ರಶೇಖರ್, ರಾಘವ್ ಗೌಡ, ಎಸ್.ಕೃಷ್ಣ ಕುಮಾರ್, ಬಿ.ಕುಮಾರ್, ಮಹಾಲಕ್ಷ್ಮಿ, ಲಕ್ಷಮ್ಮ, ಕೆ.ಸುರೇಶ್, ಪ್ರದೀಪ್‌ನಾಯಕ, ಕಾರ್ಯದರ್ಶಿ ಪ್ರಕಾಶ್ ಇನ್ನಿತರರಿದ್ದರು.

ನಾಳೆ ಸ್ವಾತಂತ್ರ್ಯ ಹೋರಾಟಗಾರ ಸುಬ್ಬಣ್ಣನವರ 34ನೇ ವರ್ಷದ ಸಂಸ್ಮರಣೆ ಕಾರ್ಯಕ್ರಮ



ಮೈಸೂರು, ಸೆ.11(ಜಿಎ)– ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ ವತಿಯಿಂದ ಸೆ.13ರಂದು ಸಂಸ್ಥೆಯ ಸಂಸ್ಥಾಪಕ, ಸ್ವಾತಂತ್ರ್ಯ ಹೋರಾಟಗಾರರಾದ ಟಿ.ಎಸ್.ಸುಬ್ಬಣ್ಣನವರ 34ನೇ ವರ್ಷದ ಸಂಸ್ಮರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಪ್ರೊ.ಜಿ.ಸಿ.ರಾಜಣ್ಣ ಈ ವಿಷಯ ತಿಳಿಸಿ, ಸಂಸ್ಥೆಯ ಆವರಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಡೆಯಲಿರುವ ಕಾರ್ಯಕ್ರಮವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸುವರು. ಹಿರಿಯ ವಿದ್ಯಾರ್ಥಿಗಳ ಸಂಘವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸುವರು. ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ರಂಗನಾಥಯ್ಯ ನುಡಿನಮನ ಸಲ್ಲಿಸುವರು. ಕೆಪಿಎ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಖಜಾಂಚಿ ಡಾ.ಪಿ.ಎನ್.ಹರೀಶ್, ಧರ್ಮದರ್ಶಿಗಳಾದ ಬಿ.ಸುವರ್ಣದೇವಿ, ಪ್ರೊ.ಹೆಚ್.ಎಂ.ವಸಂತಮ್ಮ ಉಪಸ್ಥಿತರಿದ್ದರು.

ನಾಳೆ ವರುಣ ಕೆರೆ ಬಳಿ ಡಾ.ಶಿವರಾತ್ರಿ ರಾಜೇಂದ್ರ ಅನುಭವ ಮಂಟಪ ಉದ್ಘಾಟನೆ



ಮೈಸೂರು, ಸೆ.11(ಜಿಎ)– ಮೈಸೂರಿನ ತಿ.ನರಸೀಪುರ ರಸ್ತೆಯ ವರುಣ ಕೆರೆಯ ಪೂರ್ವ ದಿಕ್ಕಿನ ಡಾ.ಶಿವರಾತ್ರಿ ರಾಜೇಂದ್ರ ನಗರದಲ್ಲಿ ನಿರ್ಮಿಸಿರುವ ಡಾ.ಶಿವರಾತ್ರಿ ರಾಜೇಂದ್ರ ಅನುಭವ ಮಂಟಪ ಸಭಾಂಗಣ, ಸಂಘದ ಕಚೇರಿ ಉದ್ಘಾಟನೆಯ ಸಮಾರಂಭವನ್ನು ಸೆ.13ರಂದು ಬೆಳಗ್ಗೆ 11ಕ್ಕೆ ಆಯೋಜಿಸಲಾಗಿದೆ ಎಂದು ನಿವೃತ್ತ ಡಿಜಿಪಿ ಎಲ್.ರೇವಣ್ಣ ಸಿದ್ದಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಾ.ಶಿವರಾತ್ರಿ ರಾಜೇಂದ್ರ ಅನುಭವ ಮಂಟಪವನ್ನು ಉದ್ಘಾಟಿಸಲಿದ್ದಾರೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಸಂಘದ ಕಚೇರಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಸಂಸದರಾದ ಸುನೀಲ್ ಬೋಸ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಮಂಟಪವನ್ನು ಸುಮಾರು 7.5 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಗಣಪತಿ ದೇವಸ್ಥಾನ, ಸಭಾಂಗಣ, ಕೊಠಡಿಗಳು, ಅತ್ಯುತ್ತಮ ಗುಣಮಟ್ಟದ ಧ್ವನಿವರ್ಧಕ ವ್ಯವಸ್ಥೆ, ಲಿಫ್ಟ್, ಪಾಕಶಾಲೆ, ಭೋಜನ ಶಾಲೆ ಮೊದಲಾದವು ಇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಂಘದ ಪದಾಧಿಕಾರಿಗಳಾದ ಪ್ರೊ.ಸುಬ್ಬಯ್ಯ, ಮಲ್ಲಿಕಾರ್ಜುನಸ್ವಾಮಿ, ರಾಜಶೇಖರ ಮೂರ್ತಿ ಮತ್ತಿತರರಿದ್ದರು.

ನಿಧನ


ಲಾರೆನ್ಸ್ ಮೆನೆಜೆಸ್



ಮೈಸೂರು, ಸೆ. 11– ಮೈಸೂರಿನ ಬಿ.ಎಂ.ಶ್ರೀನಗರ ನಿವಾಸಿ ಲಾರೆನ್ಸ್ ಮೆನೆಜೆಸ್ (73) ಗುರುವಾರ ಮುಂಜಾನೆ ಬೆಂಗಳೂರಿನಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರರು– ಫಾ. ನೆಲ್ಸನ್ ಮೆನೆಜೆಸ್ ಮತ್ತು ನವೀನ್ ಮೆನೆಜೆಸ್, ಸಹೋದರ ಡಾ.ವಿಕ್ಟರ್ ಮೆನೆಜೆಸ್ ಸೇರಿದಂತೆ ಸ್ನೇಹಿತರು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ನಾಳೆ (ಸೆ.12) ಬೆಂಗಳೂರಿನ ಇಂದಿರಾನಗರದ ಸಿಮೆಟ್ರಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಕೆ.ಶ್ರೀಧರ್



ಮೈಸೂರಿನ ಜನತಾನಗರದ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ ಮತ್ತು ಕುವೆಂಪುನಗರದ ಗಣಪತಿ ದೇವಸ್ಥಾನದ ಅರ್ಚಕರಾದ ಕೆ.ಶ್ರೀಧರ್ (64) ಬುಧವಾರ ಬೆಳಗ್ಗೆ ನಿಧನರಾದರು.


ಶ್ರೀರಾಂಪುರದ ಎಲ್‌ಐಸಿ ಬಡಾವಣೆ ನಿವಾಸಿಯಾದ ಇವರು, ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಗುರುವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್. ಉದಯರವಿ ಪ್ರಕಾಶ್



ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಾಣಿಜ್ಯಶಾಸ್ತ್ರ ಉಪನ್ಯಾಸಕ, ದಟ್ಟಗಳ್ಳಿ ನ್ಯಾಯಾಂಗ ಬಡಾವಣೆ ನಿವಾಸಿ ಕೆ.ಆರ್.ಉದಯರವಿ ಪ್ರಕಾಶ್ (59) ಇಂದು ನಿಧನರಾದರು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ), ಮೈಸೂರು ನಗರ ಅಧ್ಯಕ್ಷರು, ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಮೃತರು ಪತ್ನಿ ಇಂದ್ರಾಣಿ (ಪ್ರಿನ್ಸಿಪಾಲ್, ಸರ್ಕಾರಿ ಪದವಿಪೂರ್ವ ಕಾಲೇಜು, ಹೊಮ್ಮರಗಳ್ಳಿ), ಪುತ್ರ ದುರ್ಗಾ ದರ್ಶನ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಅಳಗಂಚಿಪುರ ಜವನಮ್ಮ



ಸುತ್ತೂರು: ನಂಜನಗೂಡು ತಾಲೂಕಿನ ಅಳಗಂಚಿಪುರ ಗ್ರಾಮದ ಲೇಟ್ ನಂಜೇಗೌಡರ ಪತ್ನಿ ಜವನಮ್ಮ ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಸೆ.12) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.09.2025 ಶುಕ್ರವಾರ, ಮಳೆ ನಕ್ಷತ್ರ: ಪುಬ್ಬ 31.08.2025 ರಿಂದ 13.09.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ :** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತೂಲಾ/ಭಗಂದರ, ನಾಡಿವ್ರಣ, ಫಿಸರ್ ಮತ್ತು ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಶರದ್ ವಿರೇಚನ ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗ್ಯಾಸ್ಟ್ರೈಟಿಸ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ನರುಳಿ ಮತ್ತು ಸೊಂಟ ನೋವಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಸಮನ್ವಯ ಟ್ರಸ್ಟ್ :** ಭರವಸೆಯ ಹೆಜ್ಜೆ ಕಾರ್ಯಕ್ರಮ, ಉಪಸ್ಥಿತರು : ಕರ್ನಾಟಕ ಗೃಹ ಮಂಡಳಿ ಆಯುಕ್ತ ಕೆ.ಎ. ದಯಾನಂದ, ಉದ್ಘಾಟನೆ : ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ದುರ್ಗಪ್ಪ ಅಂಗಡಿ, ಅಂತರರಾಷ್ಟ್ರೀಯ ಈಜುಪಟು ಎನ್.ಎಂ. ಧ್ಯಾನ್ ಕಶ್ಯಪ್, ಯೋಗಪಟು ಪಿ. ಸುಂದರಿಸನ್, ಸ್ಥಳ: ಕಲಾಮಂದಿರ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಇನ್ಸ್‌ಟಿಟ್ಯೂಟ್ ಫಾರ್ ಲಾ ಅಂಡ್ ಪಾರ್ಲಿಮೆಂಟರಿ ರಿಫಾರ್ಮ್, ವಿದ್ಯಾ ವಿಕಾಸ ಇನ್ಸ್‌ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್ :** ಕೃಷಿ ಉತ್ಪನ್ನ ಮಾರುಕಟ್ಟೆ ಕಾನೂನು, ಉದ್ಘಾಟನೆ: ಕಾನೂನು ಸಚಿವ ಹೆಚ್.ಕೆ. ಪಾಟೀಲ್, ಪ್ರಾಸ್ತಾವಿಕ ನುಡಿ : ಕಾನೂನು ಶಿಕ್ಷಣ ಸಲಹೆಗಾರ ಡಾ.ಪಿ. ಈಶ್ವರ ಭಟ್, ಅಧ್ಯಕ್ಷತೆ : ವಿವಿಇಟಿ ಕಾರ್ಯದರ್ಶಿ ವಿ. ಕವೀಶ್‌ಗೌಡ, ಉಪಸ್ಥಿತರು : ಡಾ. ಸಿ.ಎಸ್. ಪಾಟೀಲ್, ಡಾ. ರೇವಯ್ಯ ಒಡೆಯರ್, ಡಾ. ಎಸ್. ನಟರಾಜು, ಸ್ಥಳ: ಲಲಿತಾ ಸ್ಮಾರಕ ಭವನ, ಬೆಳಗ್ಗೆ 10ಕ್ಕೆ

■ **ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಯುವ ರೆಡ್ ಕ್ರಾಸ್, ರೇಂಜರ್ಸ್ ಅಂಡ್ ರೋವರ್ಸ್, ವಿವಿಧ ಸಮಿತಿ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಸಾಹಿತಿ ಪ್ರೊ. ಎಂ. ಕೃಷ್ಣೇಗೌಡ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಪಿ. ಬೆಟ್ಟೇಗೌಡ, ಸ್ಥಳ: ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಜೆಎಸ್ಎಸ್ ಆಸ್ಪತ್ರೆ :** ರಾಷ್ಟ್ರೀಯ ನೇತ್ರದಾನ ಪಾಕ್ಷಿಕದ ಅಂಗವಾಗಿ ನೇತ್ರದಾನ ಜಾಗೃತಿ ಕಾರ್ಯಕ್ರಮ, ಉದ್ಘಾಟನೆ : ಜೆಎಸ್ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಮುಖ್ಯ ಅತಿಥಿಗಳು : ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಲಯನ್ ಎಂ.ಎನ್. ಜಯಪ್ರಕಾಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ. ಬಿ. ಬೃಂದಾ, ಗೌರವ ಅತಿಥಿಗಳು : ಜೆಎಸ್ಎಸ್ ಉನ್ನತ ಶಿಕ್ಷಣ ಅಕಾಡೆಮಿ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಜೆಎಸ್ಎಸ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ. ನಾರಾಯಣಪ್ಪ, ಜೆಎಸ್ಎಸ್ ಆಸ್ಪತ್ರೆ ನಿರ್ದೇಶಕ ಡಾ. ಸಿ.ಪಿ. ಮಧು, ಸ್ಥಳ: ಜೆಎಸ್ಎಸ್ ಆಸ್ಪತ್ರೆ ಒಳಾವರಣ, ಬೆಳಗ್ಗೆ 10.30ಕ್ಕೆ.

■ **ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಜೆಎಸ್ಎಸ್ ಪದವಿಪೂರ್ವ ಕಾಲೇಜು :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಜಯಂತಿ ಆಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಚೆನ್ನಬಸವ ದೇಶಿಕೇಂದ್ರ ಸ್ವಾಮೀಜಿ, ನುಡಿ ನಮನ : ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಉಪಸ್ಥಿತರು: ಪ್ರಾಂಶುಪಾಲರಾದ ಡಾ. ಎಂ.ಪ್ರಭು, ಎಸ್.ನಂಜುಂಡಸ್ವಾಮಿ, ಸ್ಥಳ: ಸುವರ್ಣ ಮಹೋತ್ಸವ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಜೆಎಸ್ಎಸ್ ಮಹಾವಿದ್ಯಾಪೀಠ, ಜೆಎಸ್ಎಸ್ ಕಾಲೇಜ್ ಆಫ್ ನರ್ಸಿಂಗ್, ಜೆಎಸ್ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ, ಜೆಎಸ್ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿ, ಸ್ಕೂಲ್ ಆಫ್ ನರ್ಸಿಂಗ್ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ ಜಯಂತಿ, ನುಡಿ ನಮನ : ಬಿಳಿಗಿರಿರಂಗನ ಬೆಟ್ಟದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಅಧ್ಯಕ್ಷತೆ : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶತಮಾನೋತ್ಸವ ಭವನ, ಜೆಎಸ್ಎಸ್ ಆಸ್ಪತ್ರೆ, ಮಧ್ಯಾಹ್ನ 3.30ಕ್ಕೆ.

■ **ಜವಳಿ ಮಂತ್ರಾಲಯ, ಭಾರತ ಸರ್ಕಾರ, ಜೆಎಸ್ಎಸ್ ಮೈಸೂರು ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಶಾಸಕರಾದ ಡಾ. ಎಂ. ರೂಪಕಲಾ ಶಶಿಧರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀಮತಿ ಕೆ.ಎಂ. ಗಾಯತ್ರಿ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಚ್.ಆರ್. ರಾಜಪ್ಪ, ಸ್ಥಳ: ಜೆಎಸ್ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಸಂಜೆ 4ಕ್ಕೆ.

■ **ಶ್ರೀಕೃಷ್ಣಧಾಮ :** ಕೀಚಕ ವಧೆ, ಮೈಂದ, ದ್ವಿವಿದ ಯಕ್ಷಗಾನ ಬಯಲಾಟ ಪ್ರದರ್ಶನ, ಸ್ಥಳ: ಶ್ರೀಕೃಷ್ಣಧಾಮ, ಗಂಗೋತ್ರಿ ಬಡಾವಣೆ, ಸನ್ಮಾನ : ಹಿರಿಯ ಮದ್ದಳೆಗಾರ ಪದ್ರೆ ಶ್ರೀಧರ, ಸಂಜೆ 5.30 ರಿಂದ.

■ **ಗಾನಭಾರತೀ :** ವಿದ್ವಾನ್ ಟಿ.ಪಿ. ವೈದ್ಯನಾಥನ್ ಮತ್ತು ವಿದುಷಿ ಇಂದಿರಾ ವೈದ್ಯನಾಥನ್ ಸ್ಮಾರಕ ಕಾರ್ಯಕ್ರಮ, ವಿದ್ವಾನ್ ಶ್ರೀನಿವಾಸ ಪ್ರಸನ್ನ ಅವರಿಂದ ವೀಣಾ ವಾದನ, ಪ್ರೊ ಜಿ.ಎಸ್. ರಾಮಾನುಜನ್–ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ: ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಮೃತಾ ನಿತಿನ್ ಶಾಸ್ತ್ರೀ, ಕೆ.ಪಿ. ರೇವತಿ ಹಾಗೂ ಪಿ. ಸುರಭಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ– ಪ್ರಸಾದ ಯೋಜನೆ ಕುರಿತು ಮಾತನಾಡುತ್ತಾರೆ ಪತ್ರಕರ್ತರಾದ ಎಸ್. ಬಿ. ದೇವರಾಜ್, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ–ಮೈಸೂರಿನ ಯಶಸ್ವಿನಿ ಮಹಿಳಾ ಸಂಘದ ಸದಸ್ಯೆಯರಿಂದ ಕಾರ್ಯಕ್ರಮ ವೈವಿಧ್ಯ, 4.30 ವೃತ್ತಿ ಮಾರ್ಗದರ್ಶನ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಅಧ್ಯಯನ ಮತ್ತು ಸಂಶೋಧನೆಯ ಅವಕಾಶಗಳು ಕುರಿತು ಕುಲಪತಿಗಳಾದ ಡಾ. ಶರಣಪ್ಪ ವಿ. ಹಲಸೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ ಹವಾಮಾನ ಮಿತ್ರ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು –ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ–ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ. ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಹಳ್ಳಿ ಹಾಡು, ಭಾಗವಹಿಸುತ್ತಾರೆ –ಡಾ. ಮಳವಳ್ಳಿ ಎಂ. ಮಹದೇವಸ್ವಾಮಿ ಮತ್ತು ಸಂಗಡಿಗರು, ಪ್ರಸ್ತುತಿ–ಡಾ. ಮೈಸೂರು ಉಮೇಶ್, 10.30 ಸವಿನೆನಪು

ಹುಟ್ಟುಹಬ್ಬದ ಶುಭಾಶಯ



ಬಿಜೆಪಿ ಮೈಸೂರು ನಗರಾಧ್ಯಕ್ಷರಾದ ಮಾಜಿ ಶಾಸಕ ಎಲ್.ನಾಗೇಂದ್ರ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರ ಹುಟ್ಟೂರು ಕೆ.ಜಿ.ಕೊಪ್ಪಲು ಮುಖಂಡರು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ನಾಗೇಂದ್ರ ಅವರಿಗೆ ಬಿಸಿಲು ಮಾರಮ್ಮನವರ ಗುಡ್ಡಪ್ಪನವರಾದ ಡಿ.ನಿಂಗಪ್ಪ, ಕರ್ನಾಟಕ ಕಾವಲು ಪಡೆ ರಾಜ್ಯಾಧ್ಯಕ್ಷ ಎಂ.ಮೋಹನ್ ಕುಮಾರ್ ಗೌಡ, ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ಸಮುದಾಯ ಭವನದ ಖಜಾಂಚಿ ಎಲ್.ಚಂದ್ರು, ಈ.ರವೀಂದ್ರ ಕುಮಾರ್, ದಾಸನಕೊಪ್ಪಲು ಶೇಖರ್, ಹಾಲಿನ ಬೋರಪ್ಪ, ಬಿಜೆಪಿ ಮುಖಂಡ ಶಿವಕುಮಾರ್ ಶುಭಾಶಯ ಕೋರಿದರು.

ಶಾಸಕ ಸತೀಶ್ ಸೈಲ್‌ಗೆ 7 ದಿನಗಳ ಮಧ್ಯಂತರ ಜಾಮೀನು ಮಂಜೂರು



ಬೆಂಗಳೂರು, ಸೆ.11– ಅಕ್ರಮ ಹಣ ವರ್ಗಾವಣೆ ಆರೋಪದಡಿ ಬಂಧನವಾಗಿರುವ ಕಾರವಾರ ಕಾಂಗ್ರೆಸ್ ಶಾಸಕ ಸತೀಶ್ ಸೈಲ್‌ಗೆ ಜನಪ್ರತಿನಿಧಿಗಳ ನ್ಯಾಯಾಲಯ 7 ದಿನಗಳ ಕಾಲ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಸತೀಶ್ ಸೈಲ್ ಉಸಿರಾಟದ ಸಮಸ್ಯೆ, ಡಯಾಬಿಟಿಸ್‌ನಿಂದ ಬಳಲುತ್ತಿದ್ದು, ಕಸ್ಟಡಿಯಲ್ಲಿ ಇದ್ದಾಗ ಅನಾರೋಗ್ಯ ಹಿನ್ನೆಲೆ ಜಾಮೀನು ಮಂಜೂರು ಮಾಡಿದೆ. ಇತ್ತೀಚೆಗೆ ಅವರ ಮನೆ ಮೇಲೆ ದಾಳಿ ನಡೆಸಿದ್ದ ಇಡಿ, 1.68 ಕೋಟಿ ನಗದು, 6.75 ಕೆಜಿ ಚಿನ್ನದ ಬಿಸ್ಕೆಟ್‌ಗಳು, 14.13 ಕೋಟಿ ಹಣ ಹೊಂದಿರುವ ಬ್ಯಾಂಕ್ ಖಾತೆಯನ್ನು ಸೀಜ್ ಮಾಡಿತ್ತು. ಅಕ್ರಮ ಅದಿರು ಪ್ರಕರಣದಲ್ಲಿ ಜಾಮೀನಿನ ಮೇಲೆ ಸತೀಶ್‌ಸೈಲ್ ಹೊರಗಿದ್ದರು. ಆ.13, 14ರಂದು ಇಡಿ ಅಧಿಕಾರಿಗಳು, ಶಾಸಕರ ಮನೆ ಮೇಲೆ ದಾಳಿ ನಡೆಸಿದ್ದರು.

ನಕ್ಕರೆ ಅದೇ ಸ್ವರ್ಗ

ಚಿತ್ರ ಕಲಾವಿದ : ಸರ್ ಈ ಪೇಂಟಿಂಗ್ ಬೆಲೆ 10 ಸಾವಿರ ರೂಪಾಯಿ. ತೈಲ ವರ್ಣದಲ್ಲಿ (ಆಯಿಲ್ ಪೇಂಟಿಂಗ್‌ನಲ್ಲಿ) ಮಾಡಿದ್ದು.

ತಿಮ್ಮ : ನೀನು ಹಣದ ಬಗ್ಗೆ ಚಿಂತೆ ಮಾಡಬೇಡ. ದೇಸೀ ತುಪ್ಪದಲ್ಲಿ ಯಾವುದಾದರೂ ಮಾಡಿದ್ರೆ, ತೋರ್ಸು!

ಮೈಸೂರು ಮಿತ್ರ
ಶುಕ್ರವಾರ, 12 ಸೆಪ್ಟೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಜೀವನದಲ್ಲಿ ಕಾಯುವುದನ್ನು ಕಲಿಯಬೇಕು. ಎಲ್ಲಾ ನಡೆಯುವುದು ಸಮಯಕ್ಕೆ ಸರಿಯಾಗಿಯೇ ಹೊರತು ನಮ್ಮ ಅವಸರದಂತೆ ಅಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಟ್ಟು ಗುಣ ಸುಟ್ಟರೂ ಹೋಗಲ್ಲ.

ನಿಮ್ಮ ಪತ್ರಗಳು

ಸಾಮಾಜಿಕ ಜಾಲತಾಣಗಳಿಂದ ಸಮಾಜದ ಸ್ವಾಸ್ಥ್ಯ ಕೆಡುತ್ತಿದೆಯೇ?

ಮಾನ್ಯರೆ,

ಸಾಮಾಜಿಕ ಜಾಲತಾಣಗಳು ಇತ್ತೀಚಿನ ವರ್ಷಗಳಲ್ಲಿ ಯುವ ಸಮುದಾಯದ ಮೇಲೆ ಹೆಚ್ಚಿನ ರೀತಿಯ ಪ್ರಭಾವ ಬೀರುತ್ತಿರುವುದನ್ನು ಕಾಣಬಹುದಾಗಿದೆ. ಜನ ಸಾಮಾನ್ಯರ ಮೇಲೂ ಇದು ಸಾಕಷ್ಟು ಪ್ರಭಾವ ಬೀರುತ್ತಿದೆ. ಫೇಸ್ ಬುಕ್, ವಾಟ್ಸಾಪ್, ಇನ್ಸ್ಟಾಗ್ರಾಮ್ ಮುಂತಾದವುಗಳಿಂದಾಗಿ ಸಮಾಜದ ಸ್ವಾಸ್ಥ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಇವುಗಳಲ್ಲಿ ಪ್ರಕಟವಾಗುವ ಸುದ್ದಿ, ಜಾಹಿರಾತು ಇತ್ಯಾದಿಗಳಿಗೆ ಮಾರು ಹೋಗಿ ಯುವ ಜನರು ಅನೇಕ ರೀತಿಯ ದುಷ್ಕೃತ್ಯಗಳಲ್ಲಿ ತೊಡಗಿಸಿಕೊಂಡಿರುವುದು ದುರದೃಷ್ಟಕರ ಸಂಗತಿಯಾಗಿದೆ. ಕೆಲವು ಪಾಶ್ಚಿಮಾತ್ಯ ದೇಶಗಳಲ್ಲಿ ಸಾಮಾಜಿಕ ಜಾಲತಾಣಗಳನ್ನು ಇದೇ ಕಾರಣಕ್ಕಾಗಿ ಬಹಿಷ್ಕರಿಸಲಾಗಿದೆ. ಸಮಾಜದಲ್ಲಿ ಕೋಮು ವಿರೋಧಿ ಭಾವನೆ, ಧರ್ಮ ಧರ್ಮಗಳ ನಡುವೆ ಸಂಘರ್ಷ ಉಂಟು ಮಾಡುವುದು, ಪರಸ್ಪರ ವೈರತ್ವ ಬೆಳೆಸುವುದು, ವ್ಯಕ್ತಿ ನಿಂದನೆ, ಜಾತಿ ನಿಂದನೆ ಮುಂತಾದವುಗಳನ್ನು ಒಳಗೊಂಡ ಸುದ್ದಿ ಸಮಾಚಾರಗಳು, ವೀಡಿಯೋ ತುಣುಕುಗಳು, ಸಾಮಾಜಿಕ ಜಾಲತಾಣಗಳಲ್ಲಿ ಯಥೇಚ್ಛವಾಗಿ ಕಾಣಿಸಿಕೊಳ್ಳುತ್ತಿವೆ. ಇತ್ತೀಚೆಗೆ ರಾಜ್ಯದ ಪವಿತ್ರ ಸ್ಥಳವಾದ ಧರ್ಮಸ್ಥಳದ ಪರ ಹಾಗೂ ವಿರುದ್ಧವಾಗಿ ನೂರಾರು ವೀಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡುತ್ತಿವೆ. ಇವುಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದು ಇವುಗಳನ್ನು ನೋಡಿದವರಿಗೆ ಒಂದು ರೀತಿಯ ಗೊಂದಲ ಉಂಟಾಗಬಹುದು. ವಾಕ್‌ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯಬಾರದ್ದೆಲ್ಲಾ ನಡೆಯುತ್ತಿರುವುದು ದುರಂತವೇ ಸರಿ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇನ್ನು ಮೇಲಾದರೂ ಈ ಸಾಮಾಜಿಕ ಜಾಲತಾಣಗಳ ಮೇಲೆ ನಿಯಂತ್ರಣ ಹೇರದಿದ್ದರೆ, ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಮತಾಂತರ ನಿಷೇಧ ಕಾಯ್ದೆ ವಾಪಸ್ ಪಡೆಯಬೇಡಿ

ಮಾನ್ಯರೆ,

ಬೆಂಗಳೂರಿನ ಶಿವಾಜಿನಗರದ ಸಂತ ಮೇರಿ ಮಾತೆ ಉತ್ಸವ, ಕ್ರೈಸ್ತ ಧರ್ಮದವರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕ್ರೈಸ್ತ ಧರ್ಮಗುರು ಪೀಟರ್ ಮಚಾಡೋ ಅವರು ಮತಾಂತರ ನಿಷೇಧ ಕಾಯ್ದೆಯನ್ನು ವಾಪಸ್ ಪಡೆಯಬೇಕು ಎಂದು ಮನವಿ ಮಾಡಿದ್ದಾರೆ. ನಾವು ಕಾನೂನಿಗೆ ವಿರೋಧವಾಗಿ ಮತಾಂತರ ಮಾಡುವುದಿಲ್ಲ. ಕಾನೂನಿಗೆ ಅನುಗುಣವಾಗಿಯೇ ಮತಾಂತರ ಮಾಡುತ್ತೇವೆ ಎಂದು ಮಚಾಡೋ ಸಮರ್ಥನೆ ನೀಡಿದ್ದಾರೆ. ಆದರೆ ಇವರು ಕಾನೂನು ಉಲ್ಲಂಘನೆ ಮಾಡದಿದ್ದ ಮೇಲೆ ಕಾಯ್ದೆಯ ಭಯವೇಕೆ? ಆದ್ದರಿಂದ ಯಾವುದೇ ಕಾರಣಕ್ಕೂ ಮುಖ್ಯ ಮಂತ್ರಿಗಳು ಮತಾಂತರ ನಿಷೇಧ ಕಾಯ್ದೆ ಯನ್ನು ವಾಪಸ್ ಪಡೆಯದಿರಲಿ. ಇಂತಹ ಮತಾಂತರಿಗಳ ಹುನ್ನಾರಕ್ಕೆ ಯಾರೂ ಬಲಿಯಾಗದಿರಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ದಸರಾ ಮೈಸೂರಿನ ಉಸಿರು

ಮಾನ್ಯರೆ,

ನಾಡಹಬ್ಬ, ನೋಡಹಬ್ಬ, ಮನತುಂಬಿ ಮಿಡಿಯುವ ಹಬ್ಬ
ದಸರಾ ಜಗಮಗಿಸುವ ಮಹಾರಾತ್ರಿಯ ವೈಭವದ ಹಬ್ಬ
ಸ್ವರ್ಗ ಧರೆಗಿಳಿಸಿ, ಕತ್ತಲೆಯನ್ನು ಬೆತ್ತಲೆಗೊಳಿಸುವ ಹಬ್ಬ,
ಚಾಮುಂಡಿದೇವಿಯ ಪೂಜಿಸಿ ದೊರೆಗಳ ನೆನೆಯುವ ಹಬ್ಬ
ಶೃಂಗಾರಗೊಂಡಿತು ಮೈಸೂರು, ಹಾಸಿದೆ ನಗೆಹೂವು ಊರೆಲ್ಲಾ
ಗಜಗಳ ಗಾಂಭೀರ್ಯದ ಸಾಲು ನಡೆ ನೋಡುವುದೇ ಮಜಾ,
ಭುವನೇಶ್ವರಿಂಯ ಮಕ್ಕಳು ಸಂಭ್ರಮಿಸುವ ನವರಾತ್ರಿಯ ಬೆಳಕು,
ವಿಶ್ವವೇ ತಿರುಗಿದೆ ದಸರಾ ನೋಡಲು ದೇವಿಯ ಹೊಗಳಲು
ಮುಷ್ತಾಕರ ಉದ್ಘಾಟನೆಗೆ ವಿಘ್ನವಿರೋಧಗಳು ನಿರ್ವಿಘ್ನ,
ಸಾಗಿದೆ ಅದ್ದೂರಿ ಸವಾರಿ ಅರಮನೆಯಿಂದ ಬನ್ನಿಮಂಟಪಕ್ಕೆ
ಮಹಿಷಮರ್ಧನದಿಂದ ದುಷ್ಟರ ಶಿಕ್ಷಿಸಿ ಶಿಷ್ಟರ ರಕ್ಷಿಸಿದ ಚಾಮುಂಡಿ,
ಜಾತಿ ಧರ್ಮಗಳ ಕೂಡಿಸಿದ ಹಬ್ಬ. ನೆರೆದವರಿಗೆಲ್ಲಾ ಹಬ್ಬಾ.. ಹಬ್ಬಾ!
ನಾಲ್ವಡಿ ಒಡೆಯರು ಕಟ್ಟಿದ ಮಲ್ಲಿಗೆ ಪರಿಮಳ ಬೀರುವ ಮೈಸೂರಿದು,
ದಸರಾ.. ದಸರಾ.. ಮೈಸೂರಿಗರ ಜೀವದಾ ಉಸಿರು, ನಾಡಿಗೇ ಹೆಸರು!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ದಸರಾ ಕವಿಗೋಷ್ಠಿಯ ಆಯ್ಕೆಯಲ್ಲಿ ಪಾರದರ್ಶಕತೆ ಇದೆಯೇ....???

ಮಾನ್ಯರೆ,

ಪ್ರತಿ ವರ್ಷವೂ ದಸರಾ ಕವಿಗೋಷ್ಠಿಯಲ್ಲಿ ಆಯ್ಕೆಯಾಗುವ ಪಟ್ಟಿಯಲ್ಲಿ ನಿಜಕ್ಕೂ ಪಾರದರ್ಶಕತೆ ಇದೆಯೇ ಎಂಬ ಅನುಮಾನ ಕವಿ ವಲಯದಿಂದ ಮೂಡದೆ ಇರದು...! ಪ್ರತಿ ವರ್ಷವೂ ಪತ್ರಿಕೆ ಪ್ರಕಟಣೆ ಹೊರಡಿಸಿ, ತದನಂತರ ಬಂದ ಕವಿತೆಗಳಲ್ಲಿ, ಪ್ರದೇಶವಾರು ಗುಣಮಟ್ಟ, ಮೌಲ್ಯ, ಪ್ರತಿಭೆ, ಅವರ ಸಾಹಿತ್ಯದ ಸಾಧನೆ, ಇವೆಲ್ಲವುಗಳನ್ನು ಪರಿಗಣಿಸಿ ಆಯ್ಕೆ ಮಾಡುತ್ತಿದ್ದ ಪ್ರಕ್ರಿಯೆ, ಇತ್ತೀಚಿನ ದಿನಗಳಲ್ಲಿ ಮಾಯವಾಗಿ, ಕೇವಲ ಶಿಫಾರಸು ಪತ್ರ, ಅಥವಾ ಅವರಿಗೆ ಗೊತ್ತಿರುವ ವಿದ್ಯಾರ್ಥಿಗಳಿಗೆ, ಸ್ನೇಹಿತರಿಗೆ, ಗುರುಗಳಿಗೆ, ಉಡುಗೊರೆ ನೀಡುವ ರೀತಿಯಲ್ಲಿ, ಆಯೋಜನೆಗೊಳ್ಳುತ್ತಿರುವ ಪ್ರಕ್ರಿಯೆ ನಿಜಕ್ಕೂ ಶೋಚನೀಯ..!!

ಹಾಗೇನೆ ಪ್ರತಿ ವರ್ಷವೂ ವಿವಿಧ ವೇದಿಕೆಗಳಲ್ಲಿ ವಾಚನ ಮಾಡುವ ಕೆಲವು ಹಿರಿಯ ಕವಿಗಳು, ಮತ್ತೆ ಅವಕಾಶ ಗಿಟ್ಟಿಸಿಕೊಂಡು, ವಾಚನ ಮಾಡುವುದು ಎಷ್ಟು ಸರಿ.. ಹಾಗಿದ್ದರೆ ಅವರಷ್ಟೇ ಪ್ರತಿಭಾವಂತರೇ..!!. ಎಲೆಮರೆಕಾಯಿಯಂತಿರುವ ಅದೆಷ್ಟೋ ಪ್ರತಿಭೆಗಳು, ಸೂಕ್ತ ಮಾಹಿತಿಯ ಕೊರತೆಯಿಂದ, ದಸರಾ ಕವಿಗೋಷ್ಠಿಯಲ್ಲಿ ಅವಕಾಶ ವಂಚಿತರಾಗುತ್ತಿರುವ ನಿದರ್ಶನಗಳು ಸಾಕಷ್ಟಿವೆ ಎಂಬುದು ಕವಿ ವಲಯದ ಮಾತಾಗಿದೆ. ಪ್ರತಿಸಾರಿಯೂ ಪ್ರತಿಭಾವಂತ ಕವಿಗಳು, ದಸರಾ ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳಲು, ಹೋರಾಟ ಮಾಡಬೇಕಾದ, ದುಂಬಾಲು ಬೀಳಬೇಕಾದ, ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದೆರಡು ಮೂರು ವರ್ಷಗಳಿಂದ ಪ್ರತಿ ಬಾರಿಯೂ ಅರ್ಜಿ ಹಾಕಿದರೂ ಸಹ, ಆಯ್ಕೆಯಾಗಿರದ ಕುರಿತು, ಅಸಮಾಧಾನದ ಮಾತುಗಳು ಕವಿ ವಲಯದಿಂದಲೇ ಕೇಳಿ ಬಂದಿವೆ. ಇನ್ನಾದರೂ ಸಂಬಂಧಪಟ್ಟವರು ಎಚ್ಚೆತ್ತು, ಅರ್ಹ ಪ್ರತಿಭಾವಂತ, ಕವಿಗಳಿಗೆ ಸೂಕ್ತ, ಮನ್ನಣೆ ಗೌರವ ನೀಡಿದರೆ ಅವರ ಬಹಳಷ್ಟು ವರ್ಷಗಳ ಕನಸು ನನಸಾಗಬಹುದೇನೋ...!!


– ಅಭಿನಂದನ್ ಎಂ. ಮಂಡ್ಯ.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಶೀಲ್ದಾರರು
ಮೊ: 94482 08746/ 97421 79000

ಚಿಂತನೆ

ಭೂದಾನ ಚಳವಳಿಯ ರೂವಾರಿ ವಿನೋಬಾ ಭಾವೆ



ಆಚಾರ್ಯ ವಿನೋಬಾ ಭಾವೆ

ಕಳೆದ ತಿಂಗಳು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಜಯಂತಿಯನ್ನು ನಾಡಿನಾದ್ಯಂತ ಆಚರಿಸಲಾಯಿತು. ಅರಸು ಅವರ ಬಗ್ಗೆ ಮಾತನಾಡುವಾಗ ಎರಡು ಅಂಶಗಳನ್ನು ಪ್ರಸ್ತಾಪಿಸಲೇ ಬೇಕಾಗುತ್ತದೆ. ಮೊದಲನೆಯದು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದವರು ಡಿ.ದೇವರಾಜ ಅರಸು. ಮತ್ತೊಂದು ಕ್ರಾಂತಿಕಾರಕ ನಿರ್ಣಯ ಅವರು ಕೈಗೊಂಡಿದ್ದು ಭೂಸುಧಾರಣಾ ಕಾಯಿದೆ ಜಾರಿ. ಸ್ವತಃ ಜಮೀನುದಾರರೂ ಆಗಿದ್ದ ಅವರಿಗೆ ರೈತರ ಕಷ್ಟಗಳ ಅರಿವಿತ್ತು. ದುಡಿಯುವ ರೈತರ ಹೆಸರಿನಲ್ಲಿ ಜಮೀನಿದ್ದರೆ ಅವರ ಜೀವನ ಸುಧಾರಣೆಯಾಗುತ್ತದೆ ಎಂಬ ಬಲವಾದ ನಂಬಿಕೆ ಅವರಲ್ಲಿತ್ತು. ಉಳುವವನೇ ಹೊಲದೊಡೆಯ ಎಂಬ ಮಾತೇ ಚೇತೋಹಾರಿಯಾದದ್ದು, ಇವಲ್ಲದೆ ಅವರನ್ನು ನೆನೆಸಲು ಹಲವಾರು ಕಾರಣಗಳು ಇದ್ದೇ ಇವೆ. ಹಿಂದುಳಿದ ವರ್ಗದವರಿಗಾಗಿ ಅವರು ರಚಿಸಿದ ಹಾವನೂರು ಆಯೋಗ, ಬೆಂಗಳೂರಿನಲ್ಲಿ ಅವರು ಸ್ಥಾಪಿಸಿದ ಎಲೆಕ್ಟ್ರಾನಿಕ್ ಸಿಟಿ ಇತ್ಯಾದಿ ನಿರ್ಧಾರಗಳು ಒಬ್ಬ ದೂರದೃಷ್ಟಿಯ ನಾಯಕ ಕೈಗೊಳ್ಳಬಹುದಾದದ್ದು. ಹೀಗಾಗಿ ಅವರನ್ನು ಈ ನಾಡು ಸದಾ ನೆನಪಿನಲ್ಲಿ ಇರಿಸಿಕೊಳ್ಳುತ್ತದೆ. ಪ್ರತಿವರ್ಷ ಅವರ ಬಗ್ಗೆ ಮಾತನಾಡುವಾಗ ಈ ಸಂಗತಿಗಳನ್ನು ವಿಶೇಷವಾಗಿ ಪ್ರಸ್ತಾಪಿಸಲಾಗುತ್ತದೆ.

ಬಹುಶಃ ದೇವರಾಜ ಅರಸು ಅವರಿಗೆ ಈ ದಿಸೆಯಲ್ಲಿ ಮಾರ್ಗದರ್ಶನ ಸಿಕ್ಕಿದ್ದು ಆಚಾರ್ಯ ವಿನೋಬಾ ಭಾವೆಯುವರಿಂದ ಎಂದು ಕಂಡುಬರುತ್ತದೆ. ವಿನೋಭಾ ಭಾವೆಯವರು ಭೂದಾನ ಯಜ್ಞ ನಡೆಸಿದ್ದು ಒಂದು ಇತಿಹಾಸ. ಇರುವವರಿಂದ ಜಮೀನು ಪಡೆದು ಅದನ್ನು ಅರ್ಹರಿಗೆ ಹಂಚಿದ್ದು ಅವಿಸ್ಮರಣೀಯ. ವಿನೋಬಾ ಭಾವೆಯುವರನ್ನು ಮಹಾತ್ಮಾ ಗಾಂಧೀಜಿಯವರ ಆಧ್ಯಾತ್ಮಿಕ ಉತ್ತರಾಧಿಕಾರಿ ಎಂದು ಕರೆಯಲಾಗುತ್ತದೆ. ಅವರು ತಮ್ಮ ಜೀವನವನ್ನು ದೀನ–ದಲಿತರ ಸೇವೆಗಾಗಿ ಮುಡುಪಿಟ್ಟಿದ್ದು ಒಂದು ರೀತಿಯ ಆದರ್ಶ.

ಭಾವೆಯವರು ಜನಿಸಿದ್ದು 1895ರ ಸೆಪ್ಟೆಂಬರ್ 11ರಂದು. ಅವರು ಈಗ ಬದುಕಿದ್ದಿದ್ದರೆ 130 ವರ್ಷಗಳಾಗುತ್ತಿತ್ತು. ಒಮ್ಮೆ ಇಪ್ಪತ್ತೊಂದರ ಹರೆಯದ ಯುವಕನೊಬ್ಬ ಗಾಂಧೀಜಿಯವರನ್ನು ಕಾಣುವ ಉದ್ದೇಶದಿಂದ ಅಹಮದಾಬಾದಿಗೆ ಆಗಮಿಸುತ್ತಾನೆ. ಗಾಂಧೀಜಿಯವರನ್ನು ಕಾಣುವುದು ಅವನ ಜೀವನದ ಕನಸು. ಅದಕ್ಕೆ ಮುಂಚೆ ಅವನು ಗಾಂಧೀಜಿಗೆ ಹಲವು ಪತ್ರಗಳನ್ನು ಬರೆದಿದ್ದ. ಮಹಾತ್ಮರ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿದಾಯಕ ಭಾಷಣಗಳನ್ನು ಅವನು ಓದಿ ಪ್ರಭಾವಿತನಾಗಿದ್ದ. ಈ ಬಗ್ಗೆ ಗಾಂಧೀಜಿಯವರಿಗೆ ಹಲವು ಪತ್ರಗಳನ್ನು ಬರೆದಿದ್ದ. ಅದಕ್ಕೆ ಗಾಂಧೀಜಿ ಉತ್ತರವನ್ನೂ ನೀಡಿದ್ದರು. ಆದರೂ ಆ ಯುವಕನಿಗೆ ಮತ್ತಷ್ಟು ಸಂದೇಹಗಳು, ಪ್ರಶ್ನೆಗಳಿದ್ದವು. ಹಾಗಾಗಿ ಆಶ್ರಮಕ್ಕೆ ಬರಲು ಆತನಿಗೆ ಗಾಂಧೀಜಿ ತಿಳಿಸಿದ್ದರು. ನೀನು ಇಲ್ಲೇ ಬಂದು ನನ್ನೊಡನೆ ಚರ್ಚಿಸಬಹುದು ಎಂದು ಅವರು ಹೇಳಿದ್ದರು. ಈ ಯುವಕನಿಗೆ ಹಾಲು ಕುಡಿದಷ್ಟು ಸಂತೋಷವಾಗಿತ್ತು. ಹಾಗಾಗಿ ನೇರ ಹೊರಟು ಆಹಮದಾಬಾದಿಗೆ ಬಂದೇಬಿಟ್ಟ ಆ ಯುವಕ.

ಆ ಯುವಕ ಸುಸಂಸ್ಕೃತ ಮನೆತನದವನು. ಓದಿನಲ್ಲೂ ಬುದ್ಧಿವಂತನಾಗಿದ್ದನು. ಆದರೆ ಪದವಿ ಪಡೆಯುವುದು ಅವನ ಉದ್ದೇಶವಾಗಿರಲಿಲ್ಲ. ಅದನ್ನು ಪಡೆದು ಏನು ಮಾಡುವುದು ಎಂಬ ಪ್ರಶ್ನೆ ಅವನದ್ದು. ಅವನು ಧಾರ್ಮಿಕ ವಿಷಯಗಳನ್ನೂ ಸಾಕಷ್ಟು ಅಧ್ಯಯನ ಮಾಡಿದ್ದನು. ಅವನಿಗೆ ಒಂದೆಡೆ ಆಧ್ಯಾತ್ಮದ ಆಕರ್ಷಣೆಯಾದರೆ, ಮತ್ತೊಂದೆಡೆ ದೇಶ ದಾಸ್ಯದಿಂದ ವಿಮುಕ್ತಿಯಾಗಬೇಕು ಎಂಬ ಕಾತುರವೂ ಇತ್ತು.

ಆಶ್ರಮಕ್ಕೆ ಬಂದ ಯುವಕನನ್ನು ಆಶ್ರಮವಾಸಿಗಳು ಗಾಂಧೀಜಿ ಬಳಿಗೆ ಕರೆದೊಯ್ದರು. ಇವನಿಗೆ ಆಶ್ಚರ್ಯವಾದದ್ದು ಎಂದರೆ ಗಾಂಧೀಜಿ ಆಶ್ರಮದಲ್ಲಿ ತರಕಾರಿ ಹಚ್ಚುತ್ತಾ ಕುಳಿತಿದ್ದರು. ಇಡೀ ನಾಡಿನ ನಾಯಕ ಹೀಗೆ ತರಕಾರಿ ಹಚ್ಚುತ್ತಾ ಕುಳಿತಿರುವ ಬಗ್ಗೆ ಆತ ಯೋಚನೆಯನ್ನೂ ಮಾಡಿರಲಿಲ್ಲ. ಗಾಂಧೀಜಿಯೇ ಹಾಗೆ, ಯಾವುದನ್ನೂ ತಿರಸ್ಕಾರಭಾವದಿಂದ ನೋಡಿದವರಲ್ಲ. ಹಾಗೆ ಬಂದ ಯುವಕನೇ ವಿನೋಬಾ ಭಾವೆ. ಮುಂದೆ ಗಾಂಧೀಜಿಯವರಿಂದ ಆಚಾರ್ಯ ಎಂದು ಕರೆಸಿಕೊಂಡು ಆಚಾರ್ಯ ವಿನೋಬಾ ಭಾವೆ ಎಂದು ದೇಶ ಗುರುತಿಸುವಂತೆ ಆದದ್ದು. ವಿನೋಬಾ ಗಾಂಧೀಜಿಯವರ ಅಭಿಮಾನಿ. ಅವರ ವ್ಯಕ್ತಿತ್ವ ಮತ್ತು ಆದರ್ಶಗಳು ಅವರಿಗೆ ಅಚ್ಚುಮೆಚ್ಚು.

ಗಾಂಧೀಜಿಯವರ ಅಪೇಕ್ಷೆಯಂತೆ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಲವಾರು ಬಾರಿ ಸೆರೆಮನೆ ವಾಸ ಅನುಭವಿಸಬೇಕಾಯಿತು. ಭಗವದ್ಗೀತೆ ಅವರ ಮೆಚ್ಚಿನ ವಿಷಯ. ಅದರ ಬಗ್ಗೆ ಅವರು ನಿರಂತರವಾಗಿ ಪ್ರವಚನ ನೀಡುವಷ್ಟು ಸರಕು ಅವರ ಬಳಿ ಇತ್ತು. ಹಾಗಾಗಿ ಸೆರೆಮನೆಯಲ್ಲೂ ಅವರ ಗೀತಾ ಪ್ರವಚನ ಮುಂದುವರೆದಿತ್ತು. ಸೆರೆಮನೆಯಲ್ಲಿ ಇವರು ಪ್ರವಚನ ಮಾಡುತ್ತಿರುವಾಗ ಸೆರೆಮನೆ ವಾಸಿಗಳ ಜೊತೆಗೆ ಅಲ್ಲಿನ ಅಧಿಕಾರಿಗಳೂ ಹಾಜರಿರುತ್ತಿದ್ದರು. ಮುಂದೆ ಆ ಪ್ರವಚನಗಳು ಪುಸ್ತಕ ರೂಪದಲ್ಲೂ ಹೊರ ಬಂದವು ಎಂಬುದು ವಿಶೇಷ.

ವಿನೋಬಾ ಜನಿಸಿದ್ದು ಮಹಾರಾಷ್ಟ್ರದ ಒಂದು ಹಳ್ಳಿಯಲ್ಲಿ. ಜನನವಾಗಿದ್ದು 11.09.1895. ವಿನೋಬಾ ಅವರ ತಾಯಿ ರುಕ್ಮಿಣಿ ದೇವಿ ಕರ್ನಾಟಕದ ಜಮಖಂಡಿಯವರು ಎಂಬುದು ವಿಶೇಷ. ವಿನೋಬಾ ಅವರಿದ್ದ ಗ್ರಾಮದ ಹೆಸರು ಗಾಗೋದೆ. ತಾತ ಶಂಭೂ ರಾವ್ ಭಾವೆಯವರ ಮಾರ್ಗದರ್ಶನದಲ್ಲಿ ಇವರಿಗೆ ಧಾರ್ಮಿಕ ಶ್ರದ್ಧೆ ಬೆಳೆಯಿತು. ನಂತರದ ಗುರು ತಾಯಿ. ಎಳೆಯ ವಯಸಿನಲ್ಲಿಯೇ ವಿನೋಬಾ ರಾಮಾಯಣ, ಮಹಾಭಾರತ ಮೊದಲಾದವನ್ನು ಓದಿ ತಿಳಿದುಕೊಂಡಿದ್ದರು. ಅವರಿಗೆ ಓದಿನಲ್ಲಿ ಮಹಾ ಆಸಕ್ತಿ. ಶಾಲಾ ಗ್ರಂಥಾಲಯದಲ್ಲಿ ಗಂಟೆಗಟ್ಟಲೆ ಕುಳಿತು ಓದುತ್ತಿದ್ದರು. ಒಮ್ಮೆ ಬೇಸಿಗೆಯಲ್ಲಿ ಹೀಗೆ ಕುಳಿತು ಓದುವಾಗ ಅವರು ಮೇಲುಡುಪು ಧರಿಸಿರಲಿಲ್ಲ. ಈ ಬಗ್ಗೆ ಅಲ್ಲಿನ ಕೆಲಸಗಾರರು ಆಕ್ಷೇಪಿಸಿದ್ದರು.

> ಒಬ್ಬ ವ್ಯಕ್ತಿ ನಿಸ್ವಾರ್ಥವಾಗಿ ದುಡಿದಾಗ ಜನರು ಅದಕ್ಕೆ ಸ್ಪಂದಿಸುತ್ತಾರೆ ಎಂಬುದಕ್ಕೆ ವಿನೋಬಾ ಭಾವೆ ಒಂದು ನಿದರ್ಶನ. ಅವರಿಗೆ ಮುಂದೆ ಮರಣೋತ್ತರವಾಗಿ ಭಾರತರತ್ನ ಪ್ರಶಸ್ತಿ ನೀಡಲಾಯಿತು. ಇಂತಹ ಆದರ್ಶದ ಬದುಕು ಅವರದ್ದಾಗಿತ್ತು. ಅವರನ್ನು ದೇಶ ಎಂದಿಗೂ ಸ್ಮರಿಸಿಕೊಳ್ಳುತ್ತದೆ.

ಶಾಲಾ ಮುಖ್ಯಸ್ಥನಾಗಿದ್ದ ಯುರೋಪಿಯನ್ ಅಧಿಕಾರಿಗೆ ಈ ಬಗ್ಗೆ ದೂರು ನೀಡಿದರು. ಆತ ಇವರ ಕೋಣೆಗೆ ಬಂದು ನಿನಗೆ ಸಭ್ಯತೆ ತಿಳಿದಿದೆಯೇ ಎಂದು ಕೇಳಿದಾಗ, ವಿನೋಬಾ ಅವರ ಉತ್ತರ ನನ್ನ ದೇಶದ ಸಭ್ಯತೆ ನನಗೆ ಗೊತ್ತು ಎಂಬುದಾಗಿತ್ತು. ಅದಕ್ಕೆ ಆ ಅಧಿಕಾರಿ ಹೇಳಿದ್ದು, ನಿನ್ನ ದೇಶದ ಸಭ್ಯತೆ ಏನು ಎಂದು. ಅದಕ್ಕೆ ಇವರ ಉತ್ತರ ಯಾವ ಮನುಷ್ಯ ಸ್ವತಃ ತಾನು ಕುಳಿತುಕೊಂಡು ಇನ್ನೊಬ್ಬನನ್ನು ನಿಲ್ಲಿಸಿ ಮಾತನಾಡುವನೋ ಅವನನ್ನು ಅಸಭ್ಯ ಎನ್ನುತ್ತಾರೆ ಎಂಬ ಧೈರ್ಯದ ಉತ್ತರ ನೀಡಿದ್ದರು ವಿನೋಬಾ. ಮುಂದೆ ತನ್ನ ಗೆಳೆಯರಿಂದ ದೇಣಿಗೆ ಸಂಗ್ರಹಿಸಿ ಅವರೇ ಒಂದು ಗ್ರಂಥಾಲಯ ನಿರ್ಮಿಸಿದ್ದರು. ಓದಿದ ಪುಸ್ತಕಗಳ ಬಗ್ಗೆ ಅವರು ನಿರರ್ಗಳವಾಗಿ ಮಾತನಾಡುತ್ತಿದ್ದರು. ಅವರಿಗೆ ವಿದ್ಯೆ ಕಲಿಯುವುದಕ್ಕಿಂತ ಬೇರೇನಾದರೂ ಮಾಡಬೇಕು ಎಂಬ ತುಡಿತ ಇತ್ತು. ಕೊನೆಗೆ ಮನೆ ಬಿಟ್ಟು ಹೊರಟೇ ಬಿಟ್ಟರು. ಮೊದಲು ಇಂಟರ್‌ಮೀಡಿಯೆಟ್ ಓದಬೇಕೆಂದು ಸೂರತ್‌ಗೆ ಹೊರಟವರು, ಹೋಗಿದ್ದು ಬನಾರಸ್‌ಗೆ. ಅವರೊಡನೆ ಅದೇ ಮನೋಭಾವದ ಇಬ್ಬರು ಗೆಳೆಯರೂ ಇದ್ದರು. ಕೊನೆಗೆ ಗೆಳೆಯರು ವಾಪಸ್ಸು ಆದಾಗ ಒಬ್ಬರೇ ಅಲ್ಲಿ ಉಳಿದರು. ಜೀವನ ನಡೆಸಲು ಖಾಸಗಿ ಶಾಲೆಯಲ್ಲಿ ಕೆಲಸ ಮಾಡಿದರು. ಕಾಶಿಯ ಗ್ರಂಥಾಲಯದಲ್ಲಿ ಸಾಕಷ್ಟು ಸಂಸ್ಕೃತ ಪುಸ್ತಕಗಳನ್ನು ಅಭ್ಯಾಸ ಮಾಡಿದರು.

ಅಲ್ಲಿರುವಾಗಲೇ ಅವರು ಗಾಂಧೀಜಿಯ ಪ್ರಭಾವಕ್ಕೆ ಒಳಗಾದರು. ಪತ್ರಿಕೆಗಳಲ್ಲಿ ಬರುತ್ತಿದ್ದ ಗಾಂಧೀಜಿಯವರ ಭಾಷಣಗಳನ್ನು ಓದಿ ಪ್ರಭಾವಿತರಾದರು. ಅಲ್ಲಿಂದ ಅವರು ಗಾಂಧೀಜಿಯವರಿಗೆ ಪತ್ರ ಬರೆಯಲು ಆರಂಭಿಸಿದ್ದರು. ಅವರ ಬಳಿ ಹಲವು ಪ್ರಶ್ನೆ ಇಡುತ್ತಿದ್ದರು. ಅದರ ಫಲವಾಗಿಯೇ ಗಾಂಧೀಜಿ ಆಶ್ರಮಕ್ಕೆ ಬರಲು ಹೇಳಿದ್ದು. ತರಕಾರಿ ಹಚ್ಚುತ್ತಿದ್ದ ಗಾಂಧೀಜಿ ಇವರಿಗೂ ಒಂದು ಚಾಕು ಕೊಟ್ಟು ತರಕಾರಿ ಹಚ್ಚಲು ಹೇಳಿದರು. ವಿನೋಬಾ ಕೆಲವು ಸಮಯ ಆಶ್ರಮದಲ್ಲಿ ಉಳಿದರು. ಅಲ್ಲಿನ ಎಲ್ಲಾ ಕೆಲಸಗಳನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದ್ದರು. ಅವರ ಆರೋಗ್ಯ ಅಷ್ಟಕ್ಕಷ್ಟೇ ಎಂಬಂತೆ ಇತ್ತು. ಬಹಳ ದಿನಗಳ ನಂತರ ಗಾಂಧೀಜಿ ಸಲಹೆ ಮೇರೆಗೆ ತಮ್ಮೂರಿಗೆ ಹೋದರು. ಅಲ್ಲಿ ಅವರು ಮತ್ತಷ್ಟು ವೇದಾಂತ ಅಭ್ಯಾಸ ಮಾಡಿದರು. ಅವರು ಮಹಾರಾಷ್ಟ್ರದ ಹಲವು ಕಡೆಗೆ ವಿದ್ವಾಂಸರನ್ನು ಹುಡುಕಿಕೊಂಡು ಕಾಲು ನಡಿಗೆಯಲ್ಲೇ ಹೋಗುತ್ತಿದ್ದರು. ಹೀಗೆ ಹಳ್ಳಿಗಳಿಗೆ ಹೋದಾಗ ಅಲ್ಲಿನ ಯುವಕರನ್ನು ತಮ್ಮೊಡನೆ ಪಾದಯಾತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ಒಂದು ವರ್ಷದ ನಂತರ ಮತ್ತೆ ಗಾಂಧೀಜಿಯವರ ಆಶ್ರಮಕ್ಕೆ ತೆರಳಿದರು. ಮುಂದೆ ಅವರು ಗಾಂಧೀಜಿಯವರ ಆದೇಶದಂತೆ ತೆರಳಿದ್ದು ಧಾಮ್ ನದಿ ದಡದ ಪರಂಧಾಮ ಆಶ್ರಮಕ್ಕೆ. ಅಲ್ಲಿ ಅವರು 30 ವರ್ಷಗಳ ಕಾಲ ಇದ್ದರು. ಅವರಿಗೆ ಪ್ರಿಯವಾದದ್ದು ಕಾಲುನಡಿಗೆ. ಅದನ್ನು ನಿರಂತರವಾಗಿ ಕಾಯ್ದುಕೊಂಡರು. ದೈಹಿಕ ಶ್ರಮ ಅವರ ಜೀವನದ ಭಾಗವಾಗಿತ್ತು. ಅವರು ಅನೇಕ ಬಾರಿ ಕಾರಾಗೃಹವಾಸ ಅನುಭವಿಸಬೇಕಾಯಿತು. ಅಲ್ಲೆಲ್ಲಾ ಅವರು ಅಧ್ಯಯನ ನಿರತರಾಗಿರುತ್ತಿದ್ದರು.

ಎರಡನೇ ಮಹಾಯುದ್ಧದ ನಂತರ ಸ್ವಾತಂತ್ರ್ಯ ಹೋರಾಟ ತೀವ್ರವಾಯಿತು. ವಿನೋಬಾ ಹಳ್ಳಿ ಹಳ್ಳಿಗೆ ಹೋಗಿ ಯುದ್ಧ ವಿರೋಧಿಸಿ ಭಾಷಣ ಮಾಡಿದ್ದರು. ಪರಿಣಾಮ ಮತ್ತೆಮತ್ತೆ ಜೈಲುವಾಸ. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಅವರು ತಮ್ಮ ಆಶ್ರಮದಲ್ಲಿಯೇ ಇದ್ದರು. ಗಾಂಧೀಜಿಯವರ ಬಲಿದಾನವಾದ ನಂತರ ವಿನೋಬಾ ಅವರಿಗೆ ಅನಿಸಿದ್ದು ನಾನು ಮುಂದೇನು ಮಾಡಬೇಕು? ಎಂದು. ಮುಂದೆ ಅವರು ಅನೇಕ ಕಾಲ್ನಡಿಗೆ ಕಾರ್ಯಕ್ರಮ ನಡೆಸಿದರು. ಕಾಲ್ನಡಿಗೆಯಿಂದಲೇ ನಿಜವಾದ ದೇಶದ ದರ್ಶನವಾಗುವುದು ಎಂದು ಅವರು ಹೇಳುತ್ತಿದ್ದರು. ಅವರು ಹೀಗೆ ನಡೆಸಿದ ಪಾದಯಾತ್ರೆಗೆ ಒಂದು ತಿರುವು ದೊರಕಿದ್ದು, ಅವರು ಪೂಚಂಪಳ್ಳಿ ಎಂಬ ಗ್ರಾಮಕ್ಕೆ ಹೋದಾಗ. ಅಲ್ಲಿನ ಬಡವರು ವಿನೋಬಾ ಅವರನ್ನು ಕಂಡು ನಮಗೆ ಸ್ವಲ್ಪ ಜಮೀನು ದೊರಕಿದರೆ ನಾವು ದುಡಿದು ತಿನ್ನುತ್ತೇವೆ ಎಂದರು. ಅಲ್ಲಿನ ಜನರಿಗೆ ಆಗ ಎಂಟು ಹತ್ತು ಎಕರೆ ಜಮೀನು ಬೇಕಾಗಿತ್ತು. ಅವರಿಗೆ ವಿನೋಬಾ ಹೇಳಿದರು: ನೀವು ಒಗ್ಗಟ್ಟಾಗಿ ದುಡಿಯುವ ಮಾತುಕೊಟ್ಟರೆ ನಾನು ಜಮೀನು ಕೊಡಿಸಲು ಪ್ರಯತ್ನಿಸುತ್ತೇನೆ ಎಂದರು. ಆ ಸಭೆಯಲ್ಲಿದ್ದ ಅದೇ ಗ್ರಾಮದ ಜಮೀನುದಾರರೊಬ್ಬರು ತಾವು ಬಡವರಿಗಾಗಿ ಜಮೀನು ಕೊಡಲು ಸಿದ್ಧ ಎಂದರು. ವಿನೋಬಾ ಜಮೀನನ್ನು ದಾನ ಪಡೆದರು. ಅದನ್ನು ಬಡವರಿಗೆ ಹಂಚಿದರು. ಆನಂತರ ಅವರು ಭೂದಾನ ಯಜ್ಞ ಆರಂಭಿಸಿದರು. ಮುಂದಿನ 14 ವರ್ಷಗಳ ಕಾಲ ದೇಶದಲ್ಲಿ ಅವರು ನಡೆಸಿದ ಪಾದಯಾತ್ರೆಯಿಂದ ಸುಮಾರು ನಲವತ್ತೆರಡು ಸಾವಿರ ಎಕರೆ ಭೂಮಿ ಅವರಿಗೆ ದಾನರೂಪದಲ್ಲಿ ಬಂದಿತು. ಅದನ್ನೆಲ್ಲಾ ಭೂರಹಿತರಿಗೆ ಹಂಚಿದರು. ಕೆಲವೆಡೆ ಇಡೀ ಗ್ರಾಮವೇ ಅವರಿಗೆ ಅರ್ಪಿಸಲ್ಪಡುತ್ತಿತ್ತು. ಭೂದಾನ ಪಡೆಯುವುದು, ಅದನ್ನು ಸ್ಥಳದಲ್ಲೇ ವಿತರಿಸುವುದು ಅವರ ಕಾಯಕವಾಗಿತ್ತು. ಇದರಿಂದ ದೇಶದ ಸಾವಿರಾರು ಯುವಕರು ಪ್ರಭಾವಿತರಾಗಿ ಅವರೊಡನೆ ಪಾದಯಾತ್ರೆ ಮಾಡಿದರು. ಭೂದಾನ ಪಡೆದವರಿಗೆ ವಿನೋಬಾ ಕೆಲವು ಷರತ್ತುಗಳನ್ನು ವಿಧಿಸಿ ನೀಡುತ್ತಿದ್ದರು. ಪಡೆದವರು ಶ್ರಮವಹಿಸಿ ದುಡಿಯಬೇಕು ಎಂಬುದು ಅವರ ಆಶಯವಾಗಿತ್ತು. ಅವರು ಮೈಸೂರಿಗೂ ಬಂದಿದ್ದರು. ಆ ಸಮಯದಲ್ಲಿ ರಾಮಾಯಣ ದರ್ಶನ ಬರೆದಿದ್ದ ಕುವೆಂಪು ಅವರನ್ನೂ ಭೇಟಿಯಾಗಿದ್ದರು.

ಅವರು ಮಾಡಿದ ಪಾದಯಾತ್ರೆ ಸುಮಾರು 40 ಸಾವಿರ ಮೈಲು. ಕೊನೆಯ ಹನ್ನೆರಡು ವರ್ಷ ಅವರು ಆಶ್ರಮದಲ್ಲಿಯೇ ಕಾಲಕಳೆದರು. 1982ರ ನವೆಂಬರ್ 15ರಂದು ಅವರು ಇಹಲೋಕ ತ್ಯಜಿಸಿದರು. ಒಬ್ಬ ವ್ಯಕ್ತಿ ನಿಸ್ವಾರ್ಥದಿಂದ ಜನರ ಹಿತ ಬಯಸಿದರೆ ಅವರು ಚಿರಸ್ಥಾಯಿ ಎಂಬುದಕ್ಕೆ ವಿನೋಬಾ ಭಾವೆ ಒಂದು ನಿದರ್ಶನ. ಅವರಿಗೆ ಮುಂದೆ ಮರಣೋತ್ತರವಾಗಿ ಭಾರತರತ್ನ ಪ್ರಶಸ್ತಿ ನೀಡಲಾಯಿತು. ಆದರ್ಶದ ಬದುಕು ಅವರದ್ದಾ ಗಿತ್ತು. ಅವರನ್ನು ದೇಶ ಎಂದಿಗೂ ಸ್ಮರಿಸಿಕೊಳ್ಳುತ್ತದೆ.

ಕೈದಿಗಳಿಗೆ ಮಾದಕ ವಸ್ತುಗಳ ಪೂರೈಕೆ: ಪರಪ್ಪನ ಅಗ್ರಹಾರ ಜೈಲಿನ ವಾರ್ಡನ್ ಬಂಧನ

ಬೆಂಗಳೂರು, ಸೆ.11–ಪರಪ್ಪನ ಅಗ್ರಹಾರ ಜೈಲು ವಾರ್ಡನ್‌ನಿಂದಲೇ ಕೈದಿಗಳಿಗೆ ಮಾದಕ ವಸ್ತುಗಳ ಪೂರೈಕೆ ಮಾಡಲಾಗಿದೆ ಎಂಬುದು ಬಹಿರಂಗಗೊಂಡಿದೆ.

ಕೈದಿಗಳಿಗೆ ಮಾದಕ ವಸ್ತುಗಳ ಪೂರೈಕೆ ಮಾಡಿದ್ದ ಜೈಲಿನ ವಾರ್ಡನ್ ಕಲ್ಲಪ್ಪ ಹೆಚ್ ಅಬಾಚಿ ಎಂಬಾತನನ್ನು ಬಂಧನಕ್ಕೊಳಪಡಿಸಲಾಗಿದೆ. ಈತನಿಂದ 1 ಲಕ್ಷ ರೂ. ಮೌಲ್ಯದ 100 ಗ್ರಾಂ ಆಶಿಶ್ ಆಯಿಲ್ ಜಪ್ತಿ ಮಾಡಲಾಗಿದೆ. ಮಾಜಿ ಸೈನಿಕನಾಗಿರುವ ಕಲ್ಲಪ್ಪ, ಭಾರತೀಯ ಸೇನೆಯಿಂದ ಸ್ವಯಂಪ್ರೇರಿತ ನಿವೃತ್ತಿ ಪಡೆದು 2018ರಲ್ಲಿ ಮಾಜಿ ಸೈನಿಕ ಕೋಟಾದಡಿಯಲ್ಲಿ ಕಾರಾಗೃಹ ಸೇವೆಗೆ ಸೇರ್ಪಡೆಗೊಂಡಿದ್ದ. ಈತ ಈ ಹಿಂದೆ ಧಾರವಾಡ ಜೈಲಿನಲ್ಲಿ ವಾರ್ಡರ್ ಆಗಿ ಸೇವೆ ಸಲ್ಲಿಸಿದ್ದು, ಮೂರು ತಿಂಗಳ ಹಿಂದಷ್ಟೇ ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ವರ್ಗಾವಣೆಗೊಂಂಡಿದ್ದ ಎಂದು ತಿಳಿದುಬಂದಿದೆ.

ಭಾನುವಾರ ರಾತ್ರಿ ಜೈಲಿನ ಡ್ಯೂಟಿಗೆ ಬರುವ ವೇಳೆ ಸಿಐಎಸ್‌ಎಫ್ ಸಿಬ್ಬಂದಿಗಳಿಂದ ಪ್ರವೇಶ ದ್ವಾರದ ಬಳಿ ಕಲ್ಲಪ್ಪ ಅವರನ್ನು ಪರಿಶೀಲನೆ ಮಾಡಲಾಗಿದ್ದು, ಈ ವೇಳೆ ಜೇಬಿನಲ್ಲಿ ತಂಬಾಕು ಮತ್ತು ಆಶಿಶ್ ಆಯಿಲ್ ಪತ್ತೆ ಆಗಿದೆ.

ಬಳಿಕ ಕಲ್ಲಪ್ಪನನ್ನು ಬಂಧಿಸಿದ ಪೊಲೀಸರು ಆತನಿಂದ 100 ಗ್ರಾಂ ಆಶಿಶ್ ಆಯಿಲ್ ಜಪ್ತಿ ಮಾಡಿದ್ದಾರೆ. ಇದೀಗ ಈತನ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಮತ್ತು ಕರ್ನಾಟಕ ಕಾರಾಗೃಹ ಕಾಯ್ದೆಯ ಸೆಕ್ಷನ್ 42ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ.

ಕಲ್ಲಪ್ಪ ಯಾರಿಗಾಗಿ ಮಾದಕವಸ್ತುಗಳನ್ನು ಕಳ್ಳಸಾಗಣೆ ಮಾಡುತ್ತಿದ್ದ ಎಂಬುದನ್ನು ಪತ್ತೆ ಮಾಡಲು ವಿಚಾರಣೆ ನಡೆಸಲಾಗುತ್ತಿದೆ. ಬಂಧನದ ನಂತರ ಆರೋಪಿಯನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಜೈಲು ಮೂಲಗಳು ತಿಳಿಸಿವೆ.

ವೇದಿಕೆಯಲ್ಲೇ ಡೊನಾಲ್ಡ್ ಟ್ರಂಪ್ ಆಪ್ತ ಚಾರ್ಲಿ ಕಿರ್ಕ್ ಗುಂಡಿಕ್ಕಿ ಹತ್ಯೆ

ವಾಷಿಂಗ್ಟನ್: ಉತಾಹ್ ವ್ಯಾಲಿ ವಿಶ್ವವಿದ್ಯಾಲಯದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಪ್ತ 31 ವರ್ಷದ ಕಿರ್ಕ್ ಅವರನ್ನು ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದಾರೆ. ತನಿಖಾಧಿಕಾರಿಗಳು ಹತ್ತಿರದ ಕಟ್ಟಡದ ಛಾವಣಿಯಿಂದ ಮಾರಕ ಗುಂಡು ಹಾರಿಸಲಾಗಿದೆ ಎಂದು ಉಲ್ಲೇಖಿಸಿದ್ದಾರೆ.

ಗವರ್ನರ್ ಸ್ಪೆನ್ಸರ್ ಕಾಕ್ಸ್ ಆರಂಭದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪೊಲೀಸರು ಶಂಕಿತನನ್ನು ವಶಕ್ಕೆ ತೆಗೆದುಕೊಂಡಿದ್ದಾರೆಂದು ಹೇಳಿದ್ದರು. ಆದರೆ ಉತಾಹ್ ಸಾರ್ವಜನಿಕ ಸುರಕ್ಷತಾ ಇಲಾಖೆ ಆಯುಕ್ತ ಬ್ಯೂ ಮೇಸನ್, ಶಂಕಿತ ಅಪರಾಧಿ ತಲೆಮರೆಸಿಕೊಂಡಿದ್ದಾನೆ ಎಂದಿದ್ದರು. ಎಫ್‌ಬಿಐ ನಿರ್ದೇಶಕ ಕಾಶ್ ಪಟೇಲ್, ಹೆಸರು



ಹೇಳದ ವ್ಯಕ್ತಿಯನ್ನು ವಿಚಾರಣೆಗಾಗಿ ಬಂಧಿಸಲಾಗಿದೆ. ನಂತರ ಬಿಡುಗಡೆ ಮಾಡಲಾಯಿತು. ನಮ್ಮ ತನಿಖೆ ಮುಂದುವರೆದಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಬರೆದಿದ್ದಾರೆ. ಎಫ್‌ಬಿಐ, ಉತಾಹ್ ಕೌಂಟಿ ಅಟಾರ್ನಿ ಕಚೇರಿ, ಉತಾಹ್ ಕೌಂಟಿ ಶೆರಿಫ್ ಕಚೇರಿ, ಸ್ಥಳೀಯ ಪೊಲೀಸ್ ಇಲಾಖೆ ಸಹಭಾಗಿತ್ವದಲ್ಲಿ ತನಿಖೆ ಮುಂದುವರೆದಿದೆ.

ಸಂಘರ್ಷದ ಬದಲು ಸಾಮರಸ್ಯದ ದಸರಾ ಅನಿವಾರ್ಯ

ಕವಯತ್ರಿ ಡಾ.ಲತಾ ರಾಜಶೇಖರ್ ಅಭಿಮತ



ಮೈಸೂರು ದಸರಾ–ಒಂದು ಅವಲೋಕನ ಕಾರ್ಯಕ್ರಮಕ್ಕೆ ಡಾ.ಲತಾ ರಾಜಶೇಖರ್ ಚಾಲನೆ ನೀಡಿದರು.

ಮೈಸೂರು, ಸೆ.11(ವಿವಿಹೆಚ್)–ದಸರೆ ಎಂದರೆ ಸಾಮರಸ್ಯಕ್ಕೆ ಹೆಸರುವಾಸಿ. ಹೀಗಾಗಿ ಎಲ್ಲಾ ರಾಜಕೀಯ ಪಕ್ಷಗಳು ಪ್ರತಿಷ್ಠೆಯನ್ನು ಕೈಬಿಟ್ಟು ಜನಹಿತದ ಹಿತದೃಷ್ಟಿಯಿಂದ ಸಂಘರ್ಷದ ಬದಲು ಸಾಮರಸ್ಯದ ದಸರಾ ಆಚರಣೆಗೆ ಮುಂದಾಗಬೇಕು ಎಂದು ಕವಯತ್ರಿ ಡಾ.ಲತಾ ರಾಜಶೇಖರ್ ಅಭಿಪ್ರಾಯಪಟ್ಟರು.

ಜನಪರ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟವು ನಗರದ ಕೃಷ್ಣ ಮೂರ್ತಿಪುರಂನ ಶಾರದಾವಿಲಾಸ ಕಾಲೇಜಿನ ಎಂ.ವೆಂಕಟಕೃಷ್ಣಯ್ಯ ಸಭಾಂ ಗಣದಲ್ಲಿ ಏರ್ಪಡಿಸಿದ್ದ ಮೈಸೂರು ದಸರಾ –ಒಂದು ಅವಲೋಕನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಇಂದಿನ ಯುವಪೀಳಿಗೆಗೆ ದಸರಾ ಪರಂಪರೆ, ಸಂಸ್ಕೃತಿಯನ್ನು ತಿಳಿಸುವ ಕೆಲಸ ಆಗಬೇಕು. ಈಗಿನ ಯುವಜನತೆಗೆ ದಸರಾ ಎಂದರೆ ಯುವ ಸಂಭ್ರಮ ಹಾಗೂ ಯುವ ದಸರಾ ಮಾತ್ರ ಆಗಿದೆ. ಹೀಗಾಗಿ ವಿಜಯನಗರ ಸಾಮ್ರಾಜ್ಯ ಪತನಾನಂತರ ಮೈಸೂರು ರಾಜರು ದಸರೆಯನ್ನು ಹೇಗೆ ನಡೆಸಿಕೊಂಡು ಬಂದರು. ವಿಶ್ವ ಪ್ರಸಿದ್ಧಿ ಮಾಡಿದರು ಎಂದು ತಿಳಿಸಬೇಕಾಗಿದೆ ಎಂದರು.

ದೇಶದ ವಿವಿಧೆಡೆ ಬೇರೆ–ಬೇರೆ ಹೆಸರಿನಲ್ಲಿ ದಸರೆ ಆಚರಿಸಿದರೂ ಯಾವುದು ಕೂಡ ಮೈಸೂರಿನಷ್ಟು ಪ್ರಸಿದ್ಧಿಯಾಗಿಲ್ಲ. ಮೈಸೂರು ದಸರೆಗೆ ಅಷ್ಟೊಂದು ಮಹತ್ವ ಇದೆ. ಭಾರತೀಯ ಸಂಸ್ಕೃತಿಯಲ್ಲಿ ದುರ್ಗಾ ಪೂಜೆ ಅತ್ಯಂತ ಮಹತ್ವವಾದದ್ದು ಎಂದು ಹೇಳಿದರು.

ಪ್ರಧಾನ ಭಾಷಣ ಮಾಡಿದ ನಿವೃತ್ತ ತಹಶೀಲ್ದಾರ್ ಡಾ.ವಿ.ರಂಗನಾಥ್, ಮೈಸೂರು ದಸರೆಗೆ 416 ವರ್ಷಗಳ ಇತಿಹಾಸ ಇದೆ. ಆದರೆ ನಮ್ಮ ಪುರಾಣಗಳು, ಗ್ರಂಥಗಳಲ್ಲಿ ಉಲ್ಲೇಖಿಸಿರುವಂತೆ ನವರಾತ್ರಿ ಉತ್ಸವಕ್ಕೆ ನಾಲ್ಕೈದು ಸಾವಿರ ವರ್ಷಗಳ ಇತಿಹಾಸವೇ ಇದೆ. ಇಡೀ ಪ್ರಪಂಚದಲ್ಲೇ ಸುಮಾರು 4 ಸಾವಿರ ವರ್ಷಗಳಿಗಿಂತಲೂ ಹಿಂದಿನಿಂದ ನಡೆದು ಕೊಂಡು ಬಂದ ಏಕೈಕ ಆಚರಣೆ ನವರಾತ್ರಿಯಾಗಿದ್ದು, ಭಾರತೀಯರಿಗೆ ಇದೊಂದು ಧಾರ್ಮಿಕ ಉತ್ಸವ ಎಂದರು.

ಶಾರದಾವಿಲಾಸ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್.ನರಸಿಂಹ ಮಾತನಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎಂ.ಮಹದೇವ ಸ್ವಾಮಿ, ಪ್ರಾಂಶುಪಾಲರಾದ ಡಾ.ಎಂ.ದೇವಿಕಾ, ಜನಪರ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಎಂ.ಮಹೇಶ್ ಚಿಕ್ಕಲ್ಲೂರು, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್ ಇದ್ದರು. ವಿದ್ಯಾರ್ಥಿನಿ ಪ್ರಿಯಾಂಕಾ ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಜಿ.ಆನಂದ್ ನಿರೂಪಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಕೆ.ಎನ್.ಗಿರೀಶ್ ವಂದಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ
ಶುಕ್ರವಾರ 12 ಸೆಪ್ಟೆಂಬರ್ 2025

ಬಾನು ಮುಷ್ತಾಕ್ ಮತ ಬಿಡಿ; ನನ್ನನ್ನು ದಸರಾ ಉದ್ಘಾಟನೆಗೆ ಪರಿಗಣಿಸಿ: ಸಿಪಿಕೆ

ಮೈಸೂರು,ಸೆ.11(ಎಸ್‌ಪಿಎನ್)– ಈ ಬಾರಿ ದಸರಾ ಉದ್ಘಾಟಕರ ಆಯ್ಕೆ ವಿಚಾರವಾಗಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಸರ್ಕಾರದ ನಡೆಯನ್ನು ಪ್ರಶ್ನಿಸಿದ್ದಾರೆ.



ಈ ಬಾರಿ ದಸರಾ ಉದ್ಘಾಟಕರಾದ ಬಾನು ಮುಷ್ತಾಕ್ ಮುಸ್ಲಿಮ್ ಇತ್ಯಾದಿ ಬಿಡಿ... ನಾನೂ ದಸರಾ ಉದ್ಘಾಟನೆಗೆ ಅರ್ಹನಿದ್ದೇನೆ. ನನ್ನನ್ನು ಹೋದ ವರ್ಷ, ಆಚೆ ವರ್ಷ ರಾಜ್ಯ ಸರ್ಕಾರ ಆಯ್ಕೆ ಮಾಡಿಲ್ಲ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಬೇಸರ ವ್ಯಕ್ತಪಡಿಸಿರುವ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಬಾನು ಮುಷ್ತಾಕ್ ಮತದ ವಿಷಯ ಬಿಡಿ.., ಅವರಿಗಿಂತ ಹಿರಿಯರ ಸಾಧನೆಯನ್ನು ಪರಿಗಣಿಸಿ ಈ ಬಾರಿ ದಸರಾ ಉದ್ಘಾಟನೆಗೆ ನನ್ನನ್ನು ಪರಿಗಣಿಸಬಹುದಿತ್ತು. ಈ ವಿಚಾರವಾಗಿ ಸಿಪಿಕೆ ದಸರಾ ಉದ್ಘಾಟನೆ ಮಾಡಲಿ ಎಂದು ಅನೇಕ ಗಣ್ಯರು ಪತ್ರಿಕೆಗಳ ಮೂಲಕ ಸರ್ಕಾರಕ್ಕೆ ಸಲಹೆ ನೀಡಿದ್ದರು. ಯಾವುದೇ ವಿಷಯದಲ್ಲೂ ಕುವೆಂಪು ನಾನೇಕೆ ಅಹಂಕಾರಪಡಬಾರದು ಎನ್ನುತ್ತಿದ್ದರು. ಈ ವಿಚಾರದಲ್ಲಿ ಬಾನು ಮುಷ್ತಾಕ್ ಮತ ನಮಗೆ ಮುಖ್ಯವಲ್ಲ. ಮತ ವಿಚಾರ ಬಂದರೆ, ಅದು ತೊಡಕಿನ ವಿಚಾರ. ಅಲ್ಲದೆ, ನಾನೂ ಸಿದ್ದರಾಮಯ್ಯರಿಗೆ ಪರಿಚಯನಿದ್ದೇನೆ. ನನ್ನನ್ನು ದಸರಾ ಉದ್ಘಾಟನೆಗೆ ಪರಿಗಣಿಸಬಹುದಿತ್ತು ಎಂದು ತಿಳಿಸಿದ್ದಾರೆ.

ನೂತನ ಪದಾಧಿಕಾರಿಗಳು



ಮೈಸೂರಿನ ಬಿಎಸ್‌ಎನ್‌ಎಲ್ ಟೆಲಿಕಾಂ ತರಬೇತಿ ಕೇಂದ್ರದಲ್ಲಿ ನಡೆದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮೆಟಿರಿಯಲ್ಸ್ ಮ್ಯಾನೇಜ್‌ಮೆಂಟ್, ಮೈಸೂರು ಶಾಖೆಯ 64ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ 2025–27ನೇ ಸಾಲಿನ ನೂತನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಈ ವೇಳೆ ಮಾಜಿ ಅಧ್ಯಕ್ಷ ಎಂ.ಎನ್.ಸುರೇಶ್, ನೂತನ ಅಧ್ಯಕ್ಷ ಆರ್.ನಂಜುಂಡ ನಾಯಕ ಅವರೊಂದಿಗೆ ಐಐಎಂಎಂ ಇಂಡಿಯಾ ಹಿರಿಯ ಉಪಾಧ್ಯಕ್ಷ ಪಿ.ಎಂ.ಬಿದ್ದಪ್ಪ, ನೂತನ ಸದಸ್ಯರನ್ನು ಕಾಣಬಹುದು. ಎಂ.ಜೆ.ಯೋಗೇಶ್ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಹುಟ್ಟುಹಬ್ಬದ ಶುಭಾಶಯ...



ಮೈಸೂರು ಬಿಜೆಪಿ ನಗರ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಅವರಿಗೆ ಮಾಜಿ ಉಪಮೇಯರ್, ಮೈಸೂರು ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ, ನಿಗಮ ಮಂಡಳಿ ಮಾಜಿ ಅಧ್ಯಕ್ಷ ಶಿವಕುಮಾರ, ನಗರ ಪ್ರಧಾನ ಕಾರ್ಯದರ್ಶಿ ರಘು, ವಿ.ಶ್ರೀನಿವಾಸಪ್ರಸಾದ್ ಅಭಿಮಾನಿಗಳ ಬಳಗದ ಅಧ್ಯಕ್ಷ ಎಂ.ರಾಜಕುಮಾರ್, ಮುಖಂಡ ಮುರಳೀಧರ್, ಚಾಮುಂಡೇಶ್ವರಿ ಮಂಡಲ ಅಧ್ಯಕ್ಷ ರವಿ, ಅಶೋಕಪುರಂ ಮಹೇಶ್, ಲೋಹಿತ್, ಕೆ.ಮಹದೇವು ಇನ್ನಿತರರು ಉಪಸ್ಥಿತರಿದ್ದರು.

ಜಾತಿಗಣತಿಯಲ್ಲಿ ಬ್ರಾಹ್ಮಣ ಸಮಾಜ ವಿಂಗಡಿಸದಿರಿ

ಬ್ರಾಹ್ಮಣ ಸಮಾಜದಿಂದ ಜಿಲ್ಲಾಧಿಕಾರಿಗೆ ಮನವಿ



ಮೈಸೂರು ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಪರ ಜಿಲ್ಲಾಧಿಕಾರಿ ಶಿವರಾಜು ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಸೆ.11–ರಾಜ್ಯ ಹಿಂದುಳಿದ ಆಯೋಗದ ಅಧ್ಯಕ್ಷ ಮಧುಸೂದನ್ ನಾಯಕ ಅಧ್ಯಕ್ಷತೆಯಲ್ಲಿ ರಾಜ್ಯಾದ್ಯಂತ ನಡೆಯುವ ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಬ್ರಾಹ್ಮಣ ಸಮಾಜವನ್ನು ಅನೇಕ ಪಂಗಡಗಳಿಗೆ ವಿಭಜಿಸಿರುವ ಕುರಿತು ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಪರಿಷತ್ ಆಕ್ಷೇಪಣೆ ಸಲ್ಲಿಸಿದ್ದಾರೆ.

ಮೈಸೂರು ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿ ಅಪರ ಜಿಲ್ಲಾಧಿಕಾರಿ ಶಿವರಾಜು ಅವರಿಗೆ ಮನವಿ ಸಲ್ಲಿಸಿ, ವಿಭಜನೆಗಳಿಂದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಅರ್ಹ ಬ್ರಾಹ್ಮಣರಿಗೆ ಸರ್ಕಾರದ ಸವಲತ್ತು ತಲುಪುವಲ್ಲಿ ತೊಂದರೆ ಉಂಟಾಗುತ್ತದೆ. ಜೊತೆಗೆ ಸಮಾಜದಲ್ಲಿ ಅಗತ್ಯ ಗೊಂದಲ ಸೃಷ್ಟಿಯಾಗುವ ಸಾಧ್ಯತೆಯಿದೆ ಎಂದು ಹೇಳಿದರು.

ಸಮೀಕ್ಷೆಯಲ್ಲಿ ಬ್ರಾಹ್ಮಣ ಸಮುದಾಯವನ್ನು ವಿವಿಧ ಕ್ರಮಾಂಕಗಳಲ್ಲಿ ಬೇರ್ಪಡಿಸುವ ಬದಲು ಬ್ರಾಹ್ಮಣ ಎಂಬ ಏಕೀಕೃತ ಗುರುತನ್ನು (ಕ್ರಮ ಸಂಖ್ಯೆ 210) ಮಾತ್ರ ನೀಡುವಂತೆ ಆಗ್ರಹಿಸಲಾಯಿತು ಎಂದು ಹೇಳಿದರು.

ಪಟ್ಟಿಯಲ್ಲಿ ಬ್ರಾಹ್ಮಣ ಕ್ರಿಶ್ಚಿಯನ್, ಬ್ರಾಹ್ಮಣ ಮುಸ್ಲಿಂ ಎಂದೆಲ್ಲಾ ಹೆಸರುಗಳಿರುವುದು ಹೊಸ ಗೊಂದಲಕ್ಕೆ ಕಾರಣವಾಗಿವೆ. ಹೀಗಿರಲು ಸಾಧ್ಯವೇ ಇಲ್ಲ, ತಕ್ಷಣವೇ ಈ ಹೆಸರುಗಳನ್ನು ಕೈಬಿಡಬೇಕು ಎಂದು ಆಗ್ರಹಿಸಿದ್ದಾರೆ.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷ ಕಡಕೋಳ ಜಗದೀಶ್ ಮಾತನಾಡಿ, ಸಮೀಕ್ಷೆಗೆ ಬಂದಾಗ ಬ್ರಾಹ್ಮಣ ಸಮುದಾಯದವರು 'ಹಿಂದೂ ಬ್ರಾಹ್ಮಣ' ಎಂದಷ್ಟೇ ನಮೂದಿಸಬೇಕು. ಎಷ್ಟೇ ಕಾಲಂಗಳು ಇರಲಿ, ಅಲ್ಲಿ ಬ್ರಾಹ್ಮಣ ಉಪಪಂಗಡಗಳನ್ನು ನಮೂದಿಸುವ ಅಗತ್ಯ ಇಲ್ಲ. ಉಳಿದಂತೆ ಸಾಮಾಜಿಕ, ಶೈಕ್ಷಣಿಕ ವಿವರ ನೀಡಬೇಕು. ಇದರಿಂದಷ್ಟೇ ಬ್ರಾಹ್ಮಣರ ನಿಜವಾದ ಜನಸಂಖ್ಯೆಯ ವಿವರ, ಅವರ ನೈಜ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ತಿಳಿಯಲು ಸಾಧ್ಯ ಎಂದು ಅವರು ಮನವಿ ಮಾಡಿದರು.

ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷ ಕಡಕೋಳ ಜಗದೀಶ್, ವಿಪ್ರ ಮುಖಂಡರಾದ ಹರೀಶ್, ನಿರೂಪಕ ಅಜಯ್ ಶಾಸ್ತ್ರಿ ಸೇರಿದಂತೆ ಇನ್ನಿತರ ವಿಪ್ರ ಮುಖಂಡರು ಉಪಸ್ಥಿತರಿದ್ದರು.

ವಿವಿಧ ಇಲಾಖೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಮೈಸೂರು, ಸೆ.11– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ವಿವಿಧ ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ಕಾಲದ ತರಬೇತಿಯನ್ನು ನೀಡಲಾಗುತ್ತದೆ. ಆಸಕ್ತರು ಸೆಪ್ಟೆಂಬರ್ 20 ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ನೊಂದಾಯಿಸಿ ಕೊಳ್ಳಲು ದೂಸಂ: 0821–2515944 ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಕುಲಸಚಿವರಾದ ಪ್ರೊ. ನವೀನ್ ಕುಮಾರ್ ಎಸ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ; ಮದ್ದೂರು ಗಣೇಶ ಮೆರವಣಿಗೆ ವೇಳೆ ಕಲ್ಲು ತೂರಾಟ ಖಂಡಿಸಿ

ಮೈಸೂರಲ್ಲಿ ವಿಶ್ವ ಹಿಂದೂ ಪರಿಷದ್ ಪ್ರತಿಭಟನೆ

ಮೈಸೂರು,ಸೆ.11(ಪಿಎಂ)– ನಾಡಹಬ್ಬ ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ಬಾನು ಮುಷ್ತಾಕ್ ಅವರನ್ನು ರಾಜ್ಯ ಸರ್ಕಾರ ಆಯ್ಕೆ ಮಾಡಿರುವುದು ಹಾಗೂ ಮದ್ದೂರಿನಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ಮೇಲೆ ಕಲ್ಲು ತೂರಲಾಗಿದ್ದನ್ನು ಖಂಡಿಸಿ ವಿಶ್ವ ಹಿಂದೂ ಪರಿಷದ್ (ವಿಹೆಚ್‌ಪಿ) ಮೈಸೂರು ನಗರ ಜಿಲ್ಲಾ ಘಟಕದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರಿನ ಗಾಂಧಿಚೌಕದಲ್ಲಿ ಗುರುವಾರ ವಿಹೆಚ್‌ಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿಚೌಕದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಮಹಿಳಾ ಮೋರ್ಚಾ ಮುಖಂಡರಾದ ಹೇಮಾ ನಂದೀಶ್ ಮಾತನಾಡಿ, ಇಂದು ಇಷ್ಟೊಂದು ಹೋರಾಟ ಮಾಡುತ್ತಿದ್ದರೂ ಕೇವಲ ಬಾನು ಮುಷ್ತಾಕ್ ಅವರನ್ನು ಮಾತ್ರ ದಸರಾ ಉದ್ಘಾಟನೆಗೆ ಆಹ್ವಾನಿಸಲಾಗಿದೆ. ಆದರೆ ಬೂಕರ್ ಪ್ರಶಸ್ತಿ ಲಭಿಸಲು ಪ್ರಮುಖ ಕಾರಣಕರ್ತರಾದ ದೀಪಾ ಬಾಸ್ತಿ ಅವರನ್ನು ದಸರಾ ಉದ್ಘಾಟನೆಗೆ ಆಯ್ಕೆ ಮಾಡಿಲ್ಲ. ಇದಕ್ಕೆ ಕಾರಣವೇನು ಎಂದು ಆಕ್ರೋಶ ವ್ಯಕ್ತಪಡಿಸಿದರು.

> ಸಾರ್ವಜನಿಕ ರಸ್ತೆಯಲ್ಲಿ ಗಣಪತಿ ಮೆರವಣಿಗೆ ಹೋದರೆ ಇವರಿಗೇನೂ ಕಷ್ಟ. ಹಿಂದೂಗಳು ಯಾರೂ ಕಲ್ಲು ಹೊಡೆಯುವುದಿಲ್ಲ. ಅಂದ ಮಾತ್ರಕ್ಕೆ ನಮಗೆ ಧೈರ್ಯ ಇಲ್ಲವೆಂದೇನಿಲ್ಲ. ಅಂತಹ ಮಾನಸಿಕತೆ ನಮ್ಮದಲ್ಲ. ಚಾಮುಂಡೇಶ್ವರಿ ಹಬ್ಬದ ದಿನಗಳಿವು. ಈ ಸಂದರ್ಭದಲ್ಲಿ ನಾವೆಲ್ಲಾ ಖುಷಿಯಿಂದ ಇರಬೇಕಿತ್ತು. ಆದರೆ ಪ್ರತಿಭಟನೆ ಮಾಡುವಂತಹ ಸೂತಕದ ವಾತಾವರಣದಲ್ಲಿದ್ದೇವೆ. ಈ ಸೂತಕದ ವಾತಾವರಣಕ್ಕೆ ಮೈಸೂರಿನವರೇ ಆದ ಸಿದ್ದರಾಮಯ್ಯ ಅವರೇ ನೇರ ಕಾರಣ. ಇವರು ಎಲ್ಲಿಯವರೆಗೆ ರಾಜ್ಯದ ಮುಖ್ಯಮಂತ್ರಿ ಆಗಿರುತ್ತಾರೋ ಅಲ್ಲಿಯವರೆಗೆ ರಾಜ್ಯಕ್ಕೆ ಸೂತಕ.
> -ಅಡ್ಡಂಡ ಸಿ.ಕಾರ್ಯಪ್ಪ

ನೀವೇನಾದರೂ ಬಾನು ಮುಷ್ತಾಕ್ ಅವರನ್ನು ಕರೆದು ಮೈಸೂರಿನಲ್ಲಿ ದಸರಾ ಉದ್ಘಾಟನೆ ಮಾಡಿಸುವುದಾದರೆ ಅವರು ನಮ್ಮ ಧಾರ್ಮಿಕ ಭಾವನೆ ಒಪ್ಪಿ ಬರಲು ಹೇಳಿ. ಅವರು ಹಾಗೆ ಬಂದಲ್ಲಿ ನಾವೆಲ್ಲಾ ಸೇರಿ ಸಿಂಧೂರ ತಿಲಕವಿಟ್ಟು ಅವರನ್ನು ಸ್ವಾಗತ ಮಾಡುತ್ತೇವೆ. ಅವರು ಸಿಂಧೂರ ತಿಲಕ ಇಡದೇ ಹೋದರೆ ಯಾವುದೇ ಕಾರಣಕ್ಕೂ ಬರಕೂಡದು ಎಂದು ಆಕ್ರೋಶ ವ್ಯಕ್ತಪಡಿಸಿದರು.


ವಿಹೆಚ್‌ಪಿ ಜಿಲ್ಲಾ ಉಪಾಧ್ಯಕ್ಷ ಜಗದೀಶ್ ಹೆಬ್ಬಾರ್ ಮಾತನಾಡಿ, ಬಾನು ಮುಷ್ತಾಕ್ ಅವರು ಸಾಹಿತಿ ಇರಬಹುದು. ಆದರೆ ಅವರು ಭುವನೇಶ್ವರಿಯನ್ನು ಅಪಮಾನಿಸಿದ್ದಾರೆ. ಅವರು ಹೀಗಲಾದರೂ ಚಾಮುಂಡೇಶ್ವರಿ ಪ್ರಸಾದ ತೆಗೆದುಕೊಂಡು, ಹಣೆಗೆ ತಿಲಕವಿಟ್ಟು ಉದ್ಘಾಟನೆ ಮಾಡಬೇಕು ಎಂದು ಒತ್ತಾಯಿಸಿದರು.

ವಿಹೆಚ್‌ಪಿ ಮೈಸೂರು ಘಟಕದ ಸಹ ಕಾರ್ಯದರ್ಶಿ ಅರುಣಾಚಲಂ ಮಾತನಾಡಿ, ಇಂಗ್ಲಿಷ್ ಭಾಷಾಂತರಕ್ಕೆ ಬೂಕರ್ ಪ್ರಶಸ್ತಿ ಬಂದಿದ್ದು, ಹಾಗಾಗಿ ದೀಪಾ ಬಾಸ್ತಿ ಅವರಿಗೂ ಪ್ರಶಸ್ತಿ ಸೇರಿದೆ. ಈ ಹಿನ್ನೆಲೆಯಲ್ಲಿ ಇಬ್ಬರನ್ನೂ ಆಹ್ವಾನಿಸುವುದೇ ಸೂಕ್ತ ಬಾನು ಮುಷ್ತಾಕ್ ಅವರು ಸಿಂಧೂರವಿಲ್ಲದೇ ಹಾಗೂ ಅವರೊಬ್ಬರೇ ದಸರಾ ಉದ್ಘಾಟನೆಗೆ ಬಂದರೆ ಚಾಮುಂಡಿಬೆಟ್ಟದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ನಾಟಕಕಾರ ಅಡ್ಡಂಡ ಸಿ.ಕಾರ್ಯಪ್ಪ ಮಾತನಾಡಿದರು. ಬಿಜೆಪಿ ಮುಖಂಡ ಮಲ್ಲ ರಾಜೇ ಅರಸ್, ಹಿಂದೂಪರ ಮುಖಂಡರಾದ ಮಧು ಶಂಕರ್, ಅಂಬಿಕಾ, ಪಡುವಾರಹಳ್ಳಿ ರಾಮಕೃಷ್ಣ, ರಾಕೇಶ್ ಭಟ್, ಶಿವು ಪಟೇಲ್, ಎಂ.ಶೋಭಾ ಮತ್ತಿತರರು ಹಾಜರಿದ್ದರು.

ದಸರಾಗೆ ಇನ್ನು 10 ದಿನ ಬಾಕಿ; ಮೈಸೂರಲ್ಲಿ ಬರೀ ತೇಪೆ ಕಾರ್ಯ

ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ವ್ಯಂಗ್ಯ



ಮೈಸೂರು, ಸೆ.11(ಎಂಕೆ)– ಮೈಸೂರು ದಸರಾ ಉದ್ಘಾಟನೆಗೆ ಇನ್ನೂ ಕೇವಲ 10 ದಿನಗಳಷ್ಟೇ ಬಾಕಿ ಇದ್ದು, ರಸ್ತೆಗಳಿಗೆ ತೇಪೆ ಹಚ್ಚುವ, ಸುಣ್ಣ–ಬಣ್ಣ ಬಳಿಯುವ ಕಾಮಗಾರಿ ಬಿಟ್ಟರೆ, ಯಾವೊಂದು ಗುರುತರ ಅಭಿವೃದ್ಧಿ ಕಾಮಗಾರಿಯೂ ನಡೆಯುತ್ತಿಲ್ಲ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆಕ್ಷೇಪಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ದಸರಾ ಸಿದ್ಧತೆ ಕುರಿತು ಪ್ರತಿಕ್ರಿಯಿಸಿದ ಅವರು, ಈ ವರ್ಷದ ದಸರಾ ಉದ್ಘಾಟಕರ ವಿಷಯ ಗೊಂದಲದಿಂದ ಕೂಡಿದ್ದು, ಅನುದಾನ ಬಿಡುಗಡೆಯಲ್ಲಿಯೂ ಸರಿಯಾದ ವ್ಯವಸ್ಥೆಯಾಗಿಲ್ಲ ಎಂಬುದು ನಗರವನ್ನು ಸುತ್ತಾಡಿದರೆ ಸ್ಪಷ್ಟವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ದಸರಾ ಬಂದಾಗ ಮೈಸೂರಿನಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದವು. ಆದರೆ, ಈ ವರ್ಷ ದಸರಾ ವಸ್ತುಪ್ರದರ್ಶನ ಬಿಟ್ಟರೆ, ಯಾವೊಂದು ಅಭಿವೃದ್ಧಿ ಕಾಮಗಾರಿಗಳು ಕಾಣುತ್ತಿಲ್ಲ. ಲೈಟಿಂಗ್ ಜೊತೆಗೆ ಬರೀ ತೆಪೆ ಹಚ್ಚುವ ಕೆಲಸ ಮಾತ್ರ ನಡೆಯುತ್ತಿದ್ದು, ದಸರಾ ಸಂಭ್ರಮವೇ ಇಲ್ಲ. ರಾಜಮಾರ್ಗದಲ್ಲಿ ಕಳೆದ ವರ್ಷ ಮುರಿದು ಬಿದ್ದಿದ್ದ ಕಲ್ಲಿನ ಕಂಬಗಳನ್ನು ವರ್ಷ ಕಳೆದರೂ ಮರು ಜೋಡಣೆ ಮಾಡಿಲ್ಲ. ತಯಾರಿಯ ಕೊರತೆ ಎದ್ದು ಕಾಣುತ್ತಿದೆ ಎಂದರು.

ಹಾಗಾಗಿಯೇ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ಒಳಗಡೆಯೇ ದಸರಾ ಅಭಿವೃದ್ಧಿ ಪ್ರಾಧಿಕಾರ ಮಾಡುವಂತೆ ಒತ್ತಾಯಿಸಿದ್ದು. ಆಗಲಾದರೂ ವರ್ಷ ಪೂರ್ತಿ ಕೆಲಸಗಳಾಗುತ್ತೆ ಎಂದು ಹೇಳಿದ್ದೆವು. ಆದರೆ ಅದನ್ನು ಈ ಸರ್ಕಾರ ಮಾಡಿಲ್ಲ. ಪ್ರವಾಸಿಗರಿಗೆ ಎಲ್ಲಿ ಹಳ್ಳ ಇದೆ, ಎಲ್ಲಿ ಕಾಲಿಡಬೇಕು ಎಂದು ಗೊತ್ತಾಗದಷ್ಟು ಮಟ್ಟಕ್ಕೆ ಕಾಮಗಾರಿಗಳು ನಡೆಯುತ್ತಿದೆ. ಆದ್ದರಿಂದ ಇನ್ನೂ ಉಳಿದ 10 ದಿನಗಳಲ್ಲಾದರೂ ಬರುವಂತಹ ಪ್ರವಾಸಿಗರಿಗೆ ತೊಂದರೆಯಾಗದಂತೆ ಕಾಮಗಾರಿ ನಡೆಸುವಂತೆ ಆಗ್ರಹಿಸಿದರು.

25 ರೂಪಾಯಿಯೂ ಬಂದಿಲ್ಲ: ಅಭಿವೃದ್ಧಿ ಹಿನ್ನಲೆಯಲ್ಲಿ ಕಾಂಗ್ರೆಸ್ ಶಾಸಕರಿಗೆ 50 ಕೋಟಿ ರೂ., ವಿರೋಧ ಪಕ್ಷದ ಶಾಸಕರಿಗೆ 25 ಕೋಟಿ ರೂ. ವಿಶೇಷ ಅನುದಾನ ನೀಡುವುದಾಗಿ ತಾರತಮ್ಯ ಮಾಡಿ ಘೋಷಣೆ ಮಾಡಿದ್ದಾರೆ. ಆದರೆ, ಇನ್ನೂ 25 ರೂಪಾಯಿಯೂ ಅನುದಾನ ಬಿಡುಗಡೆಯಾಗಿಲ್ಲ ಎಂದು ಶ್ರೀವತ್ಸ ಹೇಳಿದರು.

ಜಾತಿ ರಾಜಕಾರಣ ಮಾಡಲ್ಲ ಎಂದು ಹಿಂದೂಗಳು ಪ್ರತಿಜ್ಞೆ ಮಾಡಬೇಕು

● ಹಿಂದೂಗಳಿಗೆ ಕಲ್ಲೇಟು ಕೊಟ್ಟವರಿಗೆ ತಕ್ಕ ಶಿಕ್ಷೆಯಾಗಬೇಕು ● ನನ್ನನ್ನ ಬಿಜೆಪಿ ವಾಪಸ್ ತೆಗೆದುಕೊಳ್ಳದಿದ್ದರೆ ಹೊಸ ಪಕ್ಷ ಕಟ್ಟುವೆ ● ಮುಂದಿನ ಬಾರಿ ಮದ್ದೂರಿನಲ್ಲಿ ನಡೆಯುವ ಗಣೇಶ ವಿಸರ್ಜನೆಗೆ ನಾನೇ ಬರುವೆ. ● ಮದ್ದೂರಿನಲ್ಲಿ ಯತ್ನಾಳ್ ಅದ್ದೂರಿ ರ್‍ಯಾಲಿ, ಸಾವಿರಾರು ಜನ ಭಾಗಿ

ಬಿಜೆಪಿಯವರು ಹೊಂದಾಣಿಕೆ ರಾಜಕಾರಣವನ್ನು ಬಿಟ್ಟು ನಮ್ಮನ್ನು ತೆಗೆದುಕೊಂಡರೆ ಸರಿ. ಇಲ್ಲದಿದ್ದರೆ ಹೊಸ ಹಿಂದೂ ಪಾರ್ಟಿ ಕಟ್ಟುತ್ತೇನೆ. ಮುಂದಿನ ಬಾರಿ ಮಂಡ್ಯ, ಮೈಸೂರಿನಲ್ಲಿ ಪ್ರವಾಸ ಮಾಡುತ್ತೇನೆ. ಕರ್ನಾಟಕ ಬಿಜೆಪಿಯವರು ಕೆಲವರೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತು ನಾವೆಲ್ಲಾ ಹಿಂದೂಗಳ ಪರವಾಗಿ ಗಟ್ಟಿಯಾಗಿ ಮಾತನಾಡುತ್ತೇವೆ. ನಾವು ಪ್ರತಾಪ್ ಒಂದಾಗಿ ಹೊಸ ಹಿಂದೂ ಪಕ್ಷ ತರುತ್ತೇವೆ. ಬಿಜೆಪಿಯವರು ಗೌರವಯುತವಾಗಿ ತೆಗೆದುಕೊಳ್ಳದಿದ್ದರೆ ಕರ್ನಾಟಕ ಹಿಂದೂ ಪಾರ್ಟಿ ಕಟ್ಟುತ್ತೇನೆ. ಅದರ ಗುರುತು ಜೆಸಿಬಿ. – ಯತ್ನಾಳ್



ಮದ್ದೂರಿನಲ್ಲಿ ಆಯೋಜಿಸಿದ್ದ ಬೃಹತ್ ಬಹಿರಂಗ ಸಭೆಯಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿದರು.

ನಮ್ಮ ಸರ್ಕಾರ ಇದ್ದಾಗ ನನ್ನ ಮಂತ್ರಿ ಮಾಡಲಿಲ್ಲ. ನಾನು ಗೃಹಮಂತ್ರಿ ಆಗಿದ್ದರೆ ಇವರ ಬಾಯಿಗೆ ಗುಂಡಿಡುತ್ತಿದ್ದೆ. ಮುಂದಿನ ಸಲ ಮದ್ದೂರಿಗೆ ಬರ್ತೀನಿ, ಆ ಮಸೀದಿ ಮುಂದೆ ಒಂದು ಗಂಟೆ ಕುಣಿಯೋಣ. ಕರ್ನಾಟಕದಲ್ಲಿ ಯೋಗಿ ಆದಿತ್ಯನಾಥ್ ರೀತಿ ಆಡಳಿತ ತರುವುದು ನನ್ನ ಗುರಿಯಾಗಿದೆ. ಹಿಂದೂಗಳ ಪರವಾಗಿ ಗಟ್ಟಿ ಮಾತನಾಡುತ್ತೇನೆ ಎಂದು ನೀವೆಲ್ಲಾ ಬಂದಿದ್ದೀರಿ. ಇನ್ಮುಂದೆ ಹಿಂದೂಗಳ ಪರವಾಗಿ ನಿಲ್ಲುವವರನ್ನು ಮಾತ್ರ ಗೆಲ್ಲಿಸಿ. – ಬಸನಗೌಡ ಪಾಟೀಲ್ ಯತ್ನಾಳ್

ಮದ್ದೂರು,ಸೆ.11– ಮಂಡ್ಯ ಜಿಲ್ಲೆಯ ಜನರು ಸ್ವಾಭಿಮಾನಕ್ಕೆ ಪೆಟ್ಟು ಬಿದ್ದರೆ ಯಾರಿಗೂ ಹೆದರುವುದಿಲ್ಲ. ಮಂಡ್ಯ ಜಿಲ್ಲೆಯಿಂದಲೇ ನನ್ನ ಯುದ್ಧ ಪ್ರಾರಂಭವಾಗಿದ್ದು, ಹಿಂದೂ ಕಾರ್ಯಕರ್ತರಿಗೆ ಕಲ್ಲು ಹೊಡೆದವರಿಗೆ ಸರಿಯಾದ ಶಿಕ್ಷೆ ಆಗಬೇಕು. ಹಾಗಾಗಿ ಹಿಂದೂಗಳ ಪರ ಹೋರಾಟಕ್ಕೆ ನಾನು ನಿಂತಿದ್ದು, ಹಿಂದೂಗಳೆಲ್ಲಾ ಜಾತಿ ರಾಜಕಾರಣ ಮಾಡಲ್ಲ ಎಂದು ಪ್ರತಿಜ್ಞೆ ಮಾಡಬೇಕೆಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕರೆ ನೀಡಿದರು.

ಗುರುವಾರ ಸಂಜೆ ಮದ್ದೂರಿಗೆ ಭೇಟಿ ನೀಡಿ, ಗಲಭೆ ಸಂದರ್ಭದಲ್ಲಿ ಗಾಯಗೊಂಡವರ ಯೋಗಕ್ಷೇಮ ವಿಚಾರಿಸಿ, ನಗರದ ಪೇಟೆ ಬೀದಿ ರಸ್ತೆಯಲ್ಲಿ ಆಯೋಜಿಸಿದ್ದ ಬೃಹತ್ ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಮಂದಿ ಹಿಂದೂಪರ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಸನಾತನ ಹಿಂದೂ ಧರ್ಮ ಜಾಗೃತವಾಗಿದೆ ನೇಪಾಳದ ಪರಿಸ್ಥಿತಿ ಬರುವ ಮೊದಲೇ ಸಿದ್ದರಾಮಯ್ಯ ಎಚ್ಚೆತ್ತುಕೊಳ್ಳಬೇಕು. ಇಸ್ಲಾಂ ಎಂದರೆ ಶಾಂತಿ ಅಂತಾರೆ ಸಿದ್ದರಾಮಯ್ಯ, ಈ ದೇಶದ ಅನ್ನ ತಿಂದು ಪಾಕಿಸ್ತಾನದ ಧ್ವಜ ಹಾರಿಸುವವರ ವಿರುದ್ಧ ಪೊಲೀಸರು ಯಾಕೆ ಕ್ರಮ ತೆಗೆದುಕೊಳ್ಳುವುದಿಲ್ಲ? ಎಂದು ಪ್ರಶ್ನಿಸಿದರು.

ನೀವೆಲ್ಲಾ ಸೇರಿರುವುದು ವ್ಯಕ್ತಿ ಸಲುವಾಗಿ ಅಲ್ಲ, ಸನಾತನ ಧರ್ಮದ ಸಲುವಾಗಿ. ಇನ್ಮುಂದೆ ಜಾತಿ ನೋಡಿ ಓಟು ಹಾಕಬೇಡಿ. ಸಿದ್ದರಾಮಯ್ಯ ಸರ್ಕಾರ ದರಿದ್ರಗೆಟ್ಟ ಸರ್ಕಾರ. ಮುಸ್ಲಿಮರಿಗೆ ಮೀಸಲಾತಿ ಗುತ್ತಿಗೆ ನೀಡಿದೆ. ವಕ್ಫ್ ದೇಣಿಗೆ ಕೊಡುತ್ತಿರುವ ಮುಸ್ಲಿಂ ಸರ್ಕಾರ ನಮಗೆ ಬೇಕೆ? ಎಂದು ಪ್ರಶ್ನಿಸಿದ ಅವರು, ವಿಧಾನಸೌಧದಲ್ಲಿ ಮಾತನಾಡುವುದೇ ಬೇರೆ ತದನಂತರ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರರನ್ನು ಭೇಟಿಯಾಗುವುದೇ ಬೇರೆ. ಹೊಂದಾಣಿಕೆ ರಾಜಕಾರಣ ಮಾಡಿ ಎಲ್ಲರಿಗೂ ಮೋಸ ಮಾಡ್ತಿದ್ದಾರೆ ಎಂದು ಪರೋಕ್ಷವಾಗಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ವಾಗ್ದಾಳಿ ನಡೆಸಿದರು.

ಕಲ್ಲು ಹೊಡೆದವರು ಮುಸ್ಲಿಂ ಸಮುದಾಯದವರು. ಆದರೆ ನಮ್ಮ 500 ಹಿಂದೂಗಳ ಮೇಲೆ ಪ್ರಕರಣ ದಾಖಲು ಮಾಡಿದ್ದಾರೆ. ನಾವು ಪೊಲೀಸರ ವಿರೋಧಿಗಳಲ್ಲ. ಪೊಲೀಸರೇ ನಿಮಗೂ ನಿಮ್ಮ ಹಿಂದೂ ಧರ್ಮ ಶ್ರೇಷ್ಠವಾಗಿದೆ. ನಮ್ಮವರು ಯಾವುದೇ ತಪ್ಪು ಮಾಡಿಲ್ಲ. ಮುಸ್ಲಿಮರು ನಮ್ಮ ದೇಶದಲ್ಲಿ ಇರಬೇಕಾದರೆ ನಮ್ಮೊಂದಿಗೆ ಚೆನ್ನಾಗಿರಿ. ಇಲ್ಲದಿದ್ದರೆ ಪಾಕಿಸ್ತಾನಕ್ಕೆ ಹೋಗಿ. ಈದ್ ಮಿಲಾದ್ ನಡೆದಾಗ ಯಾರು ಕಲ್ಲು ಹೊಡೆದಿಲ್ಲ. ಆದರೆ ನಮ್ಮ ಆಚರಣೆ ಮೇಲೆ ಅವರು ಕಲ್ಲು ಹೊಡೆಯುತ್ತಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿರುವ ಭ್ರಷ್ಟ ಸರ್ಕಾರ ನಮಗೆ ಬೇಕಾಗಿಲ್ಲ. ಇವರು ತಮ್ಮ ಮಕ್ಕಳು, ಮೊಮ್ಮಕ್ಕಳನ್ನು ಬಿಟ್ಟು ಯಾರನ್ನ ಉದ್ದಾರ ಮಾಡಲ್ಲ.

ಕಾಂಗ್ರೆಸ್ ಹೀಗೆ ಮುಸ್ಲಿಂ ಸರ್ಕಾರ ನಡೆಸಿದರೆ 3 ತಿಂಗಳಲ್ಲಿ ಕಿತ್ತೊಗೆದು ಹಿಂದೂ ಸರ್ಕಾರ ಬರುತ್ತದೆ. ಮಸೀದಿ ಮುಂದೆ ಗಣೇಶ ಮೆರವಣಿಗೆ ಹೋಗಲು ಬಿಡಲ್ಲ ಅಂತಾರೆ. ಇವರು ಕಟ್ಟಿದ ಮಸೀದಿಯೇ ಅಕ್ರಮವಾಗಿದ್ದು, ಇವರ ಆಟ ಹೆಚ್ಚು ದಿನ ಕರ್ನಾಟಕದಲ್ಲಿ ನಡೆಯಲ್ಲ. ನೀವು ನನಗೆ ಆಶೀರ್ವಾದ ಮಾಡಿದರೆ ರಾಜ್ಯಾದ್ಯಂತ ಅಕ್ರಮ ಮಸೀದಿಗಳನ್ನು ನಿಲ್ಲಿಸುತ್ತೇನೆ. ಕರ್ನಾಟಕಕ್ಕೆ ಒಬ್ಬ ಬುಲ್ಡೋಜರ್ ಬಾಬಾ ಬೇಕಾಗಿದೆ. –ಯತ್ನಾಳ್

ಕೆಲವರು ಮುಸ್ಲಿಂ ಆಗಿ ಹುಟ್ಟಬೇಕಿತ್ತು ಅಂತಾರೆ. ಈಗಲೇ ಹೋಗಿ ಮತಾಂತರವಾಗಿ. ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಹುಟ್ಟುವೆನೆಂದು ಸಿದ್ದರಾಮಯ್ಯ ಸಹ ಹೇಳಬಹುದು. ಹಾಲುಮತದಲ್ಲಿ ಹುಟ್ಟಿ ಈ ಮಾತು ಹೇಳುತ್ತಾರೆ. ಕುಂಕುಮ, ಪೇಟಾ ಬೇಡ ಎಂದವರು ಮುಸ್ಲಿಮರ ಟೋಪಿ ಹಾಕಿಕೊಳ್ಳುತ್ತಾರೆ. ಸಿದ್ದರಾಮಯ್ಯ ಯಾಕೆ ಹಿಂದೂಗಳ ಕುಂಕುಮ, ಪೇಟಾ ಮೇಲೆ ದ್ವೇಷ? ಎಂದು ಪ್ರಶ್ನಿಸಿದರು.

ಗಣೇಶ ವಿಸರ್ಜನೆ ವೇಳೆ ಡಿಜೆ ಬೇಡ ಅಂತ ಸರ್ಕಾರ ಹೇಳಿ, ಅವರಿಗೆ ದಿನಕ್ಕೈದು ಬಾರಿ ಮೈಕ್ ಹಾಕಲು ಅವಕಾಶ ಕೊಡುತ್ತಾರೆ. ಸಿದ್ದರಾಮಯ್ಯ ಡಿಕೆಶಿ, ಗೃಹ ಮಂತ್ರಿಗೆ ತಾಕತ್ತಿದ್ದರೆ ಮಸೀದಿಯಲ್ಲಿ ಮೈಕ್ ಬಳಸುವುದನ್ನು ನಿಲ್ಲಿಸಲಿ. ಮುಸ್ಲಿಂ ಏಜೆಂಟ್‌ಗಳಾಗಿ ಕೆಲಸ ಮಾಡಬೇಡಿ ಎಂದು ಕಿಡಿಕಾರಿದ ಅವರು, ಪಾಕಿಸ್ತಾನ್ ಜೈ ಎಂದು ಧ್ವಜ ಹಾರಿಸಿದವರನ್ನು ಎನ್‌ಕೌಂಟರ್ ಮಾಡಬೇಕು. ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್ ರೀತಿ ಆಡಳಿತ ಕರ್ನಾಟಕದಲ್ಲಿ ಬರಲಿದೆ. ಹಿಂದೂಗಳ ಪರವಾಗಿದ್ದವನಿಗೆ ಮತ ಹಾಕಿ ಎಂದು ಕರೆ ನೀಡಿದರು.

ಗಲಾಟೆಗೆ ಕಾರಣರಾದವರನ್ನು ಬಂಧಿಸಬೇಕು. ಇಲ್ಲ ಮದ್ದೂರು ಜನರೇ ಅವರಿಗೆ ಬುದ್ದಿ ಕಲಿಸುತ್ತಾರೆ. ಗಲಭೆಯನ್ನು ಮುಸ್ಲಿಮರೇ ಮಾಡಿದ್ದಾರೆ ಎಂದು ಚಲುವರಾಯಸ್ವಾಮಿ ಹೇಳಿದ್ದಾರೆ. ಅವರಿಗೂ ಗೊತ್ತಿದೆ ಮಂಡ್ಯ ಜನರು ಬಿಡಲ್ಲ ಅಂತ. ಶಾಸಕ, ಸಚಿವ ಯಾರೇ ಆದರೂ ಮುಸ್ಲಿಂ ಆಗಿ ಹುಟ್ಟೇಕು ಅಂದರೆ ಈಗಲೇ ಮತಾಂತರವಾಗಿ. ನಿನ್ನೆ ಬಿಜೆಪಿ ನಾಯಕರು ಬಂದಿದ್ದಾಗ ಯತ್ನಾಳ್ ಬರಬೇಕು ಎಂದು ಘೋಷಣೆ ಕೂಗಿದ್ದೀರಿ. ಬಿಜೆಪಿ ನಾಯಕರ ಭಾಷಣದ ಮಧ್ಯೆ ಯತ್ನಾಳ್ ಕೂಗಿದ್ದೀರಿ. ನನ್ನ ಮೇಲೆ ನೀವಿಟ್ಟಿರುವ ವಿಶ್ವಾಸ ನಾನು ನಿರೀಕ್ಷೆ ಮಾಡಿರಲಿಲ್ಲ. ಲಕ್ಷಾಂತರ ಕಾರ್ಯಕರ್ತರು ನನ್ನನ್ನು ಪ್ರೀತಿ ಮಾಡ್ತಾರೆಂದು ಗೊತ್ತಿರಲಿಲ್ಲ ಎಂದು ಭಾವುಕರಾದರು.

ನಾವು ಅಧಿಕಾರಕ್ಕೆ ಬಂದರೆ ಮುಸ್ಲಿಮರ ಮೀಸಲಾತಿ ತೆಗೆದು ಹಿಂದೂಗಳಿಗೆ ಹಂಚುತ್ತೇನೆ. ಅಕ್ರಮವಾಗಿ ಕಟ್ಟಿದ ಮಸೀದಿಗಳನ್ನು ನೆಲಸಮ ಮಾಡಲಿದ್ದು, ಹಿಂದೂಗಳ ಪರವಾಗಿ ಹೋರಾಡುವವರು ಕರ್ನಾಟಕದ ಮುಖ್ಯಮಂತ್ರಿಯಾಗಬೇಕು. ನಾನೇದಾರೂ ಅಧಿಕಾರಕ್ಕೆ ಬಂದರೆ ಗೋಹತ್ಯೆ ಮಾಡುವವರಿಗೆ ತಕ್ಕ ಪಾಠ ಕಲಿಸುವೆ. ವಕ್ಫ್ ಅನುದಾನ ಗೋರಕ್ಷಕರಿಗೆ ನೀಡುತ್ತೇನೆ. ಹಿಂದೂಗಳ ದಾನ ಹಿಂದೂಗಳ ದೇವಾಲಯ ಅಭಿವೃದ್ಧಿಗೆ ಮಾತ್ರ ಮೀಸಲಿರಬೇಕು. ಭಾರತದಲ್ಲಿರುವ ಮುಸ್ಲಿಮರು ಪಾಕಿಸ್ತಾನಕ್ಕೆ, ಪಾಕಿಸ್ತಾನದಲ್ಲಿರುವ ಹಿಂದೂಗಳು ಭಾರತಕ್ಕೆ ಕರೆತರಬೇಕು ಅಂತ ಈ ಹಿಂದೆ ಡಾ.ಬಿ.ಆರ್.ಅಂಬೇಡ್ಕರ್ ಅವರೇ ಹೇಳಿದ್ದರು. ಮದ್ದೂರಿನ ಘಟನೆ ನೋಡಿದರೆ ಅಂಬೇಡ್ಕರ್ ಹೇಳಿದ್ದು ಸತ್ಯ ಎನಿಸುತ್ತದೆ. ಮೃತರ ಮೆರವಣಿಗೆ ವೇಳೆ ತಮಟೆ ಬಾರಿಸಲು ಮಸೀದಿ ಮುಂದೆ ಬಿಡಲ್ಲ. ನಮ್ಮ ಸರ್ಕಾರ ಬಂದರೆ ಮಸೀದಿ ಮುಂದೆ ಒಂದು ಗಂಟೆ ಡ್ಯಾನ್ಸ್ ಮಾಡಲು ಅವಕಾಶ ಕೊಡುತ್ತೇನೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಮದ್ದೂರಿಗೆ ಆಗಮಿಸಿದ ಯತ್ನಾಳ್ ಅವರನ್ನು ಹಿಂದೂಪರ ಕಾರ್ಯಕರ್ತರು ಬೈಕ್ ರ್‍ಯಾಲಿ ಮೂಲಕ ಪೇಟೆಬೀದಿವರೆಗೂ ಕರೆತಂದರು. ಸಾವಿರಾರು ಹಿಂದೂ ಕಾರ್ಯಕರ್ತರು ಯತ್ನಾಳ್‌ಗೆ ಹಾರ ಹಾಕಿ ಜೈ ಶ್ರೀರಾಮ್ ಘೋಷಣೆ ಕೂಗಿ ಅದ್ದೂರಿ ಸ್ವಾಗತ ಕೋರಿದರು. ಯತ್ನಾಳ್ ಸಭೆಗೆ ಸಾವಿರಾರು ಜನ ಆಗಮಿಸಿದ್ದರಿಂದ ಮಸೀದಿ ಸೇರಿದಂತೆ ಹಲವೆಡೆ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು.

ಕೆಆರ್‌ಎಸ್ ಸೇತುವೆ ಬಳಿ ಸುಂಕ ವಸೂಲಾತಿ ಸ್ಥಗಿತಕ್ಕೆ ಒತ್ತಾಯಿಸಿ ಪ್ರತಿಭಟನೆ

ಮಂಡ್ಯ: ಶ್ರೀರಂಗಪಟ್ಟಣ ತಾಲೂಕು ಕೃಷ್ಣರಾಜಸಾಗರದ ಕೆಳ ಸೇತುವೆಯಲ್ಲಿ ಸಂಚರಿಸುವ ವಾಹನಗಳಿಂದ ಸಂಗ್ರಹಿಸುತ್ತಿರುವ ಸುಂಕ ವಸೂಲಾತಿ ಸ್ಥಗಿತ ಮಾಡುವಂತೆ ಒತ್ತಾಯಿಸಿ ಭೂಮಿತಾಯಿ ಹೋರಾಟ ಸಮಿತಿ ನೇತೃತ್ವದಲ್ಲಿ ರೈತರು ಮಂಡ್ಯದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಕಾವೇರಿ ನೀರಾವರಿ ನಿಗಮ ಕಚೇರಿ ಎದುರು ಪ್ರತಿಭಟನಾ ಧರಣಿ ನಡೆಸಿ ಕೃಷ್ಣರಾಜಸಾಗರ ಬೃಂದಾವನಕ್ಕೆ ಹೋಗುವ ಮಾರ್ಗದಲ್ಲಿರುವ ಕೆಳಸೇತುವೆ ಮೂಲಕ ಹಾದು ಹೋಗುವ ವಾಹನಗಳಿಂದ ಕಾವೇರಿ ನೀರಾವರಿ ನಿಗಮ ವಸೂಲಿ ಮಾಡುತ್ತಿರುವ ಟೋಲ್ ಶುಲ್ಕ ರದ್ದು ಪಡಿಸುವಂತೆ ಒತ್ತಾಯಿಸಿದರು.

ಭೂಮಿ ತಾಯಿ ಹೋರಾಟ ಸಮಿತಿ ಮುಖಂಡ ಕೆ.ಎಸ್. ನಂಜುಂಡೇಗೌಡ ಮಾತನಾಡಿ, ಜಲಾಶಯದ ಬೃಂದಾವನ ರಸ್ತೆಯಲ್ಲಿ ನಿರ್ಮಿಸಿರುವ ಕೆಳಸೇತುವೆಗೆ ನಿರ್ಮಾಣಕ್ಕೆ ಆಗಿರುವ ವೆಚ್ಚ ಮತ್ತು ಸೇತುವೆಯು ಸಾರ್ವಜನಿಕರಿಗೆ ಮುಕ್ತವಾಗಿದ್ದಾಗಿನಿಂದ ಇಲ್ಲಿಯ ತನಕ ವಸೂಲಿ ಮಾಡಿರುವ ಟೋಲ್ ಶುಲ್ಕದ ಮಾಹಿತಿ ಕೋರಿದ್ದು, ಇದಕ್ಕೆ ಮಾಹಿತಿ ಹಕ್ಕು ಅಧಿಕಾರಿಗಳು ಸೂಚಿಸಿದಂತೆ ಹಣ ಸಂದಾಯ ಮಾಡಿದ್ದರೂ ಕೂಡ ಮಾಹಿತಿಯನ್ನು ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು



ಕಾವೇರಿ ನೀರಾವರಿ ನಿಗಮ ಕಚೇರಿ ಎದುರು ರೈತರು ಪ್ರತಿಭಟನೆ ನಡೆಸಿದರು.

ಸೇತುವೆ ನಿರ್ಮಾಣ ಮಾಡಿ ವರ್ಷ ಕಳೆದರೂ ಕೂಡ ಪ್ರವಾಸಿಗರು ಸೇರಿದಂತೆ ಸಾರ್ವಜನಿಕರ ಬಳಿ ಇನ್ನೂ ಶುಲ್ಕ ವಸೂಲಿ ಮಾಡುತ್ತಿರುವುದು ಸರಿಯಲ್ಲ. ಕೂಡಲೇ ಸುಂಕ ವಸೂಲಾತಿ ಸ್ಥಗಿತ ಮಾಡಬೇಕು ಎಂದು ಒತ್ತಾಯಿಸಿದರು.

ಬೃಂದಾವನದಲ್ಲಿ ಪಾದಚಾರಿ ಮಾರ್ಗ, ನೀರಿನ ಕಾರಂಜಿಗಳು, ದೀಪಗಳು ಮುರಿದು ಬಿದ್ದಿದ್ದರೂ ಇನ್ನೂ ದುರಸ್ಥಿ ಮಾಡಿಲ್ಲ, ವಾರಕೊಮ್ಮೆ ಸಂಗೀತ ಕಾರಂಜಿ ಹದಗೆಡುತ್ತಿದ್ದು ಪ್ರವಾಸಿಗರಿಂದ ಪ್ರವೇಶ ಶುಲ್ಕ 100 ರೂ ಸಂಗ್ರಹ ಮಾಡುತ್ತಿದ್ದರೂ ಇದುವರೆಗೂ ಏಕೆ ದುರಸ್ತಿ ಪಡಿಸಿಲ್ಲ? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ತಾಲಿಬಾನ್ ಸರ್ಕಾರ ಆಡಳಿತದಲ್ಲಿದೆ: ರೇಣುಕಾಚಾರ್ಯ ಕಿಡಿ

ಮದ್ದೂರು,ಸೆ.11– ರಾಜ್ಯದಲ್ಲಿ ತಾಲಿಬಾನ್ ಸರ್ಕಾರ ಆಡಳಿತದಲ್ಲಿದ್ದು, ಗಣೇಶ ಮೆರವಣಿಗೆಗೆ ಕಲ್ಲೆಸೆಯುವವರು ಶಾಂತಿ ಧೂತರೇ? ಪಾಕಿಸ್ಥಾನಕ್ಕೆ ಹೋಗಿ ಭಾರತಪರ ಘೋಷಣೆ ಕೂಗಿದರೆ ಆ ದೇಶದವರು ಸುಮ್ಮನಿರುತ್ತಾರೆಯೇ? ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಪ್ರಶ್ನಿಸಿದರು.

ಗಣೇಶನ ವಿಸರ್ಜನೆ ವೇಳೆ ಕಲ್ಲು ತೂರಾಟ ಸಂಬಂಧ ಮಾಜಿ ಸಚಿವ ರೇಣುಕಚಾರ್ಯ ಪಟ್ಟಣಕ್ಕೆ ಆಗಮಿಸಿ ಹಿಂದೂ ಸಂಘಟನೆಯವರ ಬಳಿ ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡರು. ಬಳಿಕ ಗಾಯಾಳುಗಳ ಮನೆಗೆ ತೆರಳಿ ಆರೋಗ್ಯ ವಿಚಾರಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿದವರಿಗೆ ಕ್ರಮ ತೆಗೆದುಕೊಂಡಿಲ್ಲ. ಹಿಂದೂಗಳಿಗೆ ಡಿಜೆಗೆ ಅನುಮತಿ ಕೊಡ್ತಿಲ್ಲ. ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರದಲ್ಲಿಲ್ಲ. ರಾಹುಲ್, ಸೋನಿಯಾ ಗಾಂಧಿ ಅಣತಿಯಂತೆ ನಡೆಯುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಅವರು ಆಪರೇಷನ್ ಸಿಂಧೂರ ಬಗ್ಗೆ ಟೀಕೆ ಮಾಡುತ್ತಾರೆ. ಪಾಕಿಸ್ತಾನದ ಮಾಧ್ಯಮದಲ್ಲಿ ಸಿದ್ದರಾಮಯ್ಯ ವಿಚಾರ ಪ್ರಸ್ತಾಪ ಆಯ್ತು. ಕಾಂಗ್ರೆಸ್‌ಗೆ ಪಾಕಿಸ್ತಾನದ ವ್ಯಾಮೋಹ ಜಾಸ್ತಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಪರಮೇಶ್ವರ್



ಗಾಯಾಳುಗಳ ಮನೆಗೆ ತೆರಳಿ ಆರೋಗ್ಯ ವಿಚಾರಿಸಿದರು.

ಹುಟ್ಟಿದ ಧರ್ಮಕ್ಕೆ ಅಪಮಾನ ಮಾಡುತ್ತಿದ್ದಾರೆ. ಭದ್ರಾವತಿ ಶಾಸಕ ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಹುಟ್ಟುತ್ತೇನೆ ಅಂತಾರೆ. ನಿಮ್ಮ ಜತೆ ನಿಮ್ಮ ಬೀಗರನ್ನು ಕರೆದುಕೊಂಡು ಹೋಗಿ ಕನ್ವರ್ಟ್ ಮಾಡಿಕೊಳ್ಳಿ. ಇಂತಹ ಅಯೋಗ್ಯರನ್ನ ಹೆಡೆಮುರಿ ಕಟ್ಟಬೇಕು. ಕಂಡಲ್ಲಿ ಗುಂಡಿಟ್ಟು ಹೊಡೆಯಬೇಕು ಎಂದರು.

ಗಣೇಶ ಮೆರವಣಿಗೆ ಮೇಲೆ ಕಲ್ಲು ಎಸೆತ ಪ್ರಕರಣ ಸಂಬಂಧ ಬಿಜೆಪಿ ಲೀಗಲ್ ಟೀಮ್ ಪಟ್ಟಣದ ಬಿಜೆಪಿ ಕಚೇರಿಗೆ ಭೇಟಿ ಮಾಡಿ ವಕೀಲರೊಂದಿಗೆ ಗುರುವಾರ ಚರ್ಚೆ ಮಾಡಿದರು. ಕಲ್ಲು ಎಸೆದ ಕಿಡಿಗೇಡಿಗಳ ಪರ ವಕಾಲತ್ತು ಹಾಕದಿರಲು ನಿರ್ಧಾರ ಮಾಡಿರುವ ವಕೀಲರಿಗೆ ಅಭಿನಂದನೆ ಸಲ್ಲಿಸಲಾಯಿತು.

ಒಂದನೇ ಪುಟದಿಂದ

ಕೊಂದ ಕತೆ ಕಟ್ಟಿದ ಖತರ್ನಾಕ್ ಹೆಂಡತಿ!

ತಿಪ್ಪೇಗುಂಡಿವರೆಗೆ ಏನೋ ಎಳೆದೊಯ್ದಿದ್ದ ಗುರುತು ಕಣ್ಣಿಗೆ ಬಿತ್ತು. ಆದರೆ ಮನುಷ್ಯನನ್ನು ಯಾವುದೇ ಪ್ರಾಣಿ ಎಳೆದೊಯ್ದರೆ ಉಂಟಾಗುವ ಗುರುತಂತೂ ಇದಾಗಿರಲಿಲ್ಲ. ಹಾಗಾಗಿ ಸಂಶಯಗೊಂಡ ಅರಣ್ಯ ಹಾಗೂ ಪೊಲೀಸ್ ಅಧಿಕಾರಿಗಳು ಆ ಗುರುತಿನ ಬಗ್ಗೆ ಸಲ್ಲಾಪುರಿ ಪ್ರಶ್ನಿಸಲಾರಂಭಿಸಿದರು. ಆದರೆ ಆಕೆ ಗಳಿಗೆಗೊಂದು ಉತ್ತರ ಹೇಳುತ್ತಿದ್ದಾಗ ಅವಳ ಮೇಲೆ ಸಂಶಯ ಹೆಚ್ಚಾಗತೊಡಗಿತು.

ವೆಂಕಟಸ್ವಾಮಿ ಎಳೆದೊಯ್ದದ್ದು ಹುಲಿಯಲ್ಲ, ಪತ್ನಿ: ಹುಲಿ ಘರ್ಜನೆ ಕೇಳಿ ಮನೆಯಿಂದ ಹೊರ ಹೋದ ವೆಂಕಟಸ್ವಾಮಿಯನ್ನು ಹುಲಿ ಎಳೆದೊಯ್ದಿರಬಹುದು ಎಂದು ಪೊಲೀಸರಿಗೆ ಹೇಳಿದ್ದ ಪತ್ನಿ ಸಲ್ಲಾಪುರಿಯೇ ತನ್ನ ಪತಿಯ ಮೃತದೇಹವನ್ನು ಮನೆಯಿಂದ ತಿಪ್ಪೇಗುಂಡಿವರೆಗೆ ಎಳೆದೊಯ್ದಿದ್ದಳು. ಅದರ ಗುರುತೇ ಇದು ಎಂಬುದು ತೀವ್ರ ವಿಚಾರಣೆ ವೇಳೆ ತಿಳಿದು ಬಂದಿದೆ. ತಿಪ್ಪೇಗುಂಡಿಯನ್ನು ಅಗೆದಾಗ ಸುಮಾರು 2 ಅಡಿ ಆಳದಲ್ಲಿ ವೆಂಕಟಸ್ವಾಮಿಯ ಕೈ ಗೋಚರಿಸಿದೆ. ಈ ಹಿನ್ನೆಲೆಯಲ್ಲಿ ಇಂದು ಪೊಲೀಸರು ಹುಣಸೂರು ಉಪ ವಿಭಾಗಾಧಿಕಾರಿ ವಿಜಯಕುಮಾರ್ ಸಮ್ಮುಖದಲ್ಲಿ ವೆಂಕಟಸ್ವಾಮಿ ದೇಹವನ್ನು ಹೊರ ತೆಗೆದು ಸರ್ಕಾರಿ ವೈದ್ಯರನ್ನು ಸ್ಥಳಕ್ಕೇ ಕರೆಸಿ ಮರಣೋತ್ತರ ಪರೀಕ್ಷೆ ಮಾಡಿಸಿದ್ದಾರೆ.

ಪರಿಹಾರದ ಹಣದಾಸೆಗಾಗಿ ಪತಿಯನ್ನೇ ಮುಗಿಸಿದಳು: ನಂತರ ಪೊಲೀಸರು ಸಲ್ಲಾಪುರಿಯನ್ನು ತೀವ್ರ ವಿಚಾರಣೆಗೊಳಪಡಿಸಿದ ವೇಳೆ ತನ್ನ ಪತಿ ವೆಂಕಟಸ್ವಾಮಿಯನ್ನು ಹುಲಿ ಕೊಂದು ಹಾಕಿದೆ ಎಂದು ಹೇಳಿದರೆ ಅರಣ್ಯ ಇಲಾಖೆಯಿಂದ 15 ಲಕ್ಷ ರೂ. ಪರಿಹಾರ ದೊರೆಯುತ್ತದೆ ಎಂದು ಪರಿಹಾರದ ಆಸೆಗಾಗಿ ಪತಿಯನ್ನ ಕೊಂದು ಹುಲಿ ಎಳೆದೊಯ್ದಿರಬಹುದು ಎಂದು ಕತೆ ಕಟ್ಟಿರುವುದು ಬೆಳಕಿಗೆ ಬಂದಿದೆ.

ಪರಿಹಾರದ ಬಗ್ಗೆ ಗ್ರಾಮ ಪಂಚಾಯ್ತಿಯಿಂದ ಮಾಹಿತಿ ಪಡೆದಿದ್ದಳು: ಕಳೆದ 11 ತಿಂಗಳಿಂದ ಅಡಿಕೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ಈಕೆ, ವನ್ಯಮೃಗಗಳಿಗೆ ಮನುಷ್ಯರು ಬಲಿಯಾದರೆ, ಲಕ್ಷಾಂತರ ರೂ. ಪರಿಹಾರ ಸಿಗುತ್ತದೆ ಎಂಬುದನ್ನು ಸಮೀಪದ ಗ್ರಾಮ ಪಂಚಾಯ್ತಿಯಿಂದ ತಿಳಿದು ಕೊಂಡಿದ್ದಳು ಎಂಬುದು ವಿಚಾರಣೆಯಿಂದ ಗೊತ್ತಾಗಿದೆ

ಊಟಕ್ಕೆ ವಿಷ: ಪತಿ ವೆಂಕಟಸ್ವಾಮಿಯನ್ನು ಕೊಂದು ತಿಪ್ಪೇಗುಂಡಿಯಲ್ಲಿ ಹೂತು ಹಾಕಲು ನಿರ್ಧಾರ ಮಾಡಿಕೊಂಡಿದ್ದ ಸಲ್ಲಾಪುರಿ, ಸೋಮವಾರ ರಾತ್ರಿ ಊಟದಲ್ಲಿ ಪತಿ ವೆಂಕಟಸ್ವಾಮಿಗೆ ವಿಷ ಹಾಕಿ ಕೊಟ್ಟಿದ್ದಳು. ಆತ ಪ್ರಜ್ಞೆ ತಪ್ಪಿದಾಗ ಆತನ ಖಾಸಗಿ ಅಂಗಾಂಗಕ್ಕೆ ಒದ್ದು, ದಿಂಬಿನಿಂದ ಉಸಿರುಗಟ್ಟಿಸಿ ಕೊಂದು ಹಾಕಿದ್ದಾಳೆ. ನಂತರ ತಾನೇ ಮನೆಯಿಂದ ಪತಿಯ ಮೃತದೇಹವನ್ನು ತಿಪ್ಪೇಗುಂಡಿಯವರೆಗೆ ಎಳೆದೊಯ್ದು, ಮೂರ್‍ನಾಲ್ಕು ಅಡಿ ಹಳ್ಳ ತೆಗೆದು ಅದರಲ್ಲಿ ದೇಹವನ್ನು ಹೂತುಹಾಕಿದ್ದಳು.

ಪೊಲೀಸರ ಮುಂದೆ ಕಟ್ಟುಕತೆ: ಸೋಮವಾರ ರಾತ್ರಿಯೇ ಗಂಡನನ್ನು ತಿಪ್ಪೇಗುಂಡಿಯಲ್ಲಿ ಸಮಾಧಿ ಮಾಡಿದ ಸಲ್ಲಾಪುರಿ, ಪತಿಯನ್ನು ಹುಲಿ ಕೊಂದು ಹಾಕಿದೆ ಎಂಬುದರ ಬಗ್ಗೆ ಕಟ್ಟುಕತೆ ರೂಪಿಸಲು ಒಬ್ಬಳೇ ಕುಳಿತು ಮಂಗಳವಾರ ಸಂಜೆವರೆಗೂ ಯೋಜನೆ ರೂಪಿಸಿ ನಂತರ ಹುಣಸೂರು ಗ್ರಾಮಾಂತರ ಠಾಣೆಗೆ ತೆರಳಿ ಪತಿ ನಾಪತ್ತೆ ದೂರು ನೀಡಿದ್ದಲ್ಲದೇ, ಹೆಚ್ಚುವರಿಯಾಗಿ ಆತನನ್ನು ಹುಲಿ ಹೊತ್ತೊಯ್ದಿರಬಹುದು ಎಂದು ಕತೆ ಕಟ್ಟಿದ್ದಾಳೆ.

ಆದರೆ ಇವಳ ಕತೆಯನ್ನು ಆರಂಭದಲ್ಲಿ ನಂಬಿದ ಪೊಲೀಸ್ ಹಾಗೂ ಅರಣ್ಯ ಸಿಬ್ಬಂದಿ ದಿನವಿಡೀ ಕೂಂಬಿಂಗ್ ನಡೆಸಿ, ಬಸವಳಿದಿದ್ದೇ ಆಯ್ತು. ಆದರೆ, ಅವರಿಗೆ ಅಡಿಕೆ ತೋಟಕ್ಕೆ ಯಾವುದೇ ವನ್ಯಮೃಗ ಬಂದಿದ್ದಕ್ಕೆ ಹೆಜ್ಜೆ ಗುರುತುಗಳು ಸಿಗಲಿಲ್ಲವಾದರೂ, ಈಕೆಯೇ ಗಂಡನ ಶವವನ್ನು ಎಳೆದೊಯ್ದಿದ್ದ ಗುರುತಂತೂ ದೊರೆತು ಸಲ್ಲಾಪುರಿಯನ್ನು ಜೈಲಿಗೆ ಕಳುಹಿಸುವಂತಾಯಿತು.

ವಿಷಯ ಬಯಲಾಗುತ್ತಿದ್ದಂತೆಯೇ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಸಲ್ಲಾಪುರಿಯನ್ನು ಬಂಧಿಸಿದ್ದಾರೆ. ಜಿಲ್ಲಾ ಎಸ್ಪಿ ವಿಷ್ಣುವರ್ಧನ ನಿರ್ದೇಶನದಂತೆ ಅಡಿಷನಲ್ ಎಸ್ಪಿ ಸಿ.ಮಲ್ಲಿಕ್, ಹುಣಸೂರು ಉಪ ವಿಭಾಗದ ಡಿವೈಎಸ್‌ಪಿ ಗೋಪಾಲಕೃಷ್ಣ, ಹುಣಸೂರು ಗ್ರಾಮಾಂತರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ರಾಧಾ, ಜಿಲ್ಲಾ ಬೆರಳಚ್ಚು ಘಟಕದ ಇನ್ಸ್‌ಪೆಕ್ಟರ್ ಎಂ.ಆರ್.ಬಾಲಸುಬ್ರಹ್ಮಣ್ಯ, ಸಹಾಯಕ ಸಬ್ ಇನ್ಸ್‌ಪೆಕ್ಟರ್ ಹೆಚ್.ಆರ್. ಹರೀಶ್, ಹೆಡ್ ಕಾನ್ಸ್‌ಟೇಬಲ್ ಹೆಚ್.ಮಧುಚಂದ್ರ, ಸೀನ್ ಆಫ್ ಕ್ರೈಮ್ ಅಧಿಕಾರಿಗಳಾದ ಆದರ್ಶ ಮತ್ತು ಮೋಹಿತ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾಡಾನೆ ದಾಳಿಗೆ ಅರಣ್ಯ ಸಿಬ್ಬಂದಿ ಸಾವು

ವಿಷಯವನ್ನು ಮೇಲಧಿಕಾರಿಗಳ ಗಮನಕ್ಕೆ ತಂದರು. ಈ ವೇಳೆ ಸ್ಥಳಕ್ಕಾಗಮಿಸಿದ ಅರಣ್ಯ ಅಧಿಕಾರಿಗಳು ಪರಿಶೀಲನೆ ನಡೆಸಿ, ಶವವನ್ನು ಇಲಾಖೆ ವಾಹನದಲ್ಲಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತಂದು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ, ದೇಹವನ್ನು ವಾರಸು ದಾರರಿಗೆ ಒಪ್ಪಿಸಿದರು. ಮೃತ ಟಿ.ರಾಜು ಪತ್ನಿ ಕೆಂಚಮ್ಮ, ಪುತ್ರರಾದ ಅಣ್ಣಯ್ಯ, ರಾಮ, ಕರಿಯ, ರಘು, ರವಿ, ಪುತ್ರಿಯರಾದ ಸವಿತಾ, ಕವಿತ, ಬಬಿತಾ ಅವರನ್ನು ಅಗಲಿದ್ದಾರೆ.

ಡಿ.ಬಿ.ಕುಪ್ಪೆ ಆರ್‌ಎಫ್‌ಓ ಹನುಮಂತರಾಜು ಮಾತನಾಡಿ, ಅರಣ್ಯದಲ್ಲಿ ಗಸ್ತು ತಿರುಗುವ ವೇಳೆ ಕಾಡಾನೆ ದಾಳಿಯಿಂದ ನಮ್ಮ ಇಲಾಖೆ ನೌಕರ ಸಾವನ್ನಪ್ಪಿದ್ದಾನೆ. ಇಲಾಖೆ ನಿಯಮಗಳ ಪ್ರಕಾರ ಮೃತರ ಕುಟುಂಬಕ್ಕೆ ಪರಿಹಾರ ಕೊಡಿಸಲು ಕ್ರಮವಹಿಸುವುದಾಗಿ ತಿಳಿಸಿದರು.

ಘಟನೆಗೆ ಸಂಬಂಧಿಸಿದಂತೆ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಎಸ್‌ಐ ಚಂದ್ರಹಾಸನ್ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಈ ವೇಳೆ ಎಎಸ್‌ಐ ಎಎಸ್‌ಐ ಕುಮಾರ್, ಆರ್‌ಎಫ್‌ಓ ಚಂದನ್, ಬೀಟ್ ಫಾರೆಸ್ಟರ್ ತಿಮ್ಮ, ಪೊಲೀಸ್ ಇಲಾಖೆಯ ನಾಗನಾಯಕ, ಗೋಪಾಲ, ಅರಣ್ಯ ಇಲಾಖೆ ಸಿಬ್ಬಂದಿ ಹಾಜರಿದ್ದರು.

‘ಕರ್ನಾಟಕ ರತ್ನ’ ಗೌರವ

ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ಪಾಲನೆಗೆ ಕ್ರಮ: ಸರ್ಕಾರಿ ಕಾರ್ಯಕ್ರಮಗಳ ವೇದಿಕೆಯಲ್ಲಿ ಅತಿಥಿಗಳ ಸಂಖ್ಯೆಗೆ ಕಡಿವಾಣ. 9 ರಿಂದ ಅನಿವಾರ್ಯ ಪರಿಸ್ಥಿತಿಯಲ್ಲಿ 13 ಮಂದಿಗೆ ಆಹ್ವಾನ. ಜಿಲ್ಲಾ ಉಸ್ತುವಾರಿ ಸಚಿವರಿಗೆ ನಿರ್ಧಾರ ಕೈಗೊಳ್ಳಲು ಅಧಿಕಾರ ನೀಡಲಾಗಿದೆ.

ಪಿಎಂ ಕುಸುಮ್ ಬಿ ಯೋಜನೆ ಅಡಿಯಲ್ಲಿ ಹಿಂದಿನ ಸರ್ಕಾರಿ ಆದೇಶದ ಮಾರ್ಪಾಡು ಮಾಡುವ ಬಗ್ಗೆ-ವಿದ್ಯುತ್ ಜಾಲದಿಂದ ಪಂಪ್ ಸೆಟ್ ಇರುವ ದೂರವನ್ನು ಲೆಕ್ಕಿಸದ ಕಾರ್ಯಗತಗೊಳಿಸಲಾದ ಪಂಪ್‌ಸೆಟ್‌ಗಳ ವೆಚ್ಚದ ಶೇ.50ರಷ್ಟನ್ನು ರಾಜ್ಯ ಸರ್ಕಾರದ ಸಹಾಯಧನ ನೀಡಲು ಒಪ್ಪಿಗೆ ನೀಡಲಾಗಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ- ಮದ್ದೂರು ತಾಲೂಕಿನ ವಿಶ್ವೇಶ್ವರಯ್ಯ ನಾಲಾ ಹೆಬ್ಬಕವಾಡಿ ಶಾಖಾ ನಾಲೆ ಮತ್ತು ನಿಡಘಟ್ಟ ಶಾಖಾ ನಾಲೆಯ ಅಭಿವೃದ್ಧಿ ಕಾಮಗಾರಿಯ 2ನೇ ಹಂತದ ಕಾಮಗಾರಿಯನ್ನು ರೂ.293.47 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಹೊಸಹೊಳಲು ಎಡದಂಡೆಯ ಸರಪಳಿ 11ನ್ನು 16 ಕಿ.ಮೀ.ವರೆಗೆ ಉಳಿಕೆ ಕಾಮಗಾರಿ ಹಾಗೂ ಆಧುನೀಕರಣ ಕಾಮಗಾರಿಯನ್ನು 21.50 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಸಹಜ ಸ್ಥಿತಿಯತ್ತ ಮದ್ದೂರು

ಇರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಪಟ್ಟಣದಲ್ಲಿ ಪೊಲೀಸ್ ತುಕಡಿಗಳು ಬೀಡುಬಿಟ್ಟಿವೆ.

7 ಆರೋಪಿಗಳ ಬಂಧನಕ್ಕೆ 3 ತಂಡ ರಚನೆ: ಗಣೇಶ ಮೆರವಣಿಗೆಗೆ ಕಲ್ಲು ತೂರಿದ ಪ್ರಕರಣದಲ್ಲಿ 29 ಮಂದಿ ಭಾಗಿಯಾಗಿರುವ ಹಿನ್ನಲೆಯಲ್ಲಿ ಈಗಾಗಲೇ 22 ಜನರನ್ನು ಬಂಧಿಸಿರುವ ಪೊಲೀಸರು, ತಲೆಮರೆಸಿಕೊಂಡಿರುವ 7 ಮಂದಿ ಆರೋಪಿಗಳ ಸೆರೆಗೆ ಹುಡುಕಾಟ ನಡೆಸುತ್ತಿದ್ದಾರೆ. 7 ಮಂದಿ ಬಂಧನಕ್ಕೆ 3 ತಂಡಗಳ ರಚನೆ ಮಾಡಿದ್ದು, ಮೂವರು ಮಂದಿ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಮೂರು ತಂಡ ರಚನೆ ಮಾಡಲಾಗಿದೆ.

ಮೂರು ದಿನಗಳಿಂದ ಬಂದೋಬಸ್ತ್‌ನಲ್ಲಿ ತೊಡಗಿದ್ದ ಪೊಲೀಸರು, ಈಗ ತಲೆಮರೆಸಿಕೊಂಡವರಿಗಾಗಿ ತೀವ್ರ ಶೋಧ ನಡೆಸುತ್ತಿದ್ದಾರೆ. ಮೂರು ತಂಡಗಳಿಂದ ಪ್ರತ್ಯೇಕವಾಗಿ ಹುಡುಕಾಟ ನಡೆಸಲಾಗುತ್ತಿದೆ.

ಎಎಸ್ಪಿ ವರ್ಗಾವಣೆ: ಮಹತ್ವದ ಬೆಳವಣಿಯಲ್ಲಿ ಮಂಡ್ಯ ಜಿಲ್ಲೆಯ ಹೆಚ್ಚುವರಿ ಪೊಲೀಸ್ ಅಧೀಕ್ಷಕ-1 ತಿಮ್ಮಯ್ಯ ಅವರನ್ನು ವರ್ಗಾವಣೆ ಮಾಡಿದ್ದು, ಅವರ ಜಾಗಕ್ಕೆ ಬಳ್ಳಾರಿ ಜಿಲ್ಲೆಯ ಪೊಲೀಸ್ ಅಧೀಕ್ಷಕ-2 ನವೀನ್‌ಕುಮಾರ್ ಅವರನ್ನು ನಿಯೋಜಿಸಿ ಸರ್ಕಾರ ಆದೇಶ ಹೊರಡಿಸಿದೆ.

ಸಿ.ಟಿ.ರವಿ ವಿರುದ್ಧ ಎಫ್‌ಐಆರ್

ತಲೆನೂ ತೆಗಿತ್ತೀವಿ, ನಮಗೆ ತೊಡೆ ಮುರಿಯೋದು ಗೊತ್ತು. ಕಲ್ಲು ಹೊಡೆದವ ರನ್ನು, ಕಲ್ಲಿನ ಒಳಗಡೆ ಸಮಾಧಿ ಮಾಡೋ ತಾಕತ್ತು ಹಿಂದೂ ಸಮಾಜಕ್ಕೆ ಇದೆ ಎಂದು ಕಿಡಿಕಾರಿದರು. ಅನ್ಯ ಸಮುದಾಯಗಳ ಮಧ್ಯೆ ದ್ವೇಷ ಉಂಟುಮಾಡುವ ಮತ್ತು ಸೌಹಾರ್ದತಾ ಭಾವನೆಗಳಿಗೆ ಭಾದಕವಾಗುವಂತೆ ಪ್ರಚೋದನಕಾರಿ ಭಾಷಣ ಮಾಡಿರುವ ಹಿನ್ನೆಲೆಯಲ್ಲಿ ಸಿ.ಟಿ.ರವಿ ಮೇಲೆ ಕಾನೂನು ಕ್ರಮಕ್ಕೆ ಜಿಲ್ಲಾಡಳಿತ ಮುಂದಾಗಿದೆ.

ಲಾಠಿ ಏಟು ತಿಂದ ಮಹಿಳೆ ಮೇಲೂ ಕೇಸ್: ಸೋಮವಾರ ನಡೆದಿದ್ದ ಪ್ರತಿಭಟನಾ ರ್‍ಯಾಲಿಯಲ್ಲಿ ಲಾಠಿ ಏಟು ತಿಂದು ರಸ್ತೆಯಲ್ಲಿ ಒದ್ದಾಡಿದ್ದ ಮದ್ದೂರು ಮಹಿಳೆ ಜ್ಯೋತಿ ವಿರುದ್ಧವೂ ಪ್ರಕರಣ ದಾಖಲಾಗಿದೆ. ಪ್ರತಿಭಟನೆ ವೇಳೆ ಅವಹೇಳನಕಾರಿ ಹಾಗೂ ಪ್ರಚೋದನಾಕಾರಿಯಾಗಿ ಘೋಷಣೆ ಕೂಗಿದ್ದ ಆರೋಪದಡಿ ಬಿಎನ್‌ಎಸ್ ಕಾಯ್ದೆ 196(1) ಎ ಹಾಗೂ 299 ರ ಕಾಯ್ದೆ ಅಡಿ ಮಹಿಳೆ ವಿರುದ್ಧ ಪ್ರಕರಣ ದಾಖಲಾಗಿದೆ. ಸೆ.8 ರಂದು ಮೆರವಣಿಗೆ ವೇಳೆ ಪೊಲೀಸರು ಈಕೆಯ ಮೇಲೆ ಲಾಠಿ ಬೀಸಿದ್ದರು. ಮೆರವಣಿಗೆ ವೇಳೆ ಮುಸ್ಲಿಂ ಸಮುದಾಯದ ವಿರುದ್ಧ ಘೋಷಣೆ ಕೂಗಿರುವ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಅದಾದ ಬಳಿಕ ಮಾಧ್ಯಮಗಳಿಗೆ ಹೇಳಿಕೆ ಕೊಡುವಾಗಲೂ ಸಿಎಂ ವಿರುದ್ಧ ಅಕ್ಷೇಪಾರ್ಹ ಪದ ಬಳಕೆ ಮಾಡಿದ್ದಳು. ಮದ್ದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಪ್ರಕರಣ ನಡೆದಿತ್ತು. ಪೊಲೀಸರು ಸುಮೊಟೊ ಕೇಸು ದಾಖಲು ಮಾಡಿದ್ದಾರೆ.

ನಾಡು–ನುಡಿಯ ವೈಭವ ಅನಾವರಣ



ವಿಷ್ಣುವಿನ ದಶಾವತಾರಂ ನೃತ್ಯ ಪ್ರದರ್ಶಿಸಿದ ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ತಂಡ

ಮೈಸೂರಿಗರು ಎಲ್ಲರನ್ನೂ ಆತ್ಮೀಯತೆ ಮತ್ತು ಪ್ರೀತಿಯಿಂದ ಸ್ವಾಗತಿಸುತ್ತಾರೆ. ಉತ್ತಮ ಕೆಲಸಗಳಿಗೆ ಸದಾ ಬೆನ್ನು ತಟ್ಟುತ್ತಾರೆ.
-ರಾಣಾ, ಕನ್ನಡ ಚಿತ್ರನಟ.

ನಿರಂತರವಾಗಿ ನಿಮ್ಮನ್ನು ರಂಜಿಸುವ ಕೆಲಸ ಮಾಡುತ್ತೇವೆ. ನಮ್ಮ ಕೆಲಸಗಳಿಗೆ ಬೆಂಬಲ ಕೊಟ್ಟು, ಬೆನ್ನು ತಟ್ಟುವವರು ಮೈಸೂರಿಗರು. ಎಲ್ಲರಿಗೂ ನಾಡಹಬ್ಬ ದಸರಾ ಮಹೋತ್ಸವದ ಶುಭಾಶಯಗಳು.
-ತ್ರಿವಿಕ್ರಮ್, ಬಿಗ್‌ಬಾಸ್ ಖ್ಯಾತಿ ನಟ

ಎಲ್ಲರನ್ನು ಬೆರಗುಗೊಳಿಸಿತು. ಮೈಸೂರಿನ ವಿವಿ ಮೊಹಲ್ಲಾದ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಂದ ‘ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು’ ಸಂವಿಧಾನದ ಮೂಲ ಆಶಯದ ಜೊತೆಗೆ ಹೆಣ್ಣಿನ ಸಮಾನತೆ, ಸತಿ ಸಹಗಮನ, ಬಾಲ್ಯ ವಿವಾಹ, ಶಿಶು ಹತ್ಯೆ ಸೇರಿದಂತೆ ಅನಿಷ್ಟ ಆಚರಣೆಗಳ ಕಣ್ಣಿಗೆ ಕಟ್ಟಲಾಯಿತು. ಕೊಡಗಿನ ಬಿಜಿಎಸ್ ಪ್ರಥಮ ದರ್ಜೆ ಕಾಲೇಜಿನಿಂದ ಕರ್ನಾಟಕ ಏಕೀಕರಣ ಆಗಿ ಮೈಸೂರು ರಾಜ್ಯ ಕರ್ನಾಟಕ ಎಂದು ನಾಮಕರಣ ಆಗುವವರೆಗಿನ ಬೆಳವಣಿಗೆಯ ಕನ್ನಡ ಹಾಡುಗಳಿಗೆ ನೃತ್ಯ ಮಾಡುವ ಮೂಲಕ ಕನ್ನಡತನವನ್ನು ಎತ್ತಿ ಹಿಡಿದರು.

ಹೊಳೆನರಸೀಪುರದ ಎಚ್.ಡಿ. ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಶಿವ ತಾಂಡವ ನೃತ್ಯ ಪ್ರದರ್ಶಿಸಿದರೆ, ಕುಶಾಲನಗರದ ಗುಮ್ಮನಕೊಲ್ಲಿ ಮೂಕಾಂಬಿಕಾ ಪದವಿಪೂರ್ವ ಕಾಲೇಜಿನ ರಾಧಾ-ಕೃಷ್ಣರ ಸಮಾಗಮ ಎಲ್ಲರನ್ನು ಮೋಡಿ ಮಾಡಿತು. ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜು ವತಿಯಿಂದ ಮೈಸೂರು ಮಹಾರಾಜರ ಕೊಡುಗೆ ಸಾರಿದರೆ, ನಂಜನಗೂಡಿನ ಶ್ರೀ ಲಕ್ಷ್ಮೀಹಯಗ್ರೀವ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಂದ ಕರ್ನಾಟಕ ಜಾನಪದ ವೈವಿಧ್ಯತೆ ಪ್ರದರ್ಶನಗೊಂಡಿತು.

ಅಪ್ಪು ಅಮರ: ಮೈಸೂರಿನ ಮರಕೋಡು ಮೊರಾರ್ಜಿ ದೇಸಾಯಿ ಪದವಿಪೂರ್ವ ವಸತಿ ವಿಜ್ಞಾನ ಕಾಲೇಜು ವಿದ್ಯಾರ್ಥಿಗಳು ಸಿನಿಮಾ ಆಧಾರಿತ ನೃತ್ಯದಲ್ಲಿ ಕರ್ನಾಟಕ ರತ್ನ ದಿವಂಗತ ಡಾ. ಪುನೀತ್ ರಾಜ್‌ಕುಮಾರ್ ಅವರಿಗೆ ನಮಿಸಿದರು. ಅಪ್ಪು ಹಾಡುಗಳಿಗೆ ಕುಣಿಯುವ ವೇಳೆ ನೆರೆದಿದ್ದವರೆಲ್ಲಾ ಅಪ್ಪು... ಅಪ್ಪು.. ಎಂದು ಕೂಗುತ್ತಾ, ಸಂಭ್ರಮಿಸಿದರು.

ಅರ್ಜುನನ ನೆನಪು: ವಿಶ್ವವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವದಲ್ಲಿ ಬರೋಬ್ಬರಿ 14 ಬಾರಿ ಚಿನ್ನದ ಅಂಬಾರಿ ಹೊತ್ತು ದಾಖಲೆ ಬರೆದು ಕನ್ನಡಿಗರ ಜನಮಾನಸದಲ್ಲಿ ನೆಲೆಯೂರಿರುವ ಅರ್ಜುನನ ಕುರಿತು ಮೈಸೂರಿನ ಎಸ್‌ಎನ್‌ಜಿ ಪಿಯು ಕಾಲೇಜು ವಿದ್ಯಾರ್ಥಿಗಳು ನೃತ್ಯ ರೂಪಕ ಪ್ರದರ್ಶಿಸಿದರು. ಲಕ್ಷಾಂತರ ಜನರ ಮನಸಲ್ಲಿ ನೆಲೆಯೂರಿರುವ ಅರ್ಜುನನ ಸಾವಿಗೆ ನ್ಯಾಯ ಕೇಳಿದ್ದು, ನೆರೆದವರ ಭಾವುಕರನ್ನಾಗಿಸಿತು.

ತ್ರಿವಿಕ್ರಮ್ ವೇದಿಕೆಗೆ ಆಗಮಿಸುತ್ತಿದ್ದಂತೆ ದರ್ಶನ್ ಅಭಿಮಾನಿಗಳು ಡಿ ಬಾಸ್ ಡಿ ಬಾಸ್ ಎಂದು ಕೂಗುತ್ತಿದ್ದ ವೇಳೆ ಆದಷ್ಟು ಬೇಗ ಆಚೆ ಬರ್ತಾರೆ. ಎಲ್ಲರೂ ಸೇರಿ ಆಚರಣೆ ಮಾಡೋಣ ಎಂದು ಭರವಸೆಯ ಮಾತುಗಳನ್ನಾಡಿದರು. ಈ ಮಾತಿಗೆ ದರ್ಶನ್ ಅಭಿಮಾನಿಗಳು ಸಿಳ್ಳೆ, ಚಪ್ಪಾಳೆ ಹಾಕುವ ಮೂಲಕ ಸಂಭ್ರಮಿಸಿದರು.

ಕೊಳ್ಳೇಗಾಲದ ಮಾರಿಕುಣಿತ: ಏಳು ಮಲೆ ಮ್ಯಾಲೆ ಕುಂತ್ವನೇ ಮಾದೇವ... ಆಂಗೆ ಕುಣಿರೋ ಹಿಂಗೆ ಕುಣಿರೋ ನಮ್ ಮುದ್ದು ಮಾದಯ್ಯಂಗೆ ಬಗ್ಗಿ ಕುಣಿರೋ ಹಾಡಿಗೆ ಒಂದಷ್ಟು ಯುವತಿಯರ ಗುಂಪು ಕೊಳ್ಳೆಗಾಲ ಮೂಲದ ಮಾರಿ ಕುಣಿತ ಹಾಕುವ ಮೂಲಕ ಹರ್ಷೋದ್ಗಾರಕ್ಕೆ ನಾಂದಿ ಹಾಡಿದರು. ಗಂಡ್ಮಕ್ಕಿಗಿಂತ ಹೆಣ್ಮಕ್ಕೆ ಹೆಚ್ಚಾಗಿದ್ದ ಇಂದಿನ ಕಾರ್ಯಕ್ರಮದಲ್ಲಿ ಹೆಣ್ಮಕ್ಕೆ ಸ್ಟ್ರಾಂಗು ಗುರು ಎಂಬುದು ಸಾಬೀತು ಪಡಿಸುವಂತಿತ್ತು.



ಕನ್ನಡ ಸಾಹಿತ್ಯ ಕುರಿತು ವಿಶೇಷ ಚೇತನ ಮಕ್ಕಳಿಂದ ಸಾಮೂಹಿಕ ನೃತ್ಯ



ಮಾದಪ್ಪನ ಹಾಡಿಗೆ ಮಾರಿಕುಣಿತ ಪ್ರದರ್ಶಿಸಿದ ಹೆಣ್ಮಕ್ಕಳು

ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ಅವರಿಗೆ ಸ್ನೇಹಿತರು, ಹಿತೈಷಿಗಳಿಂದ ಹುಟ್ಟುಹಬ್ಬದ ಶುಭಾಶಯ...



ಬಸವ ಬಳಗಳ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್ ಅವರಿಗೆ ಒಕ್ಕೂಟದ ಅಧ್ಯಕ್ಷ ಬಿ.ಕೆ.ನಾಗರಾಜ್, ಸಂಘಟನಾ ಕಾರ್ಯದರ್ಶಿ ರೇಚಣ್ಣ, ಪದಾಧಿಕಾರಿಗಳು, ಪಾಲಿಕೆ ಮಾಜಿ ಸದಸ್ಯರು, ಹುಟ್ಟುಹಬ್ಬದ ಶುಭಾಶಯ ಕೋರಿದರು.



ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ಪ್ರದೀಪ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಚೆಲುವಾಂಬ ಆಸ್ಪತ್ರೆ ಒಳರೋಗಿಗಳಿಗೆ ನಾಚನಹಳ್ಳಿ ಪಾಳ್ಯದ ಯುವ ಮುಖಂಡರಾದ ಇರ್ಫಾನ್, ಸ್ನೇಹಿತರು ಹಣ್ಣು, ಹಂಪಲು ವಿತರಿಸಿದರು..



ಕನಕಗಿರಿಯ ಆಟೋ ಚಾಲಕರ ಮತ್ತು ಮಾಲೀಕರ ಸಂಘದಿಂದ ಕಾಂಗ್ರೆಸ್ ಮುಖಂಡರಾದ ಪ್ರದೀಪ್‌ಕುಮಾರ್ ಹುಟ್ಟುಹಬ್ಬವನ್ನು ಆಚರಿಸಲಾಯಿತು.



ಹೆಚ್.ಡಿ.ಕೋಟೆ ತಾಲೂಕಿನ ಹಿರಿಯರು, ವೀರಶೈವ ಸಮಾಜದ ಮುಖಂಡರು ನಗರಪಾಲಿಕೆ ಮಾಜಿ ಸದಸ್ಯ, ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ಅವರಿಗೆ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಆತ್ಮೀಯವಾಗಿ ಶುಭಾಶಯ ಕೋರಿದರು.



ಹುಣಸೂರು ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಹಾಗೂ ಬೆಂಬಲಿಗರು ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.



ಸರಗೂರು ತಾಲೂಕಿನ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮುಖಂಡರು ಮೈಸೂರು ಜಿಲ್ಲಾ ಬಸವ ಬಳಗಗಳ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷ ಪ್ರದೀಪ್‌ಕುಮಾರ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಸಿದ್ಧತೆ ಪರಿಶೀಲನೆ...



ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಸೆ.14ರಂದು ನಡೆಯಲಿರುವ ಮೈಸೂರಿನ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕಿನ 119ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಸಿದ್ಧತೆಯನ್ನು ಬ್ಯಾಂಕಿನ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ರಾಜಕೀಯ ರವಿಕುಮಾರ್, ಸಿ.ಚಂದ್ರಶೇಖರ್, ಯೋಗಾನಂದ್, ನಿರಂಜನ್ ಪರಿಶೀಲಿಸಿದರು.

ಮಾನವರ ಅಳಿವು-ಉಳಿವು ಕಾಡಿನ ಸಂರಕ್ಷಣೆ ಅವಲಂಬಿಸಿದೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು ● ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ

ಬೆಂಗಳೂರು,ಸೆ.11(ಕೆಎಂಶಿ)- ಮಾನವರ ಅಳಿವು-ಉಳಿವು ಕಾಡಿನ ಸಂರಕ್ಷಣೆ ಮೇಲೆ ಅವಲಂಭಿತವಾಗಿದ್ದು, ಹಸಿರಿನ ಹೊದಿಕೆ ಹೆಚ್ಚಾದರೆ ಕಾನನ ದಟ್ಟವಾಗಿ ಅರಣ್ಯ ಸಂಪತ್ತೂ ಹೆಚ್ಚುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಕಾಡು ಪ್ರಾಣಿ ಸಂಪತ್ತಿನಲ್ಲಿ ರಾಜ್ಯ ಪ್ರಥಮ ಸ್ಥಾನದಲ್ಲಿದೆ. ಕಾಡು ಪ್ರಾಣಿಗಳಿಗೆ ಅಗತ್ಯ ಆಹಾರ, ನೀರು ಕಾಡಿನಲ್ಲೇ ಸಾಕಷ್ಟು ಸಿಗುವಂತಾದರೆ ವನ್ಯಜೀವಿ-ಮಾನವ ಸಂಘರ್ಷ ತಡೆಗಟ್ಟಬಹುದು ಎಂದರು.



ಬೆಂಗಳೂರಲ್ಲಿ ನಡೆದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹುತಾತ್ಮರ ಸ್ಮಾರಕಕ್ಕೆ ಪುಷ್ಪಗುಚ್ಛವಿರಿಸಿದರು.

ಕಾಡು ಪ್ರಾಣಿಗಳು ಮತ್ತು ಮಾನವರ ನಡುವಿನ ಸಂಘರ್ಷ ತಪ್ಪಿಸಲು ರೈಲ್ವೆ ಬ್ಯಾರಿಕೇಡ್ ನಿರ್ಮಿಸಿ, ನಿರ್ವಹಿಸಲು ಸ್ಪಷ್ಟ ಸೂಚನೆ ನೀಡಲಾಗಿದೆ. ಅರಣ್ಯ ಇಲಾಖೆ ಬಳಿ ಸಾಕಷ್ಟು ಹಣವಿದೆ. ಅಗತ್ಯವಿದ್ದರೆ ಇನ್ನೂ ಹೆಚ್ಚು ಹಣ ನೀಡಲು ಸಿದ್ಧ, ಸಮರ್ಪಕ ಬ್ಯಾರಿಕೇಡ್ ನಿರ್ಮಿಸಿ ಆನೆ-ಮಾನವ ಸಂಘರ್ಷ ತಪ್ಪಿಸಿ. ಹಿರಿಯ ಅಧಿಕಾರಿಗಳು ಆಗಿಂದ್ದಾಗ್ಗೆ ಕಾಡಿಗೆ ಭೇಟಿ ನೀಡಿ, ಕಾಡಿನಲ್ಲೇ ಹೆಚ್ಚೆಚ್ಚು ಉಳಿಯಬೇಕು. ಆಗ ಮಾತ್ರ ಕೆಳಹಂತದ ಸಿಬ್ಬಂದಿ ಕಾಡೊಳಗೇ ಇದ್ದು ಪರಿಣಾಮಕಾರಿ ಕರ್ತವ್ಯ ನಿರ್ವಹಿಸುತ್ತಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಪತ್ರಕರ್ತನಿಗೆ ಅವಮಾನಿಸಿದ ಆರೋಪ; ಮಾಜಿ ಸಂಸದ ಪ್ರತಾಪ ಸಿಂಹ ವಿರುದ್ಧ ದೂರು

ಮೈಸೂರು, ಸೆ.11(ಎಂಕೆ)- ದಲಿತ ಎಂಬ ಕಾರಣಕ್ಕೆ ಪತ್ರಕರ್ತರೊಬ್ಬರನ್ನು ಸಾರ್ವಜನಿಕವಾಗಿ ಅವಮಾನಿಸಿರುವ ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಕ್ರಮಕೈಗೊಳ್ಳುವಂತೆ ಆಗ್ರಹಿಸಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ನಗರ ಉಪ ಪೊಲೀಸ್ ಆಯುಕ್ತರಾದ ಆರ್.ಎನ್.ಬಿಂದುಮಣಿ ಅವರಿಗೆ ಗುರುವಾರ ದೂರು ಸಲ್ಲಿಸಿದ್ದಾರೆ.



ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ನಗರ ಉಪ ಪೊಲೀಸ್ ಆಯುಕ್ತರಾದ ಬಿಂದುಮಣಿ ಅವರಿಗೆ ದೂರು ಸಲ್ಲಿಸಿದರು.

ಸೆ.9ರಂದು ನಗರದ ಕುರುಬಾರಹಳ್ಳಿಯ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಮಾಧ್ಯಮಗಳೊಂದಿಗೆ ಮಾತನಾಡುತ್ತಿದ್ದ ಮಾಜಿ ಸಂಸದ ಪ್ರತಾಪ್ ಸಿಂಹ, ಪತ್ರಕರ್ತ ಎನ್.ಎಸ್.ಸತೀಶ್‌ಕುಮಾರ್ ಹೆಸರು ಪ್ರಸ್ತಾಪಿಸಿ, ಇಲ್ಲಿ ಯಾರೋ ಒಬ್ಬ ಸತೀಶ ಅಂತ ರಿಪೋರ್ಟರ್ ಇದ್ದಾನೆ. ಅವನ ಮಾತಿಗೆ ಮೂರು ಕಾಸಿನ ಬೆಲೆ ಕೊಡಲ್ಲ. ಅವನ ಪ್ರಶ್ನೆಯನ್ನು ನಾನು ತೆಗೆದುಕೊಳ್ಳುವುದಿಲ್ಲ ಎಂದು ಸಾರ್ವಜನಿಕವಾಗಿ ಅವಮಾನ ಮಾಡಿದ್ದಾರೆ.

ಹಾಗಾದರೆ, ಯಾರು ಪ್ರತಾಪ್ ಸಿಂಹ ಅವರನ್ನು ಪ್ರಶ್ನೆ ಮಾಡಬಾರದೆ? ಪತ್ರಕರ್ತ ಸತೀಶ್ ಕುಮಾರ್ ಅವರನ್ನು ನಿಂದಿಸಿ, ಅವಮಾನಿಸಿದ್ದಾರೆ. ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ದಲಿತ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕೂಡಲೇ ಬಂಧಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ದಲಿತಪರ ಸಂಘಟನೆಗಳು ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ಮಾಡಲಿವೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಮದ್ದೂರಲ್ಲಿ ಗಣೇಶನ ಗಲಾಟೆ ಹಿನ್ನೆಲೆ

ಮೈಸೂರಲ್ಲಿ ವ್ಯಾಪಕ ಮುಂಜಾಗ್ರತಾ ಕ್ರಮ



ಗಣೇಶ ವಿಸರ್ಜನಾ ಮೆರವಣಿಗೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಉದಯಗಿರಿ ಠಾಣೆ ವ್ಯಾಪ್ತಿಯಲ್ಲಿ ಪೊಲೀಸರು ಪಥಸಂಚಲನ ನಡೆಸಿದರು.

ಮೈಸೂರು, ಸೆ.11- ಮದ್ದೂರಿನಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆದು, ಉದ್ವಿಗ್ನ ಪರಿಸ್ಥಿತಿ ಉಂಟಾದ ಹಿನ್ನೆಲೆಯಲ್ಲಿ ಮೈಸೂರು ಪೊಲೀಸರು ಮುಂಜಾಗ್ರತಾ ಕ್ರಮ ವಹಿಸಿದ್ದಾರೆ.

ಮೈಸೂರಿನ ವಿವಿಧೆಡೆ ಪ್ರತಿಷ್ಠಾಪಿಸಲಿರುವ ಗೌರಿ-ಗಣಪತಿ ಮೂರ್ತಿಗಳ ವಿಸರ್ಜನಾ ಕಾರ್ಯಕ್ರಮ ಮುಂದುವರೆದಿದೆ. ಡಿಜೆಗೆ ಅವಕಾಶ ನೀಡದಿರುವ ಕಾರಣ ವೀರಗಾಸೆ, ಡೋಲು, ತಮಟೆ ಇತ್ಯಾದಿ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಿ, ಮೂರ್ತಿಗಳ ವಿಸರ್ಜಿಸಲಾಗುತ್ತಿದೆ. ಆದರೆ ಮದ್ದೂರಿನಲ್ಲಿ ಗಲಭೆ ನಡೆದ ನಂತರ ಇಲ್ಲಿನ ಪೊಲೀಸರು ಹೆಚ್ಚಿನ ನಿಗಾ ವಹಿಸಿದ್ದಾರೆ. ಗಣೇಶ ಮೆರವಣಿಗೆ ಸಂಬಂಧ ಆಯೋಜಕರಿಂದ ಮಾಹಿತಿ ಪಡೆದು, ಸಲಹೆ-ಸೂಚನೆಗಳನ್ನೂ ನೀಡುತ್ತಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಹೆಚ್ಚಿನ ಸಂಖ್ಯೆಯ ಸಿಬ್ಬಂದಿಯನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗುತ್ತಿದೆ.

ಪಥಸಂಚಲನ: ಉದಯಗಿರಿ ಠಾಣೆ ಪೊಲೀಸರು, ತಮ್ಮ ಕಾರ್ಯ ವ್ಯಾಪ್ತಿಯ ಕ್ಯಾತಮಾರನಹಳ್ಳಿ ಹಾಗೂ ಗೌಸಿಯಾನಗರದ ಪ್ರಮುಖ ರಸ್ತೆಗಳಲ್ಲಿ ಪಥಸಂಚಲನ ನಡೆಸಿದ್ದಾರೆ. ಚಾಮುಂಡಿ ಕಮಾಂಡೋ ಪಡೆಯೊಂದಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಜ್ಜೆ ಹಾಕಿ, ಕಾನೂನು-ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಎಲ್ಲರೂ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು ಎಂದು ಜಾಗೃತಿ ಮೂಡಿಸಿದ್ದಾರೆ. ಯಾವುದೇ ರೀತಿಯ ಸಣ್ಣ ಗಲಾಟೆಯೂ ಆಗದಂತೆ ಸಂಯಮ ಹಾಗೂ ಸೌಹಾರ್ದತೆಯಿಂದ ವರ್ತಿಸಬೇಕು, ಯಾರಾದರೂ ಶಾಂತಿಭಂಗ ಮಾಡಿದರೆ ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಅಭಿನಂದನೆ...



ವಿಧಾನಪರಿಷತ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ಅವರನ್ನು ಡಾ.ಹೆಚ್.ಸಿ. ಮಹದೇವಪ್ಪ ಅಭಿಮಾನಿ ಬಳಗದ ವತಿಯಿಂದ ಅಭಿನಂದಿಸಲಾಯಿತು. ಬಳಗದ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ, ಉಪಾಧ್ಯಕ್ಷ ಕಡಕೊಳ ಭರತ್, ಮಾಧ್ಯಮ ಸಲಹೆಗಾರ ಮಂಜುನಾಥ್ ಕೋಟೆ ಉಪಸ್ಥಿತರಿದ್ದರು.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ವಿರೋಧಿಸಿ ನಾಲ್ಕು ಪಿಐಎಲ್

ತುರ್ತು ವಿಚಾರಣೆ ಅಗತ್ಯವಿಲ್ಲ ಎಂದ ಹೈಕೋರ್ಟ್



ಬೆಂಗಳೂರು, ಸೆ.11- ವಿಶ್ವ ವಿಖ್ಯಾತ ಮೈಸೂರು ದಸರಾ ಉದ್ಘಾಟನೆಗೆ ಖ್ಯಾತ ಲೇಖಕಿ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವ ಸರ್ಕಾರದ ನಿರ್ಧಾರಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ. ಈ ಸಂಬಂಧ ಬೆಂಗಳೂರಿನ ಟಿ. ಗಿರೀಶ್‌ಕುಮಾರ್, ಹೆಚ್.ಎಸ್. ಗೌರವ್ ಮತ್ತು ಆರ್.ಸೌಮ್ಯ ಅವರ ಕರ್ನಾಟಕ ಹೈಕೋರ್ಟ್‌ಗೆ ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ದಾಖಲಿಸಿದ್ದಾರೆ. ಇದರ ಜೊತೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಕೂಡ ಈ ಹಿಂದೆಯೇ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಪಿಐಎಲ್ ಸಲ್ಲಿಸಿದ್ದಾರೆ.

ಬುಧವಾರ ದಾಖಲಾದ ಈ ಮೂರು ಪಿಐಎಲ್‌ಗಳ ತುರ್ತು ವಿಚಾರಣೆಗೆ ವಕೀಲರು ಮನವಿ ಸಲ್ಲಿಸಿದ್ದರು. ಆದರೆ, ಈ ಅರ್ಜಿಗಳು ಇನ್ನೂ ನಾಲ್ಕು ದಿನಗಳ ಬಳಿಕ ಲಿಸ್ಟ್ ಆಗಲಿವೆ ಹೀಗಾಗಿ ತುರ್ತು ವಿಚಾರಣೆ ಅಗತ್ಯವಿಲ್ಲ ಎಂದು ಕೋರ್ಟ್ ಸೂಚಿಸಿದೆ. ದಸರಾ ಉದ್ಘಾಟನೆಯನ್ನು ಹಿಂದೂ ಸಂಪ್ರದಾಯದಂತೆ ನಡೆಸಬೇಕು ಎಂದು ಒತ್ತಾಯಿಸಿ ಸರ್ಕಾರವು ಬಾನು ಮುಷ್ತಾಕ್ ಅವರಿಗೆ ನೀಡಿರುವ ಆಹ್ವಾನವನ್ನು ಹಿಂಪಡೆಯುವಂತೆ ನಿರ್ದೇಶನ ನೀಡಬೇಕೆಂದು ಅರ್ಜಿದಾರರು ಕೋರಿದ್ದಾರೆ.

ಅರ್ಜಿದಾರರು ತಮ್ಮ ಪಿಐಎಲ್‌ಗಳಲ್ಲಿ, ಮೈಸೂರು ದಸರಾ ಉತ್ಸವವು ಶತಮಾನಗಳಿಂದ ಹಿಂದೂ ಸಂಸ್ಕೃತಿ ಮತ್ತು ಸಂಪ್ರದಾಯದೊಂದಿಗೆ ಆಚರಿಸಲ್ಪಟ್ಟಿದೆ. ಆದ್ದರಿಂದ ಉದ್ಘಾಟನೆಯನ್ನು ಸಾಂಪ್ರದಾಯಿಕ ರೀತಿಯಲ್ಲಿ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ. ಬಾನು ಮುಷ್ತಾಕ್‌ರನ್ನು ಆಯ್ಕೆ ಮಾಡಿರುವ ಸರ್ಕಾರದ ಈ ನಿರ್ಧಾರವು ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುತ್ತದೆ. ಹೀಗಾಗಿ ಹಿಂದೂ ದೇವರು, ಕನ್ನಡ, ಭುವನೇಶ್ವರಿ ಬಗ್ಗೆ ಗೌರವವಿಲ್ಲದ ಬಾನು ಮುಷ್ತಾಕ್‌ರಿಂದ ದಸರಾ ಉದ್ಘಾಟಿಸುವುದು ಸರಿಯಲ್ಲ ಎಂದು ವಾದಿಸಲಾಗಿದೆ. ಸದ್ಯ ಈ ವಿವಾದವು ರಾಜ್ಯಾದ್ಯಂತ ಚರ್ಚೆಗೆ ಕಾರಣವಾಗಿದ್ದು, ದಸರಾ ಉತ್ಸವದ ಉದ್ಘಾಟನೆಗೆ ಸಂಬಂಧಿಸಿದಂತೆ ಹೈಕೋರ್ಟ್ ವಿಚಾರಣೆ ಮತ್ತು ಸರ್ಕಾರದ ಮುಂದಿನ ಕ್ರಮವೇನು ಎಂಬುದು ಕುತೂಹಲ ಮೂಡಿಸಿದೆ. ಹೈಕೋರ್ಟ್‌ನ ತೀರ್ಪು ಈ ವಿಷಯದಲ್ಲಿ ನಿರ್ಣಾಯಕವಾಗಲಿದೆ.

ನಾಳೆ ಡಾ.ಬೋರೇಗೌಡರ 6 ಕೃತಿಗಳ ಲೋಕಾರ್ಪಣೆ

ಮೈಸೂರು, ಸೆ.11(ಜಿಎ)-ಮಾಣಿಕ್ಯ ಫಾರ್ಮ್ ಆಶ್ರಯದಲ್ಲಿ ವಿಶ್ರಾಂತ ವಿಶೇಷ ಕಾರ್ಯದರ್ಶಿ ಡಾ.ಪಿ.ಬೋರೇಗೌಡರ 6 ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಸೆ.13ರಂದು ಹಮ್ಮಿಕೊಳ್ಳಲಾಗಿದೆ ಎಂದು ಜೆಎಸ್‌ಎಸ್ ಆಯುರ್ವೇದ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ.ಬಿ.ಗುರು ಬಸವರಾಜ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಕಲಾಮಂದಿರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ 'ಗ್ರೌಂಡ್ ಗೌರ್ವನೆನ್ಸ್ ', 'ಗ್ರೌಂಡ್ ಗೌರ್ವನೆನ್ಸ್ ವಾಲ್ಯುಮ್-2', 'ಶೂನ್ಯದಿಂದ ಶಿಖರದೆಡೆಗೆ' 'ಮಾಣಿಕ್ಯ ಫಾರ್ಮ್', 'ಮಾಣಿಕ್ಯ ತೋಟ', 'ಹಣ್ಣುಗಳ ತೋಟ', 'ಮಾಣಿಕ್ಯ ಗ್ರೀನ್ ಪಾಥ್' ಪುಸ್ತಕಗಳು ಲೋಕಾರ್ಪಣೆಗೊಳ್ಳಲಿದ್ದು, ವಿಧಾನ ಪರಿಷತ್ತಿನ ಸಭಾಪತಿ ಯು.ಟಿ. ಖಾದರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ವಿಶ್ರಾಂತ ಕುಲಪತಿ ಡಾ.ರಾಮೇಗೌಡ ಅಧ್ಯಕ್ಷತೆ ವಹಿಸುವರು ಎಂದರು.

ಅತಿಥಿಗಳಾಗಿ ಹೆಚ್‌ಸಿಜಿ ಆಸ್ಪತ್ರೆಗಳ ಸಮೂಹ ಛೇರ್‌ಮನ್ ಡಾ.ಬಿ.ಎಸ್. ಅಜಯ್‌ಕುಮಾರ್, ಹೃದಯ ತಜ್ಞರಾದ ಡಾ.ಜಾವೆದ್ ನಯೀಮ್, ಜೆಎಸ್‌ಎಸ್ ವಿವಿ ಕುಲಪತಿ ಡಾ.ಸುರೇಶ್, ಆದಿಚುಂಚನಗಿರಿ ವಿವಿ ಕುಲಪತಿ ಡಾ.ಎಂ.ಎ. ಶೇಖರ್, ತೋಟಗಾರಿಕೆ ವಿವಿ ಕುಲಪತಿ ಡಾ.ವಿಷ್ಣುವರ್ಧನ್, ವಿಶ್ರಾಂತ ಕುಲಪತಿ ಡಾ.ಎಂ.ಎಲ್.ಮಹೇಶ್ವರ್, ಆರ್ಗಾನಿಕ್ ರೈತ ಸ್ವಾಮಿ ಆನಂದ್, ಉತ್ತರ ಪ್ರದೇಶ ಮುಖ್ಯಮಂತ್ರಿಗಳ ಪ್ರಧಾನ ಆರ್ಥಿಕ ಸಲಹೆಗಾರ, ಪ್ರಧಾನಮಂತ್ರಿಗಳ ಆರ್ಥಿಕ ಸಲಹೆಗಾರ ಸಮಿತಿ ಸದಸ್ಯ ಪ್ರೊ.ಕೆ.ವಿ.ರಾಜು ಭಾಗವಹಿಸುವರು. ಪ್ರೊ.ಎಂ.ಕೃಷ್ಣೇಗೌಡ, ಎಕ್ಸೆಲ್ ಸಾಫ್ಟ್ ಸ್ಥಾಪಕ ಸುಧನ್ವ ಉಪಸ್ಥಿತರಿರಲಿದ್ದಾರೆಂದರು. ಮಾಜಿ ಮೇಯರ್‌ರಾದ ಪಿ.ವಿಶ್ವಾಥ್, ಆರೀಫ್ ಹುಸೇನ್, ಪ್ರದ್ಯುಮ್ನ, ಪ್ರಮೋದ್ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯುತ್ ದೀಪಾಲಂಕಾರ ಪರಿಶೀಲನೆ



ದಸರಾ ಮಹೋತ್ಸವಕ್ಕಾಗಿ ಮೈಸೂರನ್ನು ವರ್ಣರಂಜಿತ ವಿದ್ಯುತ್ ದೀಪಗಳಿಂದ ಸಿಂಗರಿಸುವ ಕಾರ್ಯ ಪ್ರಗತಿಯಲ್ಲಿದ್ದು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷರೂ ಆದ ಶಾಸಕ ರಮೇಶ್ ಬಂಡಿಸಿದ್ದೇಗೌಡ, ನಿಗಮದ ವ್ಯವಸ್ಥಾಪಕ ನಿರ್ದೇಶಕ ಮುನಿಗೋಪಾಲರಾಜು, ಅಧೀಕ್ಷಕ ಇಂಜಿನಿಯರ್ ಸುನೀಲ್ ಇನ್ನಿತರ ಅಧಿಕಾರಿಗಳು ಗುರುವಾರ ರಾತ್ರಿ ರಾಮಸ್ವಾಮಿ ವೃತ್ತದ ಬಳಿಯ ವಿದ್ಯುತ್ ದೀಪಾಲಂಕಾರ ವೀಕ್ಷಿಸಿ, ಮತ್ತಷ್ಟು ಸುಧಾರಣೆಗೆ ಸಲಹೆ ನೀಡಿದರು.

ಡಾ.ವಿಷ್ಣುವರ್ಧನ್ 'ಕರ್ನಾಟಕ ರತ್ನ'; ಮೈಸೂರಲ್ಲಿ ಅಭಿಮಾನಿಗಳ ಸಂಭ್ರಮಾಚರಣೆ

ಮೈಸೂರು, ಸೆ.11- ದಿವಂಗತ ನಟ ವಿಷ್ಣುವರ್ಧನ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸಿದ ಹಿನ್ನೆಲೆಯಲ್ಲಿ ಮೈಸೂರಿನಲ್ಲೂ ಅಭಿಮಾನಿಗಳು ಸಿಹಿ ಹಂಚಿ, ಸಂಭ್ರಮಿಸಿದರು.

ನಗರದ ಅಗ್ರಹಾರ ವೃತ್ತದಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದ ವಿಷ್ಣುವರ್ಧನ್ ಅಭಿಮಾನಿಗಳ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ, ವಿಷ್ಣುವರ್ಧನ್ ಅವರ ಅಭಿಮಾನಿಗಳ 15 ವರ್ಷಗ ಕನಸು ಇಂದು ನನಸಾಗಿದೆ. ಕೊನೆಗೂ ಕರ್ಣನಿಗೆ ಒಳ್ಳೆಯ ಕಾಲ ಕೂಡಿಬಂದಿದೆ. ಪ್ರಶಸ್ತಿ ಘೋಷಿಸಿದ ರಾಜ್ಯ ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಈ ಬಾರಿ ವಿಷ್ಣುವರ್ಧನ್ ಅವರ 75ನೇ ಹುಟ್ಟುಹಬ್ಬವನ್ನು ಅಭಿಮಾನಿಗಳೆಲ್ಲ ಸೇರಿ ಹಬ್ಬದಂತೆ ಆಚರಿಸುತ್ತೇವೆ. ಸಾಹಸಸಿಂಹ ವಿಷ್ಣುವರ್ಧನ್ ಅವರೊಂದಿಗೆ ಅಭಿನವ ಸರಸ್ವತಿ ಬಿ ಸರೋಜಾದೇವಿ ಅವರಿಗೂ 'ಕರ್ನಾಟಕ ರತ್ನ' ಘೋಷಿಸಿರುವುದು ಸ್ವಾಗತಾರ್ಹ ಎಂದರು.



ದಿವಂಗತ ನಟ ವಿಷ್ಣುವರ್ಧನ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸಿರುವ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು ಮೈಸೂರಿನ ಅಗ್ರಹಾರ ವೃತ್ತದಲ್ಲಿ ಸಂಭ್ರಮಾಚರಿಸಿದರು.

ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ಜಿ.ರಾಘವೇಂದ್ರ, ಬಸವರಾಜ, ಜೀವದಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ರವಿಚಂದ್ರ ಎಸ್.ಎನ್. ರಾಜೇಶ್, ಟಿ.ಎಸ್.ಅರುಣ್, ರವಿನಂದನ್, ಮಹಾನ್ ಶ್ರೇಯಸ್, ಲಕ್ಷ್ಮಣ್, ಚಿನ್ನಬೆಳ್ಳಿ ಸಿದ್ದಪ್ಪ, ಸಂತೋಷ್, ರವೀಂದ್ರ ಕುಮಾರ್, ಅಭಿ, ಹರೀಶ್ ನಾಯ್ಡು ರಾಕೇಶ್ ಭಟ್ ಸೇರಿದಂತೆ ಅನೇಕ ಅಭಿಮಾನಿಗಳು ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಲಂಚ ಸ್ವೀಕರಿಸುತ್ತಿದ್ದ ದ್ವಿತೀಯ ದರ್ಜೆ ಸಹಾಯಕ ಲೋಕಾಯುಕ್ತ ಪೊಲೀಸರ ಬಲೆಗೆ



ಕುಶಾಲನಗರ : ಇಲ್ಲಿನ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಕಾವೇರಿ ನೀರಾವರಿ ನಿಗಮದ ಹಾರಂಗಿ ಪುನರ್ವಸತಿ ವಿಭಾಗದ ಕಾರ್ಯಪಾಲಕ ಅಭಿಯಂತರ ಕಚೇರಿಯ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.

ವಿದ್ಯುತ್ ಗುತ್ತಿಗೆದಾರ ಪ್ರಸನ್ನ ಎಂಬಾತನಿಂದ 1.5 ಲಕ್ಷ ರೂ. ಕಾಮಗಾರಿಯ ಬಿಲ್ ಮಾಡಲು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುಣಸೂರಿನ ಆರ್.ಕೃಷ್ಣ ಎಂಬಾತ 30 ಸಾವಿರ ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದ ಎನ್ನಲಾಗಿದೆ. ಈ ಪೈಕಿ ಗುರುವಾರ 20 ಸಾವಿರ ರೂ. ಹಣ ಪಡೆಯುತ್ತಿದ್ದ ಸಂದರ್ಭ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ಮಾರ್ಗದರ್ಶನದಲ್ಲಿ ಮಡಿಕೇರಿ ಲೋಕಾ ಯುಕ್ತ ಡಿವೈಎಸ್ಪಿ ದಿನಕರ ಶೆಟ್ಟಿ, ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಲೋಕೇಶ್, ವೀಣಾ ನಾಯಕ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಮುಖ್ಯ ಪೇದೆ ಲೋಕೇಶ್ ಸೇರಿದಂತೆ ಸಿಬ್ಬಂದಿಗಳಾದ ಮಂಜುನಾಥ್, ಶಶಿ, ಲೋಹಿತ್, ಪ್ರವೀಣ್ ಕುಮಾರ್, ದೀಪಿಕಾ, ಅರುಣ್ ಕುಮಾರ್, ಸಲಾಹುದ್ದೀನ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಗೋಣಿಕೊಪ್ಪ ಪೊಲೀಸರಿಂದ ನಶೆ ಮುಕ್ತ ಭಾರತ ಜಾಗೃತಿ ಜಾಥಾ



ಮಡಿಕೇರಿ: ಗೋಣಿಕೊಪ್ಪ ಪೊಲೀಸ್ ಠಾಣೆ ಸಿಬ್ಬಂದಿ, ಕಾವೇರಿ ಪದವಿ ಕಾಲೇಜು ರಾಷ್ಟ್ರೀಯ ಸೇವಾ ಯೋಜನಾ ವಿದ್ಯಾರ್ಥಿ ಗಳು ನಶೆ ಮುಕ್ತ ಭಾರತ ಜಾಗೃತಿ ಜಾಥಾವನ್ನು ನಡೆಸಿದರು. ಗೋಣಿಕೊಪ್ಪ ವೃತ್ತ ನಿರೀಕ್ಷಕರ ಕಚೇರಿಯಿಂದ ಪಟ್ಟಣದ ಮಾರ್ಕೆಟ್ ಹಿಂಭಾಗದ ಮೂಲಕ ಬಸ್ಸ್ ನಿಲ್ದಾಣದವರೆಗೆ ಮೆರವಣಿಗೆ ನಡೆಸಿ ಜಾಗೃತಿ ಅಭಿಯಾನ ನಡೆಸಿದರು.

ಕಾಲೇಜಿನ ವಿದ್ಯಾರ್ಥಿಗಳು ಮಾದಕ ವ್ಯಸನದಿಂದ ಉಂಟಾಗುವ ಸಮಸ್ಯೆಯ ಬಗ್ಗೆ ಬೀದಿ ನಾಟಕ ಪ್ರದರ್ಶಿಸಿ ಗಮನ ಸೆಳೆದರು. ಮಾದಕ ದ್ರವ್ಯದ ಬಳಕೆಯಿಂದ ಸಾಮಾಜಿಕ, ಮಾನಸಿಕ ಮತ್ತು ದೈಹಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಯುವ ಜನರ ಆರೋಗ್ಯ ಕಾಳಜಿಯನ್ನು ಗಮನದಲ್ಲಿಟ್ಟು ಸರ್ಕಾರ ನಶೆ ಮುಕ್ತ ಭಾರತ ಅಭಿಯಾನವನ್ನು ನಡೆಸುತ್ತಿದೆ ಎಂದು ವೃತ್ತ ನಿರೀಕ್ಷಕ ಶಿವರಾಜ್ ಆರ್. ಮುದೋಳ್ ಮಾಹಿತಿ ನೀಡಿದರು.

ಠಾಣಾಧಿಕಾರಿ ಪ್ರದೀಪ್ ಕುಮಾರ್ ಬಿ.ಕೆ, ಎ.ಎಸ್.ಐ.ಗಳಾದ ದೇವರಾಜು, ವೆಂಕಟೇಶ್, ಸಿಬ್ಬಂದಿಗಳಾದ ತನುಕುಮಾರ್, ಬಿ.ಎಂ. ರಮೇಶ್, ಸುಜನ್, ಹೇಮಾಲತ, ಪುನೀತ್ ಹಾಗೂ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿಗಳಾದ ಎಂ.ಎ. ಕುಶಾಲಪ್ಪ, ಪೂಜಾ ಶರಣು ಸೇರಿದಂತೆ ಎನ್.ಎಸ್.ಎಸ್. ಘಟಕದ ವಿದ್ಯಾರ್ಥಿಗಳು ಹಾಜರಿದ್ದರು.

ಸೆ.17ರಂದು ಸೋಮವಾರಪೇಟೆಯಲ್ಲಿ ತಾಪಂ ತ್ರೈಮಾಸಿಕ ಕೆಡಿಪಿ ಸಭೆ

ಮಡಿಕೇರಿ ಸೆ.11– ಸೋಮವಾರಪೇಟೆ ತಾಲ್ಲೂಕು ತ್ರೈಮಾಸಿಕ ಕೆಡಿಪಿ ಸಭೆಯು ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್‌ಗೌಡ ಅವರ ಅಧ್ಯಕ್ಷತೆಯಲ್ಲಿ ಸೆ.17 ರಂದು ಬೆಳಗ್ಗೆ 10.30 ಗಂಟೆಗೆ ಸೋಮವಾರಪೇಟೆ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಸೋಮವಾರಪೇಟೆ ತಾಪಂ ಇಒ ತಿಳಿಸಿದ್ದಾರೆ.

ಕಾಫಿ ಬೆಳೆಗಾರರ ಸಂಕಷ್ಟ ನಿವಾರಿಸಿ, ಮಾನವ–ವನ್ಯಜೀವಿ ಸಂಘರ್ಷ ತಪ್ಪಿಸಿ

ಕೊಡಗಿನ ರೈತ ನಿಯೋಗ ಸಂಸದ ಯದುವೀರ್‌ಗೆ ಮನವಿ



ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿರುವ ಸಂಸದರ ಕಚೇರಿಯಲ್ಲಿ ಗುರುವಾರ ರೈತ ಸಂಘದ ರಾಜ್ಯ ಉಪಾಧ್ಯಕ್ಷರೂ ಆದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ನೇತೃತ್ವದಲ್ಲಿ ಸಂಸದ ಯದುವೀರ ಕೃಷ್ಣದತ್ತ ಒಡೆಯರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು,ಸೆ.11(ಪಿಎಂ)– ಕೊಡಗು ಜಿಲ್ಲೆಯಲ್ಲಿ ಕಾಫಿ ಬೆಳೆಗಾರರ ಆರ್ಥಿಕ ಸಂಕಷ್ಟ ನಿವಾರಿಸಬೇಕು ಹಾಗೂ ಮಾನವ ಮತ್ತು ವನ್ಯಜೀವಿ ಸಂಘರ್ಷ ತಡೆಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮೈಸೂರು– ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಕರ್ನಾಟಕ ರಾಜ್ಯ ರೈತ ಸಂಘ ಕೊಡಗು ಘಟಕದ ವತಿಯಿಂದ ಮನವಿ ಸಲ್ಲಿಸಲಾಯಿತು.

ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿರುವ ಸಂಸದರ ಕಚೇರಿಯಲ್ಲಿ ರೈತ ಸಂಘದ ರಾಜ್ಯ ಉಪಾಧ್ಯಕ್ಷರೂ ಆದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ನೇತೃತ್ವದಲ್ಲಿ ಗುರುವಾರ ಮನವಿ ಸಲ್ಲಿಸಲಾಯಿತು.

ಭಾರತದಲ್ಲಿ ಕೊಡಗು, ಕಾಫಿ ಬೆಳೆಯ ಕೇಂದ್ರ ಬಿಂದು ಆಗಿದೆ. ದೇಶದ ಕಾಫಿ ರಫ್ತಿಗೆ ಗಣನೀಯ ಕೊಡುಗೆ ನೀಡುತ್ತಿದೆ. ಆದರೆ ಜಿಲ್ಲೆಯಲ್ಲಿ ರೈತರು ತಮ್ಮ ಕಾಫಿ ಕೃಷಿಯ ಸುಸ್ಥಿರತೆಗೆ ಧಕ್ಕೆ ಉಂಟು ಮಾಡುವ ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದಾರೆ.

ಭಾರತದಲ್ಲಿ ಉತ್ಪಾದಿಸುವ ಕಾಫಿಯಲ್ಲಿ ಶೇ.70ರಷ್ಟನ್ನು ಕರ್ನಾಟಕ ನೀಡುತ್ತಿದೆ. ಈ ಪೈಕಿ ರಾಜ್ಯದಲ್ಲಿ ಕೊಡಗು, ಕಾಫಿ ಉತ್ಪಾದನೆಯಲ್ಲಿ ಅಗ್ರಸ್ಥಾನದಲ್ಲಿದೆ. ಆದಾಗ್ಯೂ ಜಿಲ್ಲೆಯ ಬೆಳೆಗಾರರು ಅಂತಿಮವಾಗಿ ಉತ್ಪನ್ನದ ಮೌಲ್ಯದಲ್ಲಿ ಕೇವಲ ಶೇ.3ರಷ್ಟು ಪಡೆಯುತ್ತಿದ್ದು, ಬ್ರ್ಯಾಂಡ್ ಹಾಗೂ ರೋಸ್ಟರ್‌ಗಳು ಸುಮಾರು 70ರಷ್ಟು ಮೌಲ್ಯವನ್ನು ಗಳಿಸುತ್ತಿದ್ದಾರೆ. ಇದಲ್ಲದೆ, ದೊಡ್ಡ ವ್ಯಾಪಾರ ಮತ್ತು ರಫ್ತು ಕಂಪನಿಗಳು ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸುತ್ತಿದ್ದು, ಹೊಲಮಟ್ಟದ ಬೆಲೆಗಳ ಮೇಲೆ ಪ್ರಭಾವ ಬೀರುತ್ತಿವೆ. ರೈತರು ನ್ಯಾಯಯುತ ಆದಾಯದಿಂದ ವಂಚಿತರಾಗುತ್ತಿದ್ದಾರೆ.

ಶುಚಿಗೊಳಿಸುವಿಕೆ, ಮಿಲ್ಲಿಂಗ್ ಮತ್ತು ಗ್ರೇಡಿಂಗ್ ಅನ್ನು ಸಂಸ್ಕರಣೆ ಎಂದು ತಪ್ಪಾಗಿ ವರ್ಗೀಕರಿಸಲಾಗಿರುವ ಆದಾಯ ತೆರಿಗೆ ಕಾಯ್ದೆ 'ಸೆಕ್ಷನ್ 7ಬಿ'ಯಿಂದ ಕಾಫಿಯನ್ನು ಕೈಬಿಡಬೇಕು. ಸ್ಥಳೀಯ ಗುಣಮಟ್ಟದ ಪ್ರಮಾಣೀಕರಣ ಸಂಸ್ಥೆಗಳನ್ನು ಸ್ಥಾಪಿಸಬೇಕು. ಪಾರದರ್ಶಕ ಬೆಲೆ ಅನ್ವೇಷಣೆಗಾಗಿ ಇ-ಹರಾಜು ಮಾದರಿಯಲ್ಲಿ ಪ್ಲಾಟ್‌ಫಾರಂಗಳಿಗೆ ಉತ್ತೇಜಿಸಬೇಕು. ಕಾಫಿ ಸಂಬಂಧ ದೇಶೀಯ ಬಳಕೆ ಹೆಚ್ಚಿಸಬೇಕು. ಪಟ್ಟಣ ಮತ್ತು ನಗರಗಳಲ್ಲಿ ಇಂಡಿಯಾ ಕಾಫಿ ಹೌಸ್‌ಗಳನ್ನು ಸ್ಥಾಪಿಸಬೇಕು. ಖಾಸಗಿ ಕಾಫಿ ಹೌಸ್‌ಗಳನ್ನು ನೇರವಾಗಿ ರೈತರೊಂದಿಗೆ ಸಂಪರ್ಕಿಸಲು ಉನ್ನತ ಪ್ರಮಾಣೀಕರಣ ಏಜೆನ್ಸಿಗಳನ್ನು ರಚಿಸಿ, ಬೆಲೆ ಪ್ರೀಮಿಯಂಗಳನ್ನು ಸಕ್ರಿಯಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಈಡೇರಿಸುವ ಮೂಲಕ ಕಾಫಿ ಬೆಳೆಗಾರರ ಶ್ರೇಯೋಭಿವೃದ್ಧಿಗಾಗಿ ಸಹಕರಿಸಬೇಕೆಂದು ಮನವಿಯಲ್ಲಿ ಕೋರಲಾಗಿದೆ.

ಮಾನವ ಮತ್ತು ವನ್ಯಜೀವಿ ಸಂಘರ್ಷ ಕೊಡಗಿನಲ್ಲಿ ಭಾರೀ ಬಿಕ್ಕಟ್ಟನ್ನು ಉಂಟು ಮಾಡಿದೆ. ಕಾಫಿ ತೋಟಗಳು, ಭತ್ತದ ಗದ್ದೆಗಳು ಮತ್ತು ಇತರ ಕೃಷಿ ಭೂಮಿಗಳ ಮೇಲೆ ವನ್ಯಜೀವಿ ದಾಳಿ ಹೆಚ್ಚುತ್ತಿದ್ದು, ಬೆಳೆ ಸೇರಿದಂತೆ ಕೃಷಿ ಸಾಮಗ್ರಿಗಳಿಗೂ ಹಾನಿ ಉಂಟಾಗುತ್ತಿದೆ. ಹೀಗಾಗಿ ಆನೆ ಕಾರಿಡಾರ್‌ಗಳನ್ನು ಬಲಪಡಿಸಿ, ವೈಜ್ಞಾನಿಕ ರೀತಿಯಲ್ಲಿ ವನ್ಯಜೀವಿ ನಿರ್ವಹಣೆಗೆ ಕ್ರಮ ವಹಿಸಬೇಕು ಎಂದೂ ಮನವಿಯಲ್ಲಿ ವಿನಂತಿಸಲಾಗಿದೆ. ಸಂಘದ ಪದಾಧಿಕಾರಿಗಳು ಹಾಗೂ ಕಾಫಿ ಬೆಳೆಗಾರರಾದ ಮುಚ್ಚಿಮಾಡ ಸುಭಾಷ್ ಸುಬ್ಬಯ್ಯ, ಮಚ್ಚಿಮಾಡ ರಾಯ್, ಸತೀಶ್, ಡಾ.ಅಯ್ಯಪ್ಪ ಗಣ್ಣಾಚ್ಚ ಅರ್ಜುನ್, ಮತ್ತಿತರರು ಹಾಜರಿದ್ದರು.

ಶೇ.60ರಷ್ಟು ಕಾಫಿಯನ್ನು ದೇಶೀ ಬಳಕೆಗೆ ಉತ್ತೇಜಿಸಲು ಕಾರ್ಯಕ್ರಮ ರೂಪಿಸುವಂತೆ ವಿನಂತಿಸಿದ್ದೇವೆ ; ಮನು ಸೋಮಯ್ಯ

ಮೈಸೂರು,ಸೆ.11(ಪಿಎಂ)– ಕೇಂದ್ರ ಸರ್ಕಾರ ಅಧೀನದ ಕಾಫಿ ಬೋರ್ಡ್ ಮೂಲಕ ಶೇ.60ರಷ್ಟು ಕಾಫಿ ಬಳಕೆಯನ್ನು ದೇಶೀಯವಾಗಿ ಹೆಚ್ಚಿಸಲು ಕೇಂದ್ರ ಸರ್ಕಾರದಿಂದ ಕಾರ್ಯಕ್ರಮಗಳನ್ನು ರೂಪಿಸಬೇಕೆಂಬುದೂ ಸೇರಿದಂತೆ ಕಾಫಿ ಬೆಳೆಗಾರರ ಶ್ರೇಯೋಭಿವೃದ್ಧಿ ಸಂಬಂಧ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷರೂ ಆದ ಕೊಡಗು ಘಟಕದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ತಿಳಿಸಿದರು.

ಸಂಸದರಿಗೆ ಮನವಿ ಸಲ್ಲಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಾಫಿ ಬೆಳೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಲೆ ನಿಗದಿ ಆಗುವುದಕ್ಕೂ ಹಾಗೂ ಕೊಡಗು, ಚಿಕ್ಕಮಗಳೂರು ಸೇರಿದಂತೆ ದೇಶೀಯವಾಗಿ ನಿಗದಿಯಾಗುವ ಬೆಲೆಗೂ ವ್ಯತ್ಯಾಸವಿದೆ. ಇದನ್ನು ಸರಿಪಡಿಸಬೇಕು. ಇದು ನಮ್ಮ ದೇಶದಲ್ಲಿ ಬೆಳೆಯುವ ಕಾಫಿಯಲ್ಲಿ ಶೇ.70ರಷ್ಟು ರಫ್ತು ಆಗುತ್ತದೆ. 250ರಿಂದ 300ರಷ್ಟು ಮಾತ್ರ ದೇಶೀಯ ಬಳಕೆಗೆ ಖರೀದಿಯಾಗುತ್ತದೆ. ಹಾಗಾಗಿ ಇಲ್ಲಿ ಸ್ಥಳೀಯ ಮಾರುಕಟ್ಟೆಯನ್ನೇ ಹೆಚ್ಚಳ ಮಾಡುವಂತೆ ಕಾಫಿ ಬೋರ್ಡ್‌ಗೆ ಅವಕಾಶ ಕಲ್ಪಿಸಬೇಕು ಎಂದರು.

ಕಾಫಿ ಬೆಳೆಗಾರರನ್ನು ಉತ್ತೇಜಿಸಲು ಅವರಿಗೆ ಸವಲತ್ತುಗಳನ್ನು ನೀಡಬೇಕು. ಏಕೆಂದರೆ ಕೊಡಗಲ್ಲಿ ಬೆಳೆ ರಕ್ಷಣೆ ಮಾಡಿಕೊಳ್ಳುವುದು ದೊಡ್ಡ ಸವಾಲಾಗಿ ಪರಿಣಮಿಸಿದೆ. ವನ್ಯಜೀವಿ ಮತ್ತು ಮಾನವನ ನಡುವಿನ ಸಂಘರ್ಷ ಮಿತಿ ಮೀರಿದೆ. ಕಾರ್ಮಿಕರು, ಸಾರ್ವಜನಿಕರು, ರೈತರ ಜೀವ ಹಾನಿಯಾಗುತ್ತಿದೆ. ಮುಂಗಾರು ಮಳೆ ವೇಳೆ ಬೆಳೆಗೆ ಹಾನಿಯಾಗುತ್ತದೆ. ಇಷ್ಟೆಲ್ಲಾ ಆಗಿ ನಮ್ಮ ಕೈಗೆ ಬರುವ ಬೆಳೆ ಸಹ ವನ್ಯಜೀವಿ ಪಾಲಾಗುವುದೇ ಹೆಚ್ಚಾಗುತ್ತಿದೆ. ಹೀಗಿರುವಾಗ ಬದುಕು ಕಟ್ಟಿಕೊಳ್ಳುವುದೇ ಕಷ್ಟವಾಗುತ್ತಿದೆ. ಹಾಗಾಗಿ ಬೆಳೆ ನಷ್ಟ ಹಾಗೂ ಜೀವ ಹಾನಿಗೆ ನೀಡುವ ಪರಿಹಾರದ ಮೊತ್ತ ಹೆಚ್ಚಿಸುವಂತೆ ಮನವಿಯಲ್ಲಿ ಕೋರಿದ್ದೇವೆ ಎಂದು ತಿಳಿಸಿದರು.

ಎಚ್‌ಐವಿ ಅರಿವು ಕುರಿತು ಬೈಕ್ ರ್‍ಯಾಲಿ



ಎಚ್‌ಐವಿ ಜಾಗೃತಿಗಾಗಿ ಬೈಕ್ ರ್‍ಯಾಲಿ ನಡೆಯಿತು.

ಮಡಿಕೇರಿ,ಸೆ.11– ಪ್ರಸಕ್ತ ಸಾಲಿನ ಯುವ ಜನೋತ್ಸವ ಎಚ್‌ಐವಿ ಅರಿವು ಆಂದೋಲನ–ಕಾರ್ಯಕ್ರಮದ ಅಂಗವಾಗಿ (ಎಚ್‌ಐವಿ ನಿಯಂತ್ರಣಕ್ಕಾಗಿ ಯುವ ಜನತೆ) ಎಚ್‌ಐವಿ ಜಾಗೃತಿಗಾಗಿ ಬೈಕ್ ರ್‍ಯಾಲಿ ನಡೆಯಿತು.

ಈ ಸ್ಪರ್ಧೆಯ ಮುಖ್ಯ ಉದ್ದೇಶ ಎಚ್‌ಐವಿ, ಏಡ್ಸ್ ಬಗ್ಗೆ ಅರಿವು, ಸೇವಾ ಸೌಲಭ್ಯಗಳ ಮಾಹಿತಿ, ಕಳಂಕ ಮತ್ತು ತಾರತಮ್ಯವನ್ನು ತಡೆಗಟ್ಟುವುದು, ಉಚಿತ ರಾಷ್ಟ್ರೀಯ ಸಹಾಯ ವಾಣಿ 1097, ಎಚ್.ಐ.ವಿ (ತಡೆಗಟ್ಟುವಿಕೆ ಹಾಗೂ ನಿಯಂತ್ರಣ) ಕಾಯಿದೆ 2017 ಮತ್ತಿತರ ಕುರಿತು ಅರಿವು ಮೂಡಿಸಲಾಯಿತು. ಅದರಂತೆ ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಎಚ್.ಐ.ವಿ ಅರಿವು ಆಂದೋಲನ 2025–26ರ ಕಾರ್ಯಕ್ರಮದ ಅಂಗವಾಗಿ ಗುರುವಾರ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಬೆಂಗಳೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಕೊಡಗು ಜಿಲ್ಲೆ ಇವರ ವತಿಯಿಂದ ಬೈಕ್ ರ್‍ಯಾಲಿ ನಡೆಯಿತು.

ಈ ಕಾರ್ಯಕ್ರಮಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಸತೀಶ್ ಕುಮಾರ್, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿ.ಟಿ.ವಿಸ್ಮಯಿ ಚಕ್ರವರ್ತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ದೀಪಕ್, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಸನತ್ ಕುಮಾರ್, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ಆನಂದ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ|| ಶ್ರೀನಿವಾಸ್ ಹಸಿರು ನಿಶಾನೆ ಮುಖಾಂತರ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಅರುಣ್ ಕುಮಾರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಾಂತಿ, ಜಿಲ್ಲಾ ಮೇಲ್ವಿಚಾರಕಿ ಸುನೀತ ಮುತ್ತಣ್ಣ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಉಷಾ, ಕಮಲ ಮತ್ತು ಐಸಿಟಿಸಿ, ಎ.ಆರ್.ಟಿ. ಚೈತನ್ಯ ಆರೈಕೆ ಮತ್ತು ಬೆಂಬಲ ಕೇಂದ್ರ ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬೈಕ್ ರ್‍ಯಾಲಿಯು ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಿಂದ ಹೊರಟು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿ ತಲುಪಿತು.

ನಗರಸಭೆ ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಅಧಿಕಾರಿಗಳಿಂದ ಕಡತಗಳ ಪರಿಶೀಲನೆ



ಚಾಮರಾಜನಗರ ನಗರಸಭೆ ಕಚೇರಿಗೆ ಲೋಕಾಯುಕ್ತ ಅಧಿಕಾರಿಗಳು ಭೇಟಿ ನೀಡಿ ಕಡತಗಳ ಪರಿಶೀಲನೆ ನಡೆಸಿದರು.

ಚಾಮರಾಜನಗರ, ಸೆ.11– ಚಾಮರಾಜನಗರ ನಗರಸಭೆ ಕಚೇರಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಆಸ್ತಿಗಳಿಗೆ ಇ–ಸ್ವತ್ತು ಪಡೆಯಲು ಹಾಗೂ ಖಾತೆ ಮಾಡಿಕೊಡಲು ವಿಳಂಬ ಮಾಡಲಾಗುತ್ತಿದೆ. ಮಧ್ಯವರ್ತಿಗಳಿಲ್ಲದೆ ಯಾವುದೇ ಕೆಲಸ ನಡೆಯುತ್ತಿಲ್ಲ ಎಂದು ಸಾರ್ವಜನಿಕರು ದೂರು ನೀಡಿದ್ದ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಗುರುವಾರ ದಿಢೀರ್ ದಾಳಿ ಮಾಡಿ ದಾಖಲೆ ಪರಿಶೀಲಿಸಿದರು.

ಚಾಮರಾಜನಗರ ನಗರಸಭೆ ಕಚೇರಿಗೆ ಲೋಕಾಯುಕ್ತ ಡಿವೈಎಸ್ಪಿ ಗಜೇಂದ್ರ ಪ್ರಸಾದ್ ನೇತೃತ್ವದ 15 ಅಧಿಕಾರಿಗಳ ತಂಡ ಗುರುವಾರ ಬೆಳಗ್ಗೆ ದಾಳಿ ನಡೆಸಿ ಕಡತಗಳನ್ನು ಪರಿಶೀಲಿಸಿದರು. ಈ ಹಿಂದೆ ಪೌರಾಯುಕ್ತರಾಗಿದ್ದ ಎಸ್.ವಿ.ರಾಮದಾಸ್ ಅವರ ಅವಧಿಯಲ್ಲಿ ಚಾಮರಾಜನಗರ ನಗರಸಭೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ.ನಗರಸಭೆ ಸಾಮಾನ್ಯ ಸಭೆಯ ಕಲಾಪದಲ್ಲಾದ ನಡಾವಳಿಗಳನ್ನೇ ಪೌರಾಯುಕ್ತ ರಾಮದಾಸ್ ತಿದ್ದಿದ್ದಾರೆ. ನಗರೋತ್ಥಾನ ಕಾಮಗಾರಿಗಳಲ್ಲಿ ತೀವ್ರ ವಿಳಂಬ ಮಾಡಲಾಗಿದೆ ಫಲಾನುಭವಿಗಳಿಗೆ ವಿತರಿಸಬೇಕಾದ ಲ್ಯಾಪ್ ಟಾಪ್ ಮತ್ತಿತರ ಉಪಕರಣಗಳನ್ನು ವಿತರಿಸದೇ ವ್ಯರ್ಥ ಮಾಡಲಾಗಿದೆ ಎಂಬ ಅನೇಕ ದೂರುಗಳ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ರಾಮದಾಸ್ ಅವರನ್ನು ಅವರ ಮಾತೃ ಇಲಾಖೆಯಾದ ತೋಟಗಾರಿಕಾ ಇಲಾಖೆ ಸಹಾಯಕ ತೋಟಗಾರಿಕೆ ಅಧಿಕಾರಿ ಹುದ್ದೆಗೆ ಬಿಡುಗಡೆ ಮಾಡಿದ್ದರು. ಈ ಆದೇಶಕ್ಕೆ ಕೆಎಟಿಯಿಂದ ರಾಮದಾಸ್ ತಡೆಯಾಜ್ಞೆ ತಂದಿದ್ದಾರೆ.

ರಾಮದಾಸ್ ಅವರ ಅವಧಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂಬ ದೂರಿನ ಹಿನ್ನೆಲೆ ಮೈಸೂರು ಹಾಗೂ ಚಾಮರಾಜನಗರ ಲೋಕಾಯುಕ್ತ ಅಧಿಕಾರಿಗಳ ಐದು ತಂಡಗಳು ಗುರುವಾರ ಬೆಳಿಗ್ಗೆ ದಿಢೀರನೇ ದಾಳಿ ನಡೆಸಿದರು. ನಗರಸಭೆ ಪೌರಾಯುಕ್ತರ ಕಚೇರಿ, ಆರೋಗ್ಯ, ಕಂದಾಯ, ತಾಂತ್ರಿಕ ಶಾಖೆಗಳಿಗೆ ತೆರಳಿ ಅಲ್ಲಿನ ಕಡತಗಳನ್ನು ರಾತ್ರಿಯವರೆಗೂ ಪರಿಶೀಲನೆ ನಡೆಸಿದರು.

ದಾಳಿ ನಡೆದ ವೇಳೆಯಲ್ಲಿ ಪ್ರಭಾರ ಪೌರಾಯುಕ್ತೆ ರೂಪಾ, ಹಿರಿಯ ಆರೋಗ್ಯಾಧಿಕಾರಿ ಸುಷ್ಮಾ, ಕಂದಾಯಾಧಿಕಾರಿ ಪುಷ್ಪಾ, ಆಯಾ ಶಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದು ಲೋಕಾಯುಕ್ತ ಪೊಲೀಸರು ಕೇಳಿದ ಕಡತಗಳನ್ನು ನೀಡಿದರು.

ಕಡತಗಳ ಸಂಬಂಧಪಟ್ಟ ಮಾಹಿತಿಯನ್ನು ಲೋಕಾಯುಕ್ತ ಅಧಿಕಾರಿಗಳಿಗೆ ನಗರಸಭೆ ಸಿಬ್ಬಂದಿ ನೀಡಿದರು. ಕಂದಾಯ ಶಾಖೆಯಲ್ಲಿ ಹೆಚ್ಚು ಕಡತಗಳು ಇವೆಯೆಲ್ಲ. ಕಾಲ ಕಾಲಕ್ಕೆ ವಿಲೇವಾರಿ ನಡೆಯುತ್ತಿಲ್ಲವೇ? ಅಧಿಕಾರಿಗಳು ಮತ್ತು ಸಿಬ್ಬಂದಿ ಏನು ಮಾಡುತ್ತಿದ್ದಾರೆ? ಎಂದು ಲೋಕಾಯುಕ್ತ ಡಿವೈಎಸ್ಪಿ ಅಧಿಕಾರಿಗಳನ್ನು ಪ್ರಶ್ನಿಸಿದರು. ಅಧಿಕಾರಿಗಳು ಸಮಜಾಯಿಷಿ ನೀಡಲು ಪರದಾಡಿದರು. ಲೋಕಾಯುಕ್ತ ಪ್ರಭಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುರೇಶ್‌ಬಾಬು ಸಹ ಸಂಜೆ ನಗರಸಭೆಯ ಕಾರ್ಯಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ದಾಳಿಯಲ್ಲಿ ಲೋಕಾಯುಕ್ತ ಇನ್ಸ್‌ಪೆಕ್ಟರ್ ಲೋಹಿತ್‌ಕುಮಾರ್, ಗಿರೀಶ್, ರವಿಕುಮಾರ್, ಶಶಿಕುಮಾರ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಅರಣ್ಯಾಧಿಕಾರಿಗಳಿಂದ ತೊಂದರೆಗೊಳಗಾದ ಮಹಿಳೆಯಿಂದ ದೂರು ಸ್ವೀಕರಿಸದ ಪೊಲೀಸರು

ಗುಂಡ್ಲುಪೇಟೆ ಠಾಣೆ ಮುಂದೆ ಬೊಮ್ಮಲಾಪುರ ಗ್ರಾಮಸ್ಥರು ಆಕ್ರೋಶ



ಗುಂಡ್ಲುಪೇಟೆ ಪೊಲೀಸರು ಮಹಿಳೆಯ ದೂರನ್ನು ಸ್ವೀಕರಿಸದ ಬಗ್ಗೆ ಗ್ರಾಮಸ್ಥರು ಹಾಗೂ ಮುಖಂಡರು ಠಾಣೆ ಎದುರು ಜಮಾಯಿಸಿದ್ದರು.

ಗುಂಡ್ಲುಪೇಟೆ, ಸೆ11– ಅರಣ್ಯ ಸಿಬ್ಬಂದಿ ನೀಡಿದ ದೂರು ಸ್ವೀಕರಿಸಿ ರೈತರ ವಿರುದ್ಧ ಪ್ರಕರಣ ದಾಖಲಿಸುವ ಪೊಲೀಸರು, ಅರಣ್ಯಾಧಿಕಾರಿಗಳಿಂದ ತೊಂದರೆ ಎದುರಿಸುತ್ತಿರುವ ಮಹಿಳೆ ನೀಡಿದ ದೂರು ಸ್ವೀಕರಿಸದೆ ಸಂತ್ರಸ್ತೆಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಪಟ್ಟಣದ ಪೊಲೀಸ್ ಠಾಣೆ ಎದುರು ಬೊಮ್ಮಲಾಪುರ ಗ್ರಾಮಸ್ಥರು ಹಾಗೂ ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಖಂಡರಾದ ಅಭಿಷೇಕ್ ಗುಡಿಮನೆ ಮಾತನಾಡಿ, ಮಂಗಳವಾರ ತಾಲೂಕಿನ ಬೊಮ್ಮಲಾಪುರದಲ್ಲಿ ಅರಣ್ಯ ಸಿಬ್ಬಂದಿಗಳ ಮೇಲೆ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ರೈತರ ವಿರುದ್ದ ಪಿತೂರಿ ನಡೆಸಿ ಸಂಜೆ ಐವರ ವಿರುದ್ದ ದೂರು ನೀಡಿದ ಕೂಡಲೇ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ, ಆದರೆ ಘಟನೆಯಲ್ಲಿ ಸಂತ್ರಸ್ತ ಮಹಿಳೆ ತನ್ನ ಮೇಲೆ ಅರಣ್ಯಾಧಿಕಾರಿಗಳು ನಡೆಸಿದ ದೌರ್ಜನ್ಯದ ವಿರುದ್ದ ಬುಧವಾರವೇ ದೂರು ನೀಡಿದರೂ ಅದನ್ನು ಸ್ವೀಕರಿಸುತ್ತಿಲ್ಲ. ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದ ಅರಣ್ಯ ಇಲಾಖೆಯ ನೌಕರರು ಹಾಗೂ ಅಧಿಕಾರಿಗಳನ್ನು ರಕ್ಷಿಸಲು ಮುಂದಾಗಿರುವ ಪೊಲೀಸರು ಅಮಾಯಕ ರೈತರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ. ಈ ಬಗ್ಗೆ ನ್ಯಾಯಾಲಯದ ಮೂಲಕ ಪ್ರಕರಣ ದಾಖಲಿಸಲಾಗುವುದು ಎಂದು ಹೇಳಿದರು.

ಹಸಿರು ಸೇನೆ ಹಾಗೂ ರೈತ ಸಂಘದ ಜಿಲ್ಲಾಧ್ಯಕ್ಷ ಮಾಡ್ರಹಳ್ಳಿ ಮಹದೇವಪ್ಪ ಮಾತನಾಡಿ, ಅರಣ್ಯ ಇಲಾಖೆ ರೈತ ಹಾಗೂ ಜನವಿರೋಧಿ ನೀತಿ ಅನುಸರಿಸುತ್ತಿದ್ದು ಅವರ ಜತೆ ಪೊಲೀಸರು ಕೈಜೋಡಿಸಿದ್ದಾರೆ. ಇದರ ವಿರುದ್ದ ಉಗ್ರಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅರಿಶಿಣ ಬೆಳೆಗಾರರ ಒಕ್ಕೂಟದ ಸಂಚಾಲಕ ಎಸ್.ಎಂ.ನಾಗಾರ್ಜುನ ಕುಮಾರ್ ಮಾತನಾಡಿ, 1997ರ ಸಿಆರ್‌ಪಿಸಿ ಕಾಯ್ದೆಯು ಠಾಣಾಧಿಕಾರಿ ಯಾವುದೇ ಸರ್ಕಾರಿ ಅಧಿಕಾರಿಯಿಂದ ಸಂತ್ರಸ್ತಳಾದ ಮಹಿಳೆಯು ನೀಡುವ ದೂರು ಸ್ವೀಕರಿಸಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದರೂ ಪೊಲೀಸರು ಎರಡು ದಿನಗಳ ಕಾಲ ಕಾಯಿಸಿ ಈಗ ದೂರುತೆಗೆದುಕೊಳ್ಳುವುದಿಲ್ಲ ಎಂದು ನಿರಾಕರಿಸುವ ಮೂಲಕ ಕಾನೂನಿಗೆ ವಿರುದ್ದವಾಗಿ ನಡೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಮಹಿಳಾ ಆಯೋಗವು ಮಧ್ಯ ಪ್ರವೇಶಿಸಿ ಸಂತ್ರಸ್ತ ಮಹಿಳೆಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಸಂಪತ್ತು ಜಗದೀಶ್, ಮಹದೇವಪ್ಪ, ಶಿವಪ್ರಸಾದ್, ವಿಶ್ವಾಸ್, ನಾಗಪ್ಪ, ರಾಜಪ್ಪ, ಬಸವೇಶ್, ಯೋಗೇಶ್, ಸುರೇಶ್ ಇತರರಿದ್ದರು.

ಬಾಲ್ಯ ವಿವಾಹ ಮಾಡಿದ ಮೂವರಿಗೆ ಜೈಲು ಶಿಕ್ಷೆ

ಚಾಮರಾಜನಗರ: ಮಕ್ಕಳ ಸಹಾಯವಾಣಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ತಿಳುವಳಿಕೆ ನೀಡಿದರೂ ಅದನ್ನು ಲೆಕ್ಕಿಸದೇ ಬಾಲ್ಯ ವಿವಾಹ ಮಾಡಿದ ಮೂವರಿಗೆ ನಗರದ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ 6 ತಿಂಗಳ ಜೈಲು ಶಿಕ್ಷೆ ವಿಧಿಸಿದೆ.

ಚಾಮರಾಜನಗರ ತಾಲೂಕಿನ ಅಶೋಕ, ನಿಂಗರಾಜು, ಸಿದ್ದಶೆಟ್ಟಿ ಎಂಬುವರಿಗೆ 6 ತಿಂಗಳ ಕಾರಾಗೃಹ ವಾಸದ ಕಠಿಣ ಶಿಕ್ಷೆ ಮತ್ತು ತಲಾ 10 ಸಾವಿರ ರೂ. ದಂಡ ವಿಧಿಸಲಾಗಿದೆ. ಸಿದ್ದಮ್ಮ ಮತ್ತು ಗೌರಮ್ಮ ಎಂಬುವರಿಗೆ ತಲಾ 10 ಸಾವಿರ ರೂ. ದಂಡ ಮಾತ್ರ ವಿಧಿಸಲಾಗಿದೆ.

ತಾಲೂಕಿನ ಗ್ರಾಮವೊಂದರ ಅಪ್ರಾಪ್ತೆಯನ್ನು 2016ರ ಮೇ 26ರಂದು ಬಾಲ್ಯ ವಿವಾಹ ಮಾಡಿಕೊಡಲಾಗುತ್ತಿತ್ತು. ವಿಷಯ ತಿಳಿದು ಪಿಡಿಓ ಬಿ.ಎಂ.ಮಹದೇವಪ್ಪ, ಮಕ್ಕಳ ಸಹಾಯವಾಣಿಯ ಅಧಿಕಾರಿಗಳಾದ ಅರುಣ್ ರೇ, ಚಂದ್ರಮೋಹನ್, ಪ್ರದೀಪ್ ಸ್ಥಳಕ್ಕೆ ತೆರಳಿ ಆರೋಪಿಗಳಿಗೆ ತಿಳುವಳಿಕೆ ನೀಡಿದರೂ ಲೆಕ್ಕಿಸದೇ ಬಾಲ್ಯ ವಿವಾಹ ಮಾಡಿಕೊಡಲಾಗಿತ್ತು. ಈ ಹಿನ್ನೆಲೆಯಲ್ಲಿ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿ ಆರೋಪ ಪಟ್ಟಿ ಸಲ್ಲಿಸಲಾಗಿತ್ತು. ಸರ್ಕಾರಿ ಅಭಿಯೋಜಕ ರಾಜಶೇಖರಮೂರ್ತಿ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದರು.

ಶಿವಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ 15 ಕೋಟಿ ರೂ. ವೆಚ್ಚದಲ್ಲಿ ಮೂಲಸೌಕರ್ಯ



ಚಾಮರಾಜನಗರ ತಾಲೂಕಿನ ಶಿವಪುರ ಗ್ರಾಮದಲ್ಲಿ 15ನೇ ಹಣಕಾಸು ಯೋಜನೆಯ ವೆಚ್ಚದಲ್ಲಿ ನಿರ್ಮಿಸಿರುವ ಹೆಚ್ಚುವರಿ ಕೊಠಡಿಯನ್ನು ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಚಾಮರಾಜನಗರ, ಸೆ.11– ಚಾಮರಾಜನಗರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಗೆ ಬರುವ ಶಿವಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಸುಮಾರು 15 ಕೋಟಿ ರೂ. ವೆಚ್ಚದಲ್ಲಿ ಮೂಲ ಸೌಲಭ್ಯ ಕಲ್ಪಿಸಲಾಗಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲ್ಲೂಕಿನ ಶಿವಪುರ ಗ್ರಾಮದಲ್ಲಿ 15ನೇ ಹಣಕಾಸು ಯೋಜನೆಯಡಿ 18 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಹೆಚ್ಚುವರಿ ಕೊಠಡಿ ಉದ್ಘಾಟಿಸಿ ಮಾತನಾಡಿದರು.

ಗ್ರಾಪಂಗಳಿಗೆ ಸರ್ಕಾರದ ಹಲವು ಸವಲತ್ತುಗಳನ್ನು ತಲುಪಿಸುವ ಅವಕಾಶವಿದೆ. ಗ್ರಾಮಸಭೆಗಳನ್ನು ನಡೆಸಿ ಅರ್ಹರನ್ನು ಆಯ್ಕೆ ಮಾಡಿ ಸವಲತ್ತುಗಳನ್ನು ತಲುಪಿಸುವ ಜವಾಬ್ದಾರಿ ಸದಸ್ಯರು ಹಾಗೂ ಅಧಿಕಾರಿಗಳ ಮೇಲಿದೆ. ಶಿವಪುರ ಗ್ರಾಪಂ ವ್ಯಾಪ್ತಿಯ ಸದಸ್ಯರು ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದಾರೆ. ಆ ಕಾರಣದಿಂದಲೇ ಹೆಚ್ಚುವರಿ ಕೊಠಡಿ ನಿರ್ಮಾಣ ಸಾಧ್ಯವಾಗಿದೆ. ಎಲ್ಲ ಪಂಚಾಯತಿಗಳಲ್ಲಿಯೂ ಇಂತಹ ಕಾರ್ಯಗಳು ನಡೆಯಬೇಕು ಎಂದು ಅಭಿಪ್ರಾಯಪಟ್ಟರು.

ಚಾಮರಾಜನಗರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳಲ್ಲಿ ರಸ್ತೆ, ಚರಂಡಿ ನಿರ್ಮಾಣ, ಗಂಗಾ ಕಲ್ಯಾಣ ಯೋಜನೆಯಡಿ ಸವಲತ್ತು ಕೊಡಿಸಿದ್ದೇನೆ. ಕ್ಷೇತ್ರದ ಎಲ್ಲ ವರ್ಗಗಳ ಜನರಿಗೂ ಅನುಕೂಲ ಆಗುವಂತಹ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ಎಂ.ಸಿ.ಮಹದೇವಮ್ಮ, ಉಪಾಧ್ಯಕ್ಷೆ ಇಂದಿರಮ್ಮ, ಸದಸ್ಯರಾದ ಪ್ರಮೋದ್, ಶಿವಕುಮಾರ್, ಸರಸ್ವತಿ, ಜಯಮ್ಮ, ಕುಮಾರಸ್ವಾಮಿ, ಜಯಲಕ್ಷ್ಮಿ, ಎಂ.ಮಹದೇವಸ್ವಾಮಿ, ಎನ್.ಮಹೇಶ್, ನಾಗಮಣಿ, ವಿಶಾಲಾಕ್ಷಿ, ಕೆ.ತುಂಗಾ, ಶಕುಂತಲಾ, ಪಿ.ರಂಗಸ್ವಾಮಿ, ಎಂ.ಶಿವಣ್ಣ, ಎಂ.ಸಿ, ಮಹದೇವಮ್ಮ, ಶಿವಕುಮಾರ್, ಶೋಭಾರಾಣಿ, ಗುತ್ತಿಗೆದಾರ ಸುಬ್ಬೇಗೌಡ, ತಾಪಂ ಇಒ ಎಂ.ಎನ್. ಗಿರಿಧರ್, ಪಿಡಿಒ ರವಿ, ಕಾರ್ಯದರ್ಶಿ ಮಂಜುನಾಥ್, ಗ್ರಾಮದ ಮುಖಂಡರು ಗ್ರಾಮಸ್ಥರು ಹಾಜರಿದ್ದರು.

ಚಾ.ನಗರ ಪ್ರಾದೇಶಿಕ ರೇಷ್ಮೆ ಸಂಶೋಧನಾ ಕೇಂದ್ರ ಮುಂದುವರೆಸಲು ಸಂಸದ ಸುನೀಲ್‌ಬೋಸ್ ಮನವಿಗೆ ಕೇಂದ್ರದಿಂದ ಸಕಾರಾತ್ಮಕ ಸ್ಪಂದನೆ



ಚಾಮರಾಜನಗರ, ಸೆ.11–ಚಾಮರಾಜನಗರದಲ್ಲಿರುವ ಪ್ರಾದೇಶಿಕ ರೇಷ್ಮೆ ಸಂಶೋಧನಾ ಕೇಂದ್ರವನ್ನು ಚಾಮರಾಜನಗರದಲ್ಲಿಯೇ ಮುಂದುವರೆಸಲು ಹಾಗೂ ಈ ಸಂಶೋಧನಾ ಸಂಸ್ಥೆಗೆ ಅಗತ್ಯ ಮಾನವ ಸಂಪನ್ಮೂಲ ಮತ್ತು ಅನುದಾನ ನೆರವು ಒದಗಿಸುವ ಬಗ್ಗೆ ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಸಂಸದ ಸುನೀಲ್ ಬೋಸ್ ಮಾಡಿದ ಮನವಿ ಸ್ವೀಕರಿಸಿರುವ ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಬೋಸ್‌ಗೆ ಪತ್ರ ಬರೆಯುವ ಮೂಲಕ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಚಾಮರಾಜನಗರದಲ್ಲಿರುವ ರೇಷ್ಮೆ ಪ್ರಾದೇಶಿಕ ಸಂಶೋಧನಾ ಕೇಂದ್ರವನ್ನು ಚಾಮರಾಜನಗರದಲ್ಲಿಯೇ ಮುಂದುವರೆಸಲು ಮತ್ತು ರೇಷ್ಮೆ ಕ್ಷೇತ್ರ ಹಾಗೂ ಗ್ರಾಮೀಣ ಭಾಗದ ಆರ್ಥಿಕತೆ ಹಿತಾಸಕ್ತಿಯಿಂದ ರೇಷ್ಮೆ ಸಂಶೋಧನಾ ಸಂಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಅಗತ್ಯವಿರುವ ಮಾನವ ಸಂಪನ್ಮೂಲ ಹಾಗೂ ಹಣಕಾಸು ನೆರವು ಕೋರಿ ಕಳೆದ ಜುಲೈ 24ರಂದು ತಾವು ಕಳುಹಿಸಿರುವ ಪತ್ರವನ್ನು ಸ್ವೀಕರಿಸಲಾಗಿದೆ.

ತಮ್ಮ ಮನವಿ ಕುರಿತು ಅಗತ್ಯ ಕ್ರಮ ವಹಿಸಲು ಸಂಬಂಧಿಸಿದ ವಿಭಾಗಕ್ಕೆ ತಮ್ಮ ಪತ್ರವನ್ನು ಕಳುಹಿಸಲಾಗಿದೆ ಎಂದು ಕೇಂದ್ರ ಜವಳಿ ಸಚಿವರು ಸುನೀಲ್ ಬೋಸ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಜಿಲ್ಲಾ ದಸರಾ ಕ್ರೀಡಾಕೂಟದ ಕಬ್ಬಡಿಯಲ್ಲಿ ಕೆಸ್ತೂರು ತಂಡ ಪ್ರಥಮ



ಯಳಂದೂರು ತಾಲೂಕಿನ ಕೆಸ್ತೂರು ಗ್ರಾಮದ ಕಬ್ಬಡಿ ತಂಡವು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದ ನಿಮಿತ್ತ ಗ್ರಾಮದ ಸಿದ್ದಸ್ವಾಮಿ, ಸಿದ್ದಶೆಟ್ಟಿ ಆಟಗಾರರನ್ನು ಅಭಿನಂದಿಸಿದರು.

■ ಸತ್ಯಮೂರ್ತಿ ತೋಳಹುಣಸೆ

ಐವರು ನಿರ್ದೇಶಕರಿಂದ ದೈವ ಟೀಸರ್!



ಇತ್ತೀಚೆಗೆ ಡಾಕ್ಟರ್, ಎಂಜಿನಿಯರ್ ಸೇರಿದಂತೆ ವಿದ್ಯಾವಂತರು ಚಿತ್ರರಂಗಕ್ಕೆ ಬರುತ್ತಿದ್ದಾರೆ. ಅವರಲ್ಲಿ ಎಂಜೆ(ಮಂಜುನಾಥ್ ಜಯರಾಜ್) ಹೊಸ ಸೇರ್ಪಡೆ. ಅವರು ಮೊದಲ ಬಾರಿಗೆ ನಿರ್ದೇಶನದ ಜೊತೆಗೆ ನಾಯಕನಾಗೂ ನಟಿಸಿರುವ ಚಿತ್ರ ದೈವ. ಇತ್ತೀಚೆಗೆ ಈ ಚಿತ್ರದ ಟೀಸರ್ ಅನ್ನು ಕನ್ನಡದ ಐವರು ಹಿರಿಯ ನಿರ್ದೇಶಕರು ಬಿಡುಗಡೆ ಮಾಡಿದರು. ಗುರು ದೇಶಪಾಂಡೆ, ಹರಿ ಸಂತೋಷ್, ಭರ್ಜರಿ ಚೇತನ್, ಜಡೇಶ್ ಹಂಪಿ ಹಾಗೂ ಎನ್.ಆರ್.ಕೆ.ವಿಶ್ವನಾಥ್ ಸೇರಿ ದೈವ ಚಿತ್ರದ ಟೀಸರ್‌ಗೆ ಚಾಲನೆ ನೀಡಿದರು. ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿರುವ ಮಂಜುನಾಥ್ ಜಯರಾಜ್ ಅವರ ಅಭಿನಯ ಹಾಗೂ ನಿರ್ದೇಶನವಿರುವ ದೈವ ಚಿತ್ರದ ಟೀಸರ್ ಶಿಕ್ಷಕರ ದಿನದಂದೇ ಬಿಡುಗಡೆಯಾಗಿದ್ದು ವಿಶೇಷವಾಗಿತ್ತು.

ವೇದಿಕೆಯಲ್ಲಿ ಚಿತ್ರದ ಕುರಿತಂತೆ ಮಾತನಾಡಿದ ಎಂಜೆ, ಪಕ್ಕಾ ದೇಸೀ ಕಥೆಯನ್ನು ದೈವ ಚಿತ್ರದಲ್ಲಿ ಹೇಳಿದ್ದೇವೆ. ಕಾಲಭೈರವನ ಆರಾಧಕ ಹಾಗೂ ಜೋಗಯ್ಯನಾಗಿ ಎರಡು ಗೆಟಪ್‌ಗಳಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ದೈವ ಎಂದ ಕೂಡಲೇ ಇದು ಪೌರಾಣಿಕ ಚಿತ್ರವಲ್ಲ, ಎಲ್ಲಾ ರೀತಿಯ ಮನರಂಜನೆಯಿರುವ ಪಕ್ಕಾ ಕಮರ್ಷಿಯಲ್ ಸಿನಿಮಾ. ಈಗಾಗಲೇ ಚಿತ್ರದ ಚಿತ್ರೀಕರಣ ಮುಗಿದಿದ್ದು, ಸದ್ಯ ರೀ ರೆಕಾರ್ಡಿಂಗ್ ಕೆಲಸ ನಡೆಯುತ್ತಿದೆ. ನಮ್ಮ ತಾಯಿ ಜಯಮ್ಮ ಪದ್ಮರಾಜ್ ಅವರು ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಸುರಭಿ, ನೀತುರಾಯ್, ಬಲರಾಜವಾಡಿ, ಮಂಜುರಾಜ್ ಸೂರ್ಯ, ಅರುಣ್ ಬಚ್ಚನ್ ಪ್ರಮುಖ ತಾರಾಗಣದಲ್ಲಿದ್ದು, ಶಿಕ್ಷಕರ ದಿನವೇ ಸರಸ್ವತಿ ಪುತ್ರರು ಹಾಗೂ ಗುರು ಸಮಾನರಾದ ಐವರು ನಿರ್ದೇಶಕರುಗಳು ನಮ್ಮ ಚಿತ್ರದ ಟೀಸರ್ ರಿಲೀಸ್ ಮಾಡಿದ್ದಾರೆ ಎಂದರು.

ಮತ್ತೊಬ್ಬ ನಾಯಕನಾಗಿ ನಟಿಸಿರುವ ಪತ್ರಕರ್ತ, ನಟ ಮಂಜುರಾಜ್ ಸೂರ್ಯ(ವಿ.ಸಿ.ಎನ್.ಮಂಜು) ಮಾತನಾಡುತ್ತಾ, ಹಳ್ಳಿಯ ಮಕ್ಕಳ ವಿದ್ಯಾಭ್ಯಾಸಕ್ಕೆ ಎನ್‌ಜಿಓ ಮೂಲಕ ಸಹಾಯ ಮಾಡುವಂತಹ ಪಾತ್ರ ನನ್ನದು. ಹೊಸಬರಾದರೂ ಚಿತ್ರದ ಕ್ವಾಲಿಟಿಯನ್ನು ಕಮ್ಮಿ ಮಾಡಿಲ್ಲ. ಇಂತಹವರಿಗೆ ನಿಮ್ಮ ಬೆಂಬಲ ಬೇಕು ಎಂದರು.

ನಿರ್ಮಾಪಕಿ ಜಯಮ್ಮ ಪದ್ಮರಾಜ್ ಮಾತನಾಡುತ್ತಾ, ನನ್ನ ಮಗ ನಾಯಕ ಹಾಗೂ ನಿರ್ದೇಶಕನಾಗಿ ಚಿತ್ರರಂಗಕ್ಕೆ ಬರುತ್ತಿದ್ದಾನೆ. ಆತನಿಗೆ ನೀವೆಲ್ಲರೂ ಸಪೋರ್ಟ್ ಮಾಡಿ ಎಂದು ಕೇಳಿಕೊಂಡರು. ಚಿತ್ರದ ನಾಯಕಿ ನೀತುರಾಯ್, ಅರುಣ್ ಬಚ್ಚನ್, ಮೀಸೆಮೂರ್ತಿ, ಸಂಗೀತ ನಿರ್ದೇಶಕ ವಿಜೇತ್ ಮಂಜಯ್ಯ ಹಾಗೂ ಛಾಯಾಗ್ರಾಹಕ ಸಿದ್ಧಾರ್ಥ್ ದೈವ ಚಿತ್ರದ ಕುರಿತಂತೆ ಮಾತನಾಡಿದರು.



ಡಾರ್ಕ್ ಹ್ಯೂಮರ್ ಟೈಮ್‌ಪಾಸ್ ಟೀಸರ್

ಚೇತನ್ ಜೋಡಿದಾರ್ ಅವರ ನಿರ್ದೇಶನದ ಟೈಮ್‌ಪಾಸ್ ಚಿತ್ರವು ತನ್ನ ಫಸ್ಟ್‌ಲುಕ್ ಪೋಸ್ಟರ್ ಮೂಲಕವೇ ಒಂದಷ್ಟು ಚರ್ಚೆಗೆ ಗ್ರಾಸವಾಗಿತ್ತು. ಇತ್ತೀಚೆಗಷ್ಟೇ ಡಾರ್ಕ್‌ಹ್ಯೂಮರ್ ಜಾನರ್‌ನಲ್ಲಿ ಮೂಡಿಬಂದಿರುವ ಈ ಚಿತ್ರದ ಟೀಸರ್ ಕೂಡ ಬಿಡುಗಡೆಯಾಗಿದೆ. ಅದೂ ಸಹ ಪ್ರೇಕ್ಷಕರ ವಲಯದಲ್ಲಿ ಕುತೂಹಲ ಮೂಡಿಸಿದೆ. ಹೀಗೆ ಟೀಸರ್ ಸುತ್ತ ಪ್ರೇಕ್ಷಕರು ಗಮನ ನೆಟ್ಟಿರುವಾಗಲೇ ಟೈಮ್‌ಪಾಸ್ ಚಿತ್ರತಂಡ ಬಿಡುಗಡೆ ದಿನಾಂಕವನ್ನು ಘೋಷಿಸಿದೆ. ಅ.17ಕ್ಕೆ ಟೈಮ್‌ಪಾಸ್ ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಸಂಪೂರ್ಣ ಹಾಸ್ಯಪ್ರಧಾನ ಕಥಾಹಂದರ ಹೊಂದಿರುವ ಈ ಚಿತ್ರದ ಟೀಸರ್‌ನಲ್ಲಿ ಈಗಿನ ಸಮಾಜಕ್ಕೆ ಕನ್ನಡಿ ಹಿಡಿದಂತಿರುವ ಕಥೆಯೊಂದರ ಸುಳಿವು ಗೋಚರವಾಗುತ್ತವೆ. ಮನರಂಜನೆಯನ್ನೇ ಕೇಂದ್ರವಾಗಿಸಿಕೊಂಡು ಈ ಸಿನಿಮಾವನ್ನು ರೂಪಿಸಿರೋದಾಗಿ ನಿರ್ದೇಶಕರು ಈ ಹಿಂದೆ ಹೇಳಿಕೊಂಡಿದ್ದರು.

ಟೀಸರ್ ಬಗ್ಗೆ ಚರ್ಚೆ ಚಾಲ್ತಿಯಲ್ಲಿರುವಾಗಲೇ ಮತ್ತೊಂದು ಖುಷಿಯ ಸಂಗತಿಯನ್ನು ಚಿತ್ರತಂಡ ಹಂಚಿಕೊಂಡಿದೆ. ಅದು ಆಡಿಯೋ ಹಕ್ಕುಗಳ ಬಗ್ಗೆ, ಪ್ರತಿಷ್ಠಿತ ಆಡಿಯೋ ಸಂಸ್ಥೆ ಸರೆಗಮ ಕನ್ನಡ ಟೈಮ್‌ಪಾಸ್ ಚಿತ್ರದ ಆಡಿಯೋ ಹಕ್ಕುಗಳನ್ನು ಪಡೆದುಕೊಂಡಿದೆ ಅದರ ಯೂಟ್ಯೂಬ್ ಚಾನೆಲ್‌ನಲ್ಲಿ ಟೈಮ್‌ಪಾಸ್ ಹಾಡುಗಳು ರಿಲೀಸಾಗಿವೆ.



ಡಾರ್ಕ್ ಹ್ಯೂಮರ್ ಜಾನರ್‌ನ ಈ ಚಿತ್ರವನ್ನು ಚೇತನ ಸರ್ವಿಸಸ್ ಬ್ಯಾನರ್ ಮೂಲಕ ಗುಂಡೂರು ಶೇಖರ್, ಕಿರಣ್‌ಕುಮಾರ್ ಶೆಟ್ಟಿ, ಎಂ.ಹೆಚ್.ಕೃಷ್ಣಮೂರ್ತಿ ಅವರು ನಿರ್ಮಾಣ ಮಾಡಿದ್ದಾರೆ. ಇಮ್ರಾನ್ ಪಾಷಾ, ವೈಸಿರಿ ಕೆ.ಗೌಡ, ರಕ್ಷಾರಾಮ್, ಚೇತನ್ ಜೋಡಿದಾರ್, ಪ್ರಭಾಕರ ರಾವ್, ನವೀನ್‌ಕುಮಾರ್, ಸಂಪತ್‌ಕುಮಾರ್, ಅಶ್ವಿನಿ ಶ್ರೀನಿವಾಸ್ ಮುಖ್ಯ ಪಾತ್ರಗಳಲ್ಲಿದ್ದಾರೆ. ಗಿರೀಶ್‌ಗೌಡ ಅವರ ಸಾಹಸ ನಿರ್ದೇಶನ, ವೈಷ್ಣವಿ ಸತ್ಯನಾರಾಯಣ್ ಅವರ ನೃತ್ಯ ನಿರ್ದೇಶನ, ರಾಜೀವ್‌ಗಣೇಶ್ ಅವರ ಛಾಯಾಗ್ರಹಣ, ಹರಿ ಪರಮ್ ಅವರ ಸಂಕಲನ, ಡಿ.ಎಂ.ಉದಯಕುಮಾರ್ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಚಾಮಯ್ಯ ಸನ್ ಆಫ್ ರಾಮಾಚಾರಿ

ಕೋಟೆನಾಡಿನ ನಾಗರಹಾವು...

ಚಾಮಯ್ಯ ಸನ್ ಆಫ್ ರಾಮಾಚಾರಿ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಪಲ್ಲಕ್ಕಿ ರಾಧಾಕೃಷ್ಣ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನದ ಜತೆಗೆ ನಿರ್ಮಾಣದ ಜವಾಬ್ದಾರಿಯನ್ನೂ ನಿಭಾಯಿಸಿದ್ದಾರೆ. 'ಕೋಟೆನಾಡಿನ ನಾಗರಹಾವು' ಎಂಬ ಅಡಿಬರಹವಿರುವ ಈ ಚಿತ್ರದಲ್ಲಿ ಜೂನಿಯರ್ ವಿಷ್ಣುವರ್ಧನ್ ಎಂದೇ ಹೆಸರಾದ ಜಯಶ್ರೀರಾಜ್ ಅವರು ನಾಯಕನಾಗಿ ಕಾಣಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಪಲ್ಲಕ್ಕಿ ರಾಧಾಕೃಷ್ಣ, ಕೆಲ ಸನ್ನಿವೇಶಗಳಲ್ಲಿ ಚಿತ್ರದುರ್ಗದ ಕೋಟೆಯನ್ನು ಬಳಸಿದ ಹಿನ್ನೆಲೆಯಲ್ಲಿರುವ ಮಹಾನ್ ನಾಯಕರ ಕೋಟೆಗಳ ದೃಶ್ಯಗಳನ್ನು ಸೆರೆಹಿಡಿಯಲಾಗಿದೆ ಹಾಗೂ ಇವರೆಲ್ಲರ ಚರಿತ್ರೆಗಳು ಸಣ್ಣದಾಗಿ ಬಂದು ಹೋಗುತ್ತವೆ. ಬೆಂಗಳೂರು, ಬಾದಾಮಿ, ಬನಶಂಕರಿ, ಐಹೊಳೆಯಂಥ ಸುಂದರ ತಾಣಗಳಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಜಲೀಲ(ಅಂಬರೀಷ್)ನ ಮಗ ಕೊಲೆಯ ತನಿಖೆ ನಡೆಸುವ ಪೊಲೀಸ್ ಇನ್ಸ್‌ಪೆಕ್ಟರ್ ಚೋಟಾ ಜಲೀಲನ ಪಾತ್ರದಲ್ಲಿ ನಾನು ನಟಿಸಿದ್ದೇನೆ. ಡಾ.ವಿಷ್ಣುವರ್ಧನ್ ಅವರ ಹುಟ್ಟುಹಬ್ಬವಾದ ಸೆ.18ರಂದು ಚಿತ್ರವನ್ನು ತೆರೆಗೆ ತರುವ ಯೋಜನೆ ಇತ್ತು. ಆದರೆ ಈಗಾಗಲೇ 10ಕ್ಕೂ ಹೆಚ್ಚು ಸಿನಿಮಾಗಳು ಕ್ಯೂನಲ್ಲಿವೆ, ಹಾಗಾಗಿ ವಿಷ್ಣು ಅಭಿಮಾನಿಗಳಿಗಾಗಿ ಪ್ರತ್ಯೇಕ ಪ್ರದರ್ಶನವನ್ನು ಆಯೋಜಿಸಬೇಕೆಂಬ ಯೋಜನೆಯಿದೆ. ಮೈಸೂರು, ಚಿತ್ರದುರ್ಗ, ಶಿವಮೊಗ್ಗದಲ್ಲಿ ಹೆಚ್ಚು ಅಭಿಮಾನಿಗಳಿರುವುದರಿಂದ ಒಂದು ದಿನದ ಗಳಿಕೆಯ ಹಣವನ್ನು ಅಭಿಮಾನಿ ಸಂಘದ ಸಮಾಜಮುಖಿ ಕಾರ್ಯಗಳಿಗೆ ನೀಡಲಾಗುವುದು ಎಂದು ಹೇಳಿದರು.

ಇಲ್ಲಿ ರಾಮಾಚಾರಿಯ ಮಗನೇ ಚಾಮಯ್ಯ. ರಾಮಾಚಾರಿಯ ಪತ್ನಿ, ಚಾಮಯ್ಯನ ತಾಯಿಯಾಗಿ ನಟಿ ಪ್ರೇಮಾಗೌಡ ಅವರು ನಟಿಸಿದ್ದಾರೆ. ಚಾಮಯ್ಯನಾಗಿ ಪ್ರದೀಪ್ ಶಾಸ್ತ್ರೀ, ಮಗಳಾಗಿ ಚೈತ್ರಾ, ಮುಂದುವರಿದ ಪ್ರಿನ್ಸಿಪಾಲ್ (ಲೋಕನಾಥ್) ಆಗಿ ಪ್ರಕಾಶ್ ಅರಸು. ಉಳಿದಂತೆ ಸೀನೂ ಮಾರ್ಕಳಿ, ವರಪ್ರಸಾದ ಶರ್ಮ, ವಿನುತ, ರಾಘವೇಂದ್ರ, ಸುಧಾಕರ, ಸೂರ್ಯತೇಜ, ಕಾರ್ತಿಕ್, ಗುರುಕಿರಣ್, ಸಂದೀಪ್ ಉಳಿದ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಡಾ.ಕುಮಾರ ಚಲ್ಯಾ ಮತ್ತು ಹೈತೋ ಅವರ ಸಾಹಿತ್ಯದ ಗಜಲ್ ಗೀತೆಗಳಿಗೆ ಸ್ಯಾಮ್ ಸಂಗೀತ ಸಂಯೋಜಿಸಿದ್ದಾರೆ. ಪಳನಿ ಸೇನಾಪತಿ ಅವರ ಹಿನ್ನೆಲೆ ಸಂಗೀತ, ಎಂ.ಆರ್.ಸೀನು ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.



ವಸುದೇವ ಕುಟುಂಬದಲ್ಲಿ ಅವಿನಾಶ್, ಅಂಜಲಿ

ಮೂರು ದಶಕದ ನಂತರ ಕಿರುತೆರೆಗೆ ಮರಳಿದ ಹಿರಿಯ ನಟ




ಕಿರುತೆರೆ ವೀಕ್ಷಕರಿಗೆ ವಿಭಿನ್ನ ಶೈಲಿಯ ಕಥೆಗಳನ್ನು ನೀಡುತ್ತಿರುವ ಸ್ಟಾರ್ ಸುವರ್ಣ ವಾಹಿನಿ ಇದೀಗ ವಸುದೇವ ಕುಟುಂಬ ಎಂಬ ಮಿಡಲ್ ಕ್ಲಾಸ್ ಫ್ಯಾಮಿಲಿ ಸುತ್ತ ನಡೆಯೋ ಕಥೆಯನ್ನು ಕನ್ನಡಿಗರಿಗೆ ನೀಡಲು ಸಿದ್ಧವಾಗಿದೆ. ಈ ಮೂಲಕ ಮೂರು ದಶಕದ ನಂತರ ಹಿರಿಯ ನಟ ಅವಿನಾಶ್ ಅವರನ್ನು ಕಿರುತೆರೆಗೆ ಕರೆತರುತ್ತಿದೆ. ಅನಿಲ್ ಕೋರಮಂಗಲ ಅವರ ನಿರ್ಮಾಣ ಮತ್ತು ನಿರ್ದೇಶನವಿರುವ ವಸುದೇವ ಕುಟುಂಬಕ್ಕೆ ಒಂದೇ ಬೇರು, ಕವಲುನೂರು ಎಂಬ ಅರ್ಥಪೂರ್ಣ ಅಡಿಬರಹವಿದೆ.

ಇಲ್ಲಿ ಹಿರಿಯನಟ ಅವಿನಾಶ್ ಹಾಗೂ ನಟಿ ಅಂಜಲಿ ದಂಪತಿಯಾಗಿ ಕಾಣಿಸಿಕೊಳ್ಳುತ್ತಿದ್ದು, ಜತೆಗೆ ದಿ. ಸುಧೀರ್ ಪತ್ನಿ ಮಾಲತಿ ಸುಧೀರ್ ಅವರು ಅವಿನಾಶ್‌ರ ತಾಯಿಯಾಗಿ ನಟಿಸುತ್ತಿದ್ದಾರೆ. ವಸುದೇವನ ಕುಟುಂಬ ಹಾಗೂ ಆತನ ನಾಲ್ಕು ಹೆಣ್ಣು ಮಕ್ಕಳ ಸುತ್ತ ನಡೆಯುವ ಕಥೆ ಇದಾಗಿದ್ದು, ಪುತ್ರಿಯರಾಗಿ ಭಾವನಾ ಪಾಟೀಲ್, ಚೈತ್ರಾ ತೋಟದ್, ಬೃಂದಾ ಕಶ್ಯಪ್, ಆರಾಧ್ಯ ಹಾಗೂ ಹಂಸ, ಭಗತ್, ಆರ್.ಜಿ.ಅನೂಪ ಹೀಗೆ ಅನುಭವಿ ಕಲಾವಿದರುಗಳೇ ಅಭಿನಯಿಸುತ್ತಿದ್ದಾರೆ.

ವಸುದೇವ, ಪದ್ಮ ದಂಪತಿಗೆ ನಾಲ್ವರು ಹೆಣ್ಣುಮಕ್ಕಳು, ಮನೆಯಲ್ಲಿ ಹಿರಿ ಮಗಳ ಮದುವೆಯ ಸಿದ್ಧತೆ ನಡೆಯುತ್ತಿರುವಾಗಲೇ ಆಕಸ್ಮಿಕವಾಗಿ ನಡೆಯೋ ದುರ್ಘಟನೆಯೊಂದು ಆ ಫ್ಯಾಮಿಲಿಯನ್ನೇ ಅಲ್ಲೋಲಕಲ್ಲೋಲ ಮಾಡುತ್ತದೆ. ಇದರಿಂದಾಗಿ ಆ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತದೆ. ಇಂತಹ ಸಮಯದಲ್ಲಿ ನಾಯಕಿ ಸ್ವಾತಿ, ತನ್ನ ತಾಳ್ಮೆ ಮತ್ತು ಧೈರ್ಯದಿಂದ ಕುಟುಂಬಕ್ಕೆ ಹೇಗೆ ಆಧಾರವಾಗಿ ನಿಲ್ಲುತ್ತಾಳೆ? ತನ್ನ ದುಃಖ ಮರೆತು, ಮನೆಯವರ ಬದುಕನ್ನು ಹೇಗೆ ಮತ್ತೆ ಕಟ್ಟುತ್ತಾಳೆ? ಮನೆತನದ ಮಾನ ಗೌರವವನ್ನು ಯಾವ ರೀತಿ ಕಾಪಾಡುತ್ತಾಳೆ ಎನ್ನುವುದೇ ವಸುದೇವ ಕುಟುಂಬದ ಕಥಾಹಂದರ.

ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ವಸುದೇವನ ಪರಿವಾರದ ಸದಸ್ಯರೆಲ್ಲ ಹಾಜರಿದ್ದು ಮಾಹಿತಿ ಹಂಚಿಕೊಂಡರು. ನಟ ಅವಿನಾಶ್ ಮಾತನಾಡುತ್ತಾ, 32 ವರ್ಷದ ಹಿಂದೆ ಮಾಯಾಮೃಗದಲ್ಲಿ ನಟಿಸಿದ್ದೆ, ಸಾಕಷ್ಟು ಬಾರಿ ಕೇಳುತ್ತಿದ್ದರು, ನಾನೇ ಒಪ್ಪಿರಲಿಲ್ಲ. ಈ ಕಥೆ ನನಗೆ ತುಂಬಾ ಇಷ್ಟವಾಯಿತು, ಹಾಗಾಗಿ ಒಪ್ಪಿಕೊಂಡೆ. ಅದ್ಭುತವಾದ ನಾಲ್ಕು ಹೆಣ್ಣುಮಕ್ಕಳ ತಂದೆ ವಸುದೇವನಾಗಿ ಇಲ್ಲಿ ಬಣ್ಣ ಹಚ್ಚುತ್ತಿದ್ದೇನೆ. ನನ್ನ ಹೆಣ್ಣು ಮಕ್ಕಳನ್ನು ಗಂಡು ಮಕ್ಕಳ ಥರ ಬೆಳೆಸಿರುತ್ತೇನೆ ಎಂದು ವಿವರಿಸಿದರು. ಅಂಜಲಿ ಮಾತನಾಡಿ, ಎಲ್ಲಾ ಕುಟುಂಬಗಳಲ್ಲಿ ನಡೆಯೋ ಕಥೆಯನ್ನೇ ಇಲ್ಲಿ ಹೇಳುತ್ತಿದ್ದಾರೆ. ನಾಲ್ವರು ಹೆಣ್ಣು ಮಕ್ಕಳ ತಾಯಿ ಪದ್ಮ ಯಜಮಾನನಿಲ್ಲದ ಕುಟುಂಬವನ್ನು ಹೇಗೆ ಕಾಪಾಡುತ್ತಾಳೆ ಎನ್ನುವುದೇ ನನ್ನ ಪಾತ್ರ ಎಂದರು. ಸೆ.15ರಿಂದ ರಾತ್ರಿ 8.30ಕ್ಕೆ ವಸುದೇವ ಕುಟುಂಬ ಪ್ರಸಾರವಾಗಲಿದೆ.

ಸಿನಿಪದಬಂಧ-593



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1. ಧರಿತ್ರಿಯ ಮೊದಲ ಪುತ್ರನಿಗೆ ರಾಜೇಂದ್ರಸಿಂಗ್ ಬಾಬು ನಿರ್ದೇಶಕ 10
6. ಭಜರಂಗಿ ಚಿತ್ರದ ಸಂಗೀತ ನಿರ್ದೇಶಕ ತುಸು ವ್ಯತ್ಯಾಸಗೊಂಡು ಇಲ್ಲಿ ತಿರುಗಿದ್ದಾನೆ 5
8. ಹುಟ್ಟಿಗೆ ಹೀಗೊಂದು ಪದ 3
9. ನಮ್ಮೂರ ಹಮ್ಮೀರ ಚಿತ್ರದ ನಾಯಕಿ 7
12. ಸಿಹಿ ಮಿಲನಕ್ಕೆ ಟಿ.ಪಿ. ವೇಣುಗೋಪಾಲ್ ನಿರ್ದೇಶನವಿದೆ 6
13. ದಕ್ಷಿಣ ಭಾರತದ ಮಂಗಳಕರ ವಾದ್ಯ 4
16. ಯಶ್ ಅಭಿನಯದಲ್ಲಿ ಬಂದ ಬೇಡ 4
17. ಶವ ಸುಡುವ ಅಂತಿಮ ವಿಧಿಯ ಕೊರಗು 5
18. ಶ್ರೀನಾಥ್-ಲಕ್ಷ್ಮಿ ಅಭಿನಯಕ್ಕೆ ಕೆ.ಭಗವಾನ್ ಸಾರಂಗ್ ನಿರ್ದೇಶಕ 4

ಮೇಲಿನಿಂದ ಕೆಳಕ್ಕೆ

1. ಲೋಕೇಶ್ ಅಭಿನಯದಲ್ಲಿ ನರಕಾಧಿಪತಿ ಧರೆಗೆ ಇಳಿದಿದ್ದಾನೆ 9
2. ಬಂಜೆಯ ತೊಟ್ಟಿಲು ಕಾದಂಬರಿ ಆಧರಿಸಿರುವ ಚಿತ್ರವಿಲ್ಲಿ ತಲೆ ಕೆಳಗು 2
3. ಮಾಜಿ ಪ್ರಧಾನಿಯೊಬ್ಬರು ಯಾರೆಂದು ತಿಳಿದರೆ ರಾಜ್ ಕುಮಾರ್ ಚಿತ್ರ ಸಿಗಲಿದೆ 5
4. ಗೆಲುವಿನ ರಥ ನಡೆಸುವವನಂತಿರುವ ಪೋಷಕ ನಟ 6
5. ಜಿಂದಾಬಾದ್ ಚಿತ್ರದ ನಾಯಕ ಇಲ್ಲಿ ತಲೆ ಕೆಳಗಾಗಿದ್ದಾನೆ 3
7. ಇವರೇ ನಮ್ಮ ಚಾಮಯ್ಯ ಮೇಷ್ಟ್ರು 3
10. ವಿಷ್ಣುವರ್ಧನ್, ದ್ವಾರಕೀಶ್, ಜಯಚಿತ್ರ ಅಭಿನಯದ ಚಿತ್ರ 6
11. ಕನ್ನಡ ನಾಡಿನ ರಸಿಕರ ಮನವ ಸೂರೆಗೊಂಡವಳು 5
14. ರಿಯಲ್ ಸ್ಟಾರ್ ಉಪೇಂದ್ರ ಸುರಿಸಿದ ಅಶ್ರು 5
15. ನೃತ್ಯ ನಿರ್ದೇಶಕ ಸುಂದರ್ ಅವರ ಸ್ವಂತ ಸ್ಥಳ 3

ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಸಿನಿ ಪದಬಂಧ 592ರ ಉತ್ತರ

ಮ	ಕ್ಕ	ಳ	ರ	ಲ	ವ್ವ	ಮ	ನೆ	ತುಂ	ಬ	
ಕ್ಕ			ಶ್ರೀ					ಬಿ		
ಳೇ		ಪ		ಮಾ		ಬಾ	ಳಿ	ದ	ಮ	ನೆ
ಮ		ತಿ	ಲ್ಲಾ	ನ				ಮ		ನ
ನೆ		ತ		ಸ	ವಿ	ಸ	ವಿ	ನೆ	ನ	ಪು
ಗೆ		ಪಾ			ಪ್ಲ		ಧಿ			
ಮಾ	ನ	ವ	ದಾ	ನ	ವ		ವಿ	ಶ್ವ	ರೂ	ಪ
ಣಿ		ನಿ			ವ		ಲಾ			ರ
ಕ್ಯ			ಗಾ		ನಿ		ಸ	ಮಾ	ಗ	ಮ
	ಹೃ	ದ	ಯ	ಗೀ	ತೆ					ಶಿ
			ತ್ರ				ಜೋ	ಡಿ	ಜೀ	ವ

ವಿಜೇತರು: ಲಕ್ಷ್ಮಿ ಮಲ್ಲಿಕಾ.ಕೆ, ನಂ.332, 9ನೇ ಸಿ ಕ್ರಾಸ್, ಇ&ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು-570022

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

80ರ ದಶಕದಲ್ಲಿ ನಡೆಯುವ ಸಾಮಾಜಿಕ ಕಥಾನಕ 'ಸುಳಿ'




ಇತ್ತೀಚಿನ ದಿನಗಳಲ್ಲಿ ಕಾದಂಬರಿ ಆಧಾರಿತ ಚಿತ್ರಗಳ ಸಂಖ್ಯೆ ಕಮ್ಮಿಯಾಗಿದೆ. ಇದೀಗ ಮಹಿಳಾ ನಿರ್ದೇಶಕಿ ರಶ್ಮಿ ಎಸ್.(ಸಾಯಿರಶ್ಮಿ) ಅವರು ಅಂತಹ ಸಾಹಸಕ್ಕೆ ಕೈಹಾಕಿದ್ದಾರೆ. ತಮಿಳಿನ ಪವಳಾಯಿ ಎಂಬ ಕಾದಂಬರಿ ಇಟ್ಟುಕೊಂಡು ಸುಳಿ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಬೆಟ್ಟಸ್ವಾಮಿಗೌಡ ಅವರ ನಿರ್ಮಾಣದ ಸುಳಿ ಚಿತ್ರದಲ್ಲಿ ಸನತ್, ಚೈತ್ರಾ ಸಾಕೇಲ್, ಸಂಜನಾ ನಾಯ್ಡು, ಶಿವಕುಮಾರ್ ಆರಾಧ್ಯ, ಸೌಭಾಗ್ಯ, ಸಿದ್ದು ಮಂಡ್ಯ, ಶಂಕರ ನಾರಾಯಣ, ಬೆಟ್ಟಸ್ವಾಮಿಗೌಡ, ಕಾವ್ಯಾ, ಹರಿಹರನ್ ಮತ್ತಿತರರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ಇತ್ತೀಚೆಗಷ್ಟೇ ಈ ಚಿತ್ರದ ಟ್ರೇಲರ್ ಮತ್ತು ಹಾಡುಗಳ ಬಿಡುಗಡೆ ಕಾರ್ಯಕ್ರಮ ನಡೆಯಿತು. ಹಿರಿಯ ಲೇಖಕಿ ಬಿ.ಟಿ.ಲಲಿತಾ ನಾಯಕ್, ಹಿರಿಯ ನಟಿ ಭವ್ಯಾ, ನಟ ಸುಚೇಂದ್ರಪ್ರಸಾದ್ ಸೇರಿ ಸುಳಿ ಚಿತ್ರದ ಟ್ರೈಲರ್‌ಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಲಲಿತಾನಾಯಕ್, ಹೆಣ್ಣು ಮತ್ತು ಗಂಡಿನ ಕೂಡಿಕೆ ಪ್ರಕೃತಿ ಸಹಜವಾದದ್ದು. ಪ್ರತಿ ಮನುಷ್ಯನೂ ಪರಸ್ಪರ ಅವಲಂಬನೆಯಲ್ಲೇ ಬದುಕಬೇಕಾಗುತ್ತದೆ. ಒಬ್ಬ ವ್ಯಕ್ತಿಗೆ ಮತ್ತೊಬ್ಬ ವ್ಯಕ್ತಿಯ ಸಾಂಗತ್ಯ ಸಹಜ ಮತ್ತು ಅಗತ್ಯ ಅದನ್ನು ಸಮಾಜ ನೋಡುವ ದೃಷ್ಟಿಕೋನ ಮಾತ್ರ ಬೇರೆ ಬೇರೆಯಾಗಿರುತ್ತದೆ. ಇಂಥದ್ದೊಂದು ಕೂಡಿಕೆಯ ಕಥೆಯನ್ನು ಪ್ರೇಕ್ಷಕರ ಮುಂದೆ ತರುತ್ತಿರುವ ಚಿತ್ರತಂಡದ ಪ್ರಯತ್ನ ಸ್ವಾಗತಾರ್ಹ ಎಂದು ಹೇಳಿದರು. ಹಿರಿಯ ನಟಿ ಭವ್ಯಾ ಮಾತನಾಡಿ, ಸಾಮಾನ್ಯವಾಗಿ ಚಿತ್ರರಂಗ ಹೆಚ್ಚಾಗಿ ಪುರುಷ ಪ್ರಧಾನವಾಗಿರುತ್ತದೆ. ಇಂಥ ಕ್ಷೇತ್ರದಲ್ಲಿ ಮಹಿಳಾ ನಿರ್ದೇಶಕಿಯೊಬ್ಬರು ಇಂಥದ್ದೊಂದು ಕಥೆಯನ್ನು ಸಿನಿಮಾ ಮಾಡುತ್ತಿರುವುದು ಮಹಿಳೆಯರಿಗೆಲ್ಲ ಸ್ಫೂರ್ತಿದಾಯಕ ಎಂದು ಶುಭ ಹಾರೈಸಿದರು. ನಟ ಸುಚೇಂದ್ರಪ್ರಸಾದ್ ಮಾತನಾಡಿ, ಜನಪ್ರಿಯ ಕಾದಂಬರಿಯನ್ನು ದೃಶ್ಯರೂಪಕ್ಕಿಳಿಸುವುದು ಸವಾಲಿನ ಕೆಲಸ. ಈ ತಂಡ ಅಂತಹ ಕೆಲಸ ಮಾಡಿದೆ. ಇಂತಹ ಪ್ರಯತ್ನಗಳು ಅನೇಕರಿಗೆ ಪ್ರೇರಣೆ ಎಂದರು.

ನಿರ್ದೇಶಕಿ ರಶ್ಮಿ ಮಾತನಾಡಿ, 1980ರಲ್ಲಿ ನಡೆಯುವ ಸಾಮಾಜಿಕ ಕಥಾಹಂದರವಿದು. 'ಸಾಕ್ಷಾತ್ಕಾರ' ಸಿನಿಮಾದ ಘೋಷಣೆಯೊಂದಿಗೆ ಶುರುವಾಗುವ ಚಿತ್ರ, ಅಣ್ಣಾವ್ರ ಪಾತ್ರದ ಮಾನವೀಯ ಮೌಲ್ಯ ಮತ್ತು ಪ್ರೀತಿಯ ಆಳದ ಬಗ್ಗೆ ಹೇಳುತ್ತಾ ನೋಡುಗರನ್ನು ಸೆಳೆದುಕೊಳ್ಳುತ್ತದೆ. ಹೆಣ್ಣಿನ ಅಂತರಂಗದ ಭಾವನೆಗಳು, ಸಾಮಾಜಿಕ ಮೌಲ್ಯಗಳನ್ನು ತೆರೆ ಮೇಲೆ ತರುವ ಪ್ರಯತ್ನ ಮಾಡಿದ್ದೇವೆ. ಮಂಡ್ಯದ ಗ್ರಾಮೀಣ ಸೊಗಡಿನ ಹಿನ್ನೆಲೆಯಲ್ಲಿ ಈ ಸಿನಿಮಾದ ಕಥೆ ಸಾಗುತ್ತದೆ ಎಂದು ಮಾಹಿತಿ ನೀಡಿದರು. ಎಸ್.ರಾಜು ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.



ಮಗುವಿನ ಚಿಕಿತ್ಸೆಗೆ ಭಿಕ್ಷೆ ಬೇಡಿದ ದೊಡ್ಡಮ್ಮ!

ನಂಜನಗೂಡು, ಸೆ.11– ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಖಾಸಗಿ ಆಸ್ಪತ್ರೆಗೆ ದಾಖಲಾಗಿರುವ ಮಗುವಿನ ಚಿಕಿತ್ಸೆಗೆ ಹಣವಿಲ್ಲದೇ ಪೋಷಕರು ಪರದಾಡಿದ್ದು, ಆಸ್ಪತ್ರೆ ಬಿಲ್ ಪಾವತಿಸಲು ಮಗುವಿನ ದೊಡ್ಡಮ್ಮ ಕಣ್ಣೀರಿನೊಂದಿಗೆ ಗ್ರಾಮಸ್ಥರ ಬಳಿ ಸೆರಗೊಡ್ಡಿ ಭಿಕ್ಷೆ ಬೇಡಿದ ಮನಕಲಕುವ ಘಟನೆ ತಾಲೂಕಿನ ಹೆಡತಲೆ ಗ್ರಾಮದಲ್ಲಿ ನಡೆದಿದೆ. ಇದೀಗ ಭಿಕ್ಷೆ ಬೇಡುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಹೆಡತಲೆ ಗ್ರಾಮದ ನಿವಾಸಿ ಮಹೇಶ್ ಮತ್ತು ರಾಣಿ ದಂಪತಿ ತಮ್ಮ 5 ವರ್ಷದ ಪುತ್ರಿ ಆದ್ಯಳೊಂದಿಗೆ ಬುಧವಾರ ದೊಡ್ಡಕವಲಂದೆ ಕಡೆಯಿಂದ ನಂಜನಗೂಡು ಕಡೆಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ಬದನವಾಳು ಗ್ರಾಮದ ಬಳಿ ನಂಜನಗೂಡು ಕಡೆಯಿಂದ ಹೆಡತಲೆ ಗ್ರಾಮದ ಕಡೆಗೆ ತೆರಳುತ್ತಿದ್ದ ಮೂವರು ಯುವಕರಿದ್ದ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ಮಗು ಸೇರಿದಂತೆ ಎರಡೂ ಬೈಕ್‌ನಲ್ಲಿದ್ದ 6 ಮಂದಿ ತೀವ್ರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಮಗುವಿನ ಸ್ಥಿತಿ ಚಿಂತಾಜನಕವಾಗಿತ್ತು. ಆದರೆ ಆಸ್ಪತ್ರೆ, ಚಿಕಿತ್ಸೆ ಬಿಲ್ 1.5 ಲಕ್ಷ ಕಟ್ಟುವಂತೆ ತಾಕೀತು ಮಾಡಿತು. ಹಾಗಾಗಿ ಬಿಲ್ ಪಾವತಿಸಲು ಪೋಷಕರು ಪರದಾಡುತ್ತಿದ್ದ ಹಿನ್ನೆಲೆಯಲ್ಲಿ ಮಗುವಿನ ದೊಡ್ಡಮ್ಮ ಮಂಗಳಮ್ಮ ಗ್ರಾಮಕ್ಕೆ ಆಗಮಿಸಿ ಗ್ರಾಮಸ್ಥರ ಕೆಲ ಮನೆಗಳ ಮುಂದೆ ಕಣ್ಣೀರಿಡುತ್ತಾ ಸೆರಗೊಡ್ಡಿ ಭಿಕ್ಷೆ ಬೇಡಿ ಸುಮಾರು 80 ಸಾವಿರ ರೂ. ಸಂಗ್ರಹಿಸಿದ್ದಾರೆ. ವಿಷಯ ತಿಳಿದ ಗ್ರಾಮಸ್ಥರು ಸಹ ಮಗುವಿನ ಚಿಕಿತ್ಸೆಗೆ ಉದಾರವಾಗಿ ಧನ ಸಹಾಯ ಮಾಡುವ ಮೂಲಕ ನೆರವಾಗಿದ್ದಾರೆ.



ಚಿಕಿತ್ಸೆಗಾಗಿ ಮಗುವಿನ ದೊಡ್ಡಮ್ಮ ಭಿಕ್ಷೆ ಬೇಡುತ್ತಿರುವುದು.

ಮಗು ಆದ್ಯಳನ್ನು ಸದ್ಯ ಖಾಸಗಿ ಆಸ್ಪತ್ರೆಯಿಂದ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಈಗಲೂ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ನೆರವಿಗೆ ಧಾವಿಸಿದ ಶಾಸಕರು: ಶಾಸಕ ದರ್ಶನ್ ಮಾತನಾಡಿ, ಮೈಸೂರಿನ ಬೃಂದಾವನ ಆಸ್ಪತ್ರೆ ವೈದ್ಯಾಧಿಕಾರಿಗಳ ಜೊತೆ ಮಾತನಾಡಿ ಆದ್ಯಳಿಗೆ ಮೊದಲು ಚಿಕಿತ್ಸೆ ನೀಡಿ ಹಾಗೂ ಹಣಕ್ಕೆ ಬೇಡಿಕೆ ಇಡಬೇಡಿ. ನಾನು ಮಗುವಿನ ಚಿಕಿತ್ಸೆಗೆ ಸಹಾಯ ಮಾಡುತ್ತೇನೆ ಎಂದು ತಿಳಿಸಿದ್ದೆ. ಅದರಂತೆ 1.5 ಲಕ್ಷದಿಂದ 25 ಸಾವಿರ ರೂ.ಗಳಿಗೆ ಆಸ್ಪತ್ರೆ ಬಿಲ್ ಕಡಿತಗೊಳಿಸಿದ್ದಾರೆ. ಆದರೆ ಕುಟುಂಬದವರ ಮನವಿ ಮೇರೆಗೆ ಮಗು ಆದ್ಯಳನ್ನು ಕೆ.ಆರ್. ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ನಾನು ಅಲ್ಲಿನ ವೈದ್ಯಾಧಿಕಾರಿಗಳಿಗೆ ಉತ್ತಮ ಚಿಕಿತ್ಸೆ ನೀಡುವಂತೆ ಸೂಚನೆ ನೀಡಿದ್ದೇನೆ ಎಂದರು.



ಸನ್ಮಾನ

ಹುಣಸೂರು ತಾಲೂಕು ಕುಡಿನೀರು ಮುದ್ದನಹಳ್ಳಿ ಪಿಎಸಿಎಸ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಪ್ರವೀಣ್ ಗೌಡರನ್ನು ಗ್ರಾಮಸ್ಥರು ಸನ್ಮಾನಿಸಿದರು.

ವಾರ್ಷಿಕ ಮಹಾಸಭೆ

ಮಲ್ಕುಂಡಿ, ಸೆ.11– ಇಲ್ಲಿಗೆ ಸಮೀಪದ ಹಾಡ್ಯ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷ ಹೆಚ್.ಎಂ.ಶಂಕರ್ ಅವರ ಅಧ್ಯಕ್ಷತೆಯಲ್ಲಿ ಸೆ.15ರಂದು ಬೆಳಗ್ಗೆ 11.30ಕ್ಕೆ ನಡೆಯಲಿದೆ. ಸಂಘದ ಸದಸ್ಯರು ಸಭೆಗೆ ಹಾಜರಾಗುವಂತೆ ಸಿಇಓ ಎಂ.ಪಿ.ವೆಂಕಟರಾಜಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕರಿಗೆ ಜಗತ್ತನ್ನೇ ಬದಲಾಯಿಸುವ ಶಕ್ತಿ ಇದೆ

ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯ

ಹುಣಸೂರು, ಸೆ.11– ಶಿಕ್ಷಣವಿಲ್ಲದೇ ಯಾವುದೇ ಸಾಮಾಜಿಕ ಬದಲಾವಣೆ ಸಾಧ್ಯವಿಲ್ಲ. ಹಾಗೆಯೇ ಶಿಕ್ಷಕರಿಗೆ ಜಗತ್ತನ್ನೇ ಬದಲಾಯಿಸುವ ಶಕ್ತಿ ಇದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ನಗರದ ಗುರು ಭವನದಲ್ಲಿ ಗುರುವಾರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮತ್ತು ಶಿಕ್ಷಕರ ದಿನಾಚರಣೆ ಆಚರಣಾ ಸಮಿತಿ ವತಿಯಿಂದ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದಲ್ಲಿ ಹೊಸ ಆವಿಷ್ಕಾರಗಳು ಆಗುತ್ತಿರುತ್ತವೆ. ಆವಿಷ್ಕಾರಗಳು ಮನುಷ್ಯನ ಬದುಕಿನ ರೀತಿ ಬದಲಿಸುತ್ತವೆ. ಇದಕ್ಕೆ ಶಿಕ್ಷಣ ಕ್ಷೇತ್ರವೂ ಹೊರತಲ್ಲ. ಆದರೆ ಶಿಕ್ಷಕನಿಗೆ ಜಗತ್ತನ್ನು ಬದಲಾಯಿಸುವ ಶಕ್ತಿ ಇದೆ. ಈ ನೆಲದ ಗುರು ಪರಂಪರೆ ಸಂಸ್ಕೃತಿಯನ್ನು ವಿದ್ಯಾರ್ಥಿಗಳಿಗೆ ಕಲಿಸಿ ಎಂದರು.

ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿತಕ್ಕೆ ಸಿಸಿ ಕ್ಯಾಮರಾ, ವೆಬ್ ಕ್ಯಾಮರಾ ಮುಂತಾದ ಕಾರಣಗಳನ್ನು ಹೇಳುವುದು ಸರಿಯಲ್ಲ. ವಿದ್ಯಾರ್ಥಿಗಳಲ್ಲಿ ನೀವು ಪರೀಕ್ಷೆಯನ್ನು ಸಮರ್ಥವಾಗಿ ಎದುರಿಸುವ ಶಕ್ತಿ ತುಂಬಬೇಕು. ಹಾಗೆಂದು ಅಂಕಗಳ ಹಿಂದೆಯೇ ಹೋಗಬೇಕೆಂದಿಲ್ಲ. ಮಕ್ಕಳಲ್ಲಿ ಆಲೋಚನಾ ಶಕ್ತಿ ಬೆಳಸಿ. ಸಾಧನೆಗಾಗಿ, ಜೀವನ ಸಾಧನೆಗಾಗಿ ಅವರನ್ನು ಹುರಿದುಂಬಿಸಿ. ತಾಲೂಕಿನ ಶಾಲೆಗಳಲ್ಲಿ ಮೂಲಸೌಕರ್ಯ ಕೊರತೆ ಇರುವುದನ್ನು ನಾನು ಬಲ್ಲೆ. ಹಂತ ಹಂತವಾಗಿ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ವಹಿಸುತ್ತೇನೆ. ಶಿಕ್ಷಕರು ಎದುರಿಸುತ್ತಿರುವ ಟಿಇಟಿ ಕುರಿತಾದ ಸಮಸ್ಯೆ ಬಗ್ಗೆಯೂ ಅರಿತಿದ್ದೇನೆ. ಮುಂದಿನ ವಿಧಾನಸಭೆ ಅಧಿವೇಶನದಲ್ಲಿ ಶಿಕ್ಷಕರ ಸಮಸ್ಯೆ ಕುರಿತು ಚರ್ಚಿಸಲಿದ್ದೇನೆ. ಅಲ್ಲದೇ ಹೈಕೋರ್ಟ್ ಶಿಕ್ಷಕರ ಟಿಇಟಿ ಸಮಸ್ಯೆ ಕುರಿತಾಗಿ ನೀಡಿರುವ ತೀರ್ಪು ಶಿಕ್ಷಕ ವೃಂದಕ್ಕೆ ಮಾರಕವಾಗಿದ್ದು, ಈ ಕುರಿತು ಕೇಂದ್ರ ಸರ್ಕಾರದ ಗಮನ ಸೆಳೆಯಲು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ ಬಳಿ ಶಿಕ್ಷಕರ ನಿಯೋಗವೊಂದನ್ನು ಕರೆದೊಯ್ಯುವ ಜವಾಬ್ದಾರಿಯನ್ನು ನಾನು ನಿರ್ವಹಿಸುತ್ತೇನೆ ಎಂದು ಭರವಸೆ ನೀಡಿದರು.



ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಶಿಕ್ಷಕರ ಅಶಿಸ್ತಿನ ವರ್ತನೆಗೆ ಬೇಸರ

ಸಮಾರಂಭ ನಡೆಯುತ್ತಿದ್ದ ವೇಳೆ ಸಭಾಂಗಣದಲ್ಲಿದ್ದ ಶಿಕ್ಷಕರು ಗುಂಪು ಗುಂಪಾಗಿ ಎದ್ದು ಊಟದ ಕಡೆ ತೆರಳಿದನ್ನು ಕಂಡು ಶಾಸಕ ಜಿ.ಡಿ.ಹರೀಶ್‌ಗೌಡರು ಬೇಸರಗೊಂಡು ತಮ್ಮ ಭಾಷಣದ ವೇಳೆ ಶಿಸ್ತು ಕಲಿಸಬೇಕಾದ ನೀವೇ ಅಶಿಸ್ತಿನಿಂದ ನಡೆದುಕೊಂಡರೆ ಮಕ್ಕಳಿಗೆ ಏನು ಹೇಳಿಕೊಡುತ್ತೀರಿ ಎಂದು ಪ್ರಶ್ನಿಸುವ ಮೂಲಕ ಬೇಸರ ಹೊರಹಾಕಿದರು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಗಲಿ ಮಾತನಾಡಿ, ರಾಜ್ಯದಲ್ಲಿ ಶಿಕ್ಷಕರು ಮಕ್ಕಳಿಗೆ ಶಿಕ್ಷಣ ನೀಡುವುದನ್ನು ಹೊರತುಪಡಿಸಿ ಮಿಕ್ಕೆಲ್ಲಾ ಕೆಲಸಗಳನ್ನೂ ಮಾಡುತ್ತಿದ್ದಾರೆ. ನಮ್ಮನ್ನು ಕಲಿಸಲು ಬಿಡಿ ಎಂದು ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇವೆ. 'ನಲಿಕಲಿ' ಮುಂಬರುವ ಸಾಲಿನಲ್ಲಿ ರದ್ದಾಗುವತ್ತ ಹೋರಾಟ ನಡೆಸಿದ್ದೇವೆ. ಈ ನಡುವೆ ಟಿಇಟಿ ಸಮಸ್ಯೆ ಶಿಕ್ಷಕರನ್ನು ಕಾಡುತ್ತಿದ್ದು, ಯುವ ನಾಯಕ ಜಿ.ಡಿ.ಹರೀಶ್‌ಗೌಡರ ನೇತೃತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ವಿಷಯದ ಕುರಿತು ಮನವರಿಕೆ ಮಾಡಿಕೊಡುವ ಮೂಲಕ ದೇಶದ 70 ಲಕ್ಷ ಶಿಕ್ಷಕರ ಭವಿಷ್ಯ ಕಾಪಾಡಲು ಕೋರುತ್ತೇನೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಅವರು, ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜೀವನ, ಬದುಕು ಮತ್ತು ಸಾಧನೆಗಳ ಕುರಿತು ಮಾತನಾಡಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಚೇತನ್, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆ.ಬಿ.ಶಶಿಕುಮಾರ್ ಮಾತನಾಡಿದರು.

ಈ ವೇಳೆ ಪ್ರಸಕ್ತ ಸಾಲಿನಲ್ಲಿ ನಿವೃತ್ತರಾದ 60 ಶಿಕ್ಷಕರನ್ನು ಸನ್ಮಾನಿಸಲಾಯಿತು. ಅಲ್ಲದೇ 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ.ಮಹದೇವ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಟಿ.ರಂಗಸ್ವಾಮಿ, ನಗರಸಭಾಧ್ಯಕ್ಷ ಮಾಲೀಕ್ ಪಾಷಾ, ಕ್ಷೇತ್ರ ಸಮನ್ವಯಾಧಿಕಾರಿ ಹೆಚ್.ಪಿ.ಹೇಮಲತಾ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಸಿ.ಪ್ರಸನ್ನ, ಉಪಾಧ್ಯಕ್ಷ ಎಚ್.ಬಿ.ಚನ್ನವೀರಪ್ಪ, ಗ್ಯಾರಂಟಿ ಯೋಜನೆ ತಾಲೂಕು ಅಧ್ಯಕ್ಷ ಕಲ್ಲುಣಿಕೆ ರಾಘು ಮತ್ತು ಶಿಕ್ಷಕರು ಹಾಜರಿದ್ದರು.

ಹೋಟೆಲ್ ಹೆಸರಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಸಿದ್ಧತೆ

ಗ್ರಾಮಸ್ಥರ ವಿರೋಧ, ಉಗ್ರ ಪ್ರತಿಭಟನೆ ಎಚ್ಚರಿಕೆ

ನಂಜನಗೂಡು, ಸೆ.11– ಸುತ್ತಮುತ್ತಲಿನ ಗ್ರಾಮಸ್ಥರ ವಿರೋಧದ ನಡುವೆಯೂ ಹೋಟೆಲ್ ಹೆಸರಿನಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಸಿದ್ಧತೆ ನಡೆಸುತ್ತಿರುವ ಮಾಲೀಕನ ವಿರುದ್ಧ ಗ್ರಾಮಸ್ಥರು ಕಿಡಿಕಾರಿದ್ದು, ಬಾರ್ ತೆರೆದರೆ ಉಗ್ರ ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದ್ದಾರೆ.

ಕಳೆದ ಕೆಲ ವರ್ಷಗಳ ಹಿಂದೆ ರಾಷ್ಟ್ರೀಯ ಹೆದ್ದಾರಿ ಎಡಭಾಗದಲ್ಲಿ ಹುಣಸನಾಳು ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿ ಅನ್ಯಕ್ರಾಂತ್ಯವಾಗದ ಕೃಷಿ ಭೂಮಿಯಲ್ಲಿ ಬಾರ್ ತೆರೆಯಲು ಕಟ್ಟಡ ನಿರ್ಮಿಸಿ ಪರವಾನಗಿ ಪಡೆದು ಮದ್ಯ ಮಾರಾಟ ಆರಂಭಿಸಲಾಗಿತ್ತು. ಆದರೆ ಹುಣಸನಾಳು, ಕೂಡ್ಲಾಪುರ, ಬಾಗೂರು ಹಾಗೂ ಎಲಚಗೆರೆ ಗ್ರಾಮಸ್ಥರು 2 ತಿಂಗಳಿಗೂ ಹೆಚ್ಚು ಕಾಲ ಉಗ್ರ ಪ್ರತಿಭಟನೆ ನಡೆಸಿದ ಪರಿಣಾಮ ತೆರೆಯಲಾಗಿದ್ದ ಬಾರ್ ಅನ್ನು ಮುಚ್ಚಲಾಗಿತ್ತು. ಆದರೆ ಈಗ ರಾಷ್ಟ್ರೀಯ ಹೆದ್ದಾರಿಯ ಬಲ ಭಾಗದಲ್ಲಿ ಎಲಚಗೆರೆ ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿ ಸಂಗೀತ ಹೋಟೆಲ್ ಹೆಸರಿನಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಲಾಡ್ಜ್ ತೆರೆಯಲು ಈಗಾಗಲೇ ಎಲ್ಲಾ ಸಿದ್ಧತೆಗಳು ನಡೆದಿದೆ. ಬಾರ್ ತೆರೆಯಲು ಕಡತಗಳು ಕೂಡ ಕಚೇರಿಯಿಂದ ಕಚೇರಿಗೆ ರವಾನೆಯಾಗಿವೆ ಎಂಬ ಮಾಹಿತಿ ತಿಳಿದು ಬಂದಿದ್ದು, ಇದಕ್ಕೆ ಹುಣಸನಾಳು, ಕೂಡ್ಲಾಪುರ, ಎಲಚಗೆರೆ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ್ದಾರೆ.



ಬಾರ್ ತೆರೆಯಲು ಉದ್ದೇಶಿಸಲಾಗಿರುವ ಕಟ್ಟಡ.

ಹಿಂದುಳಿದವರು, ಪ.ಜಾತಿ ಮತ್ತು ಪಂಗಡದವರೇ ಹೆಚ್ಚು ವಾಸಿಸುವ ಸ್ಥಳಗಳಲ್ಲಿ ಬಾರ್ ತೆರೆಯುವುದರಿಂದ ಹೆಚ್ಚಾಗಿ ಕುಡಿತದ ಚಟಕ್ಕೆ ಒಳಗಾಗಿ ನಮ್ಮ ಕುಟುಂಬ ಬೀದಿಗೆ ಬರುತ್ತದೆ. ಆದ್ದರಿಂದ ನಾವು ಬಾರ್ ತೆರೆಯಲು ಬಿಡುವುದಿಲ್ಲ. ಈ ಬಗ್ಗೆ ಎಲಚಗೆರೆ ಮತ್ತು ಹುಣಸನಾಳು ಗ್ರಾಮದ ಕೂಟಗಳಲ್ಲಿ ಚರ್ಚೆ ನಡೆಸಿ ತೀರ್ಮಾನಕ್ಕೆ ಬರಲಾಗಿದೆ. ಜೊತೆಗೆ ಅಬಕಾರಿ ಇಲಾಖೆ ಸೇರಿದಂತೆ ಶಾಸಕರಿಗೂ ಮನವಿ ಸಲ್ಲಿಸಲಾಗಿದೆ. ಅಬಕಾರಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಇಲ್ಲಿ ಬಾರ್ ತೆರೆಯಲು ಬಿಡಬಾರದು. ಒಂದು ವೇಳೆ ಬಾರ್ ತೆರೆದರೆ ಉಗ್ರ ಪ್ರತಿಭಟನೆ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಹುಣಸನಾಳು ಗ್ರಾಮದ ನಿವಾಸಿ ಸಿದ್ದರಾಜು ಮಾತನಾಡಿ, ಕಳೆದ ಕೆಲವು ವರ್ಷಗಳ ಹಿಂದೆ ಇದೆ ಸ್ಥಳದಲ್ಲಿ ಬಾರ್ ತೆರೆದಿದ್ದಾಗ ಶಾಲೆ ನಿರ್ಮಾಣವಾಗಿರಲಿಲ್ಲ. ಆದರೆ ಅದೇ ಸ್ಥಳದಲ್ಲಿ ಈಗ ಬೃಹತ್ ಗೋಕುಲಂ ಇಂಟರ್ ನ್ಯಾಷನಲ್ ಶಾಲೆ ಕಟ್ಟಡ ನಿರ್ಮಾಣವಾಗಿ ಉದ್ಘಾಟನೆಯ ಹಂತದಲ್ಲಿದೆ. ಹೀಗಿದ್ದರೂ ಶಾಲೆಯಿಂದ ಕೇವಲ 100 ಮೀಟರ್ ಅಂತರದೊಳಗೆ ಬಾರ್ ಮತ್ತು ರೆಸ್ಟೋರೆಂಟ್ ತೆರೆಯಲು ಪಟ್ಟಭದ್ರ ಹಿತಾಸಕ್ತಿಗಳು ಮುಂದಾಗಿವೆ. ಆದ್ದರಿಂದ ಶಾಸಕರು ಮತ್ತು ಅಧಿಕಾರಿಗಳು ಇಲ್ಲಿ ಬಾರ್ ತೆರೆಯಲು ಅವಕಾಶ ನೀಡಬಾರದು. ಒಂದು ವೇಳೆ ಬಾರ್ ತೆರೆದಿದ್ದೇ ಆದಲ್ಲಿ ಸುತ್ತಮುತ್ತಲಿನ ಗ್ರಾಮಸ್ಥರು ಸೇರಿ ಉಗ್ರ ಪ್ರತಿಭಟನೆ ರೂಪಿಸ ಲಾಗುವುದು ಎಂದರು.

ಎಲಚರೆ ಗ್ರಾಮದ ಕರಿನಾಯಕ ಮಾತನಾಡಿ, ಎಲಚರೆ ಗ್ರಾಮದಲ್ಲಿ ಈಗಾಗಲೇ ಕ್ರಷರ್‌ಗಳ ಧೂಳಿನಿಂದ ಮತ್ತು ಲಾರಿಗಳ ಶಬ್ದದಿಂದ ಗ್ರಾಮಸ್ಥರೇ ಊರು ಬಿಡುವ ಸನ್ನಿವೇಶ ನಿರ್ಮಾಣವಾಗಿದೆ. ಈಗ ಬಾರ್ ತೆರೆದರೆ ಕೂಲಿ ಮಾಡಿ ಜೀವನ ಸಾಗಿಸುವ ಬಡವರು ಬೀದಿಗೆ ಬರಬೇಕಾಗುತ್ತದೆ. ಆದ್ದರಿಂದ ಗ್ರಾಮದಲ್ಲಿ ಈ ಬಗ್ಗೆ ಕೂಟ ಸೇರಿ ಬಾರ್ ತೆರೆಯಲು ಅವಕಾಶ ನೀಡಬಾರದು ಎಂದು ಅಧಿಕಾರಿಗಳಿಗೆ ಮತ್ತು ಶಾಸಕರಿಗೆ ಮನವಿ ಸಲ್ಲಿಸಲಾಗಿದೆ. ಒಂದು ವೇಳೆ ಗ್ರಾಮಸ್ಥರ ಮನವಿ ಧಿಕ್ಕರಿಸಿ ಬಾರ್ ತೆರೆದರೆ ತಕ್ಕ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಅಧಿಕಾರಿಗಳ ಕರ್ತವ್ಯ ನಿಷ್ಠೆಗೆ ಕಳಂಕ ತರಬಾರದು

ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ

ತಿ.ನರಸೀಪುರ, ಸೆ.11– ತಮ್ಮ ವೈಯಕ್ತಿಕ ದ್ವೇಷ ಸಾಧನೆಗಾಗಿ ತಾಲೂಕಿನಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಕರ್ತವ್ಯ ನಿಷ್ಠೆಗೆ ಕಳಂಕ ತರುವ ಕೆಲಸ ಮಾಡಬಾರದು ಎಂದು ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಪೊಲೀಸ್ ಠಾಣೆಯಲ್ಲಿ ಸಿಪಿಐ ಧನಂಜಯ್ ಹಾಗೂ ಎಸ್‌ಐ ಜಗದೀಶ್ ಧೂಳ್‌ಶೆಟ್ಟಿ ಅವರು ದಕ್ಷತೆ, ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ಕೆಲ ಸಂಘಟನೆಗಳ ಮುಖಂಡರು ತಮ್ಮ ವೈಯಕ್ತಿಕ ದ್ವೇಷ ಸಾಧನೆಗಾಗಿ ದಕ್ಷ ಅಧಿಕಾರಿಗಳ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿರುವುದು ಖಂಡನೀಯ. ಮುಂದೆ ಇದೇ ಚಾಳಿ ಮುಂದುವರೆಸಿದರೇ, ಅಧಿಕಾರಿಗಳ ವಿರುದ್ಧ ಅಪಪ್ರಚಾರ ಮಾಡುವವರ ವಿರುದ್ಧ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ತುಂಬಲ ಗ್ರಾಮದ ಯುವಕರಿಗೆ ಪೊಲೀಸರು ಥಳಿಸಿದ್ದಾರೆ ಎಂಬ ಕೆಲ ಮುಖಂಡರ ಹೇಳಿಕೆ ಸತ್ಯಕ್ಕೆ ದೂರವಾದದು. ಪೊಲೀಸ್ ಅಧಿಕಾರಿಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿರುವುದನ್ನು ಸಹಿಸದ ಕೆಲವರು ಅವರ ವಿರುದ್ಧ ಆರೋಪದಲ್ಲಿ ನಿರತರಾಗಿದ್ದಾರೆ ಎಂದು ಕಿಡಿಕಾರಿದರು.



ಸುದ್ದಿಗೋಷ್ಠಿಯಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ ಮಾತನಾಡಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷ ಹುಣಸೂರು ಬಸವಣ್ಣ ಮಾತನಾಡಿ, ತುಂಬಲ ಹಾಗೂ ಕಲ್ಲುಣಿ ಗ್ರಾಮಸ್ಥರು ಕಂಬದ ಬೆಟ್ಟದ ಜಾತ್ರೆಯಲ್ಲಿ ಗಲಾಟೆ ಮಾಡಿಕೊಂಡಾಗ ಪೊಲೀಸರು ಶಾಂತಿ ಕಾಪಾಡಲು ಅಲ್ಲಿಗೆ ತೆರಳಿದ್ದರು. ಗಲಾಟೆ ಅತಿರೇಕಕ್ಕೆ ಹೋದಾಗ ಸಿಪಿಐ ಧನಂಜಯ್ ಧಾವಿಸಿ 2 ಗುಂಪಿನವರಿಗೂ ತಿಳಿ ಹೇಳಿ ಠಾಣೆಗೆ ಎರಡೂ ಕಡೆಯವರು ಬರುವಂತೆ ಹೇಳಿ ಬಂದಿದ್ದಾರೆ. ಸಿಪಿಐ ಅಲ್ಲಿಂದ ಹೊರಟ ನಂತರ ಯುವಕರು ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಆಗ ಗಾಯಗಳಾಗಿವೆ. ಆದರೆ ಯುವಕರನ್ನು ಠಾಣೆಗೆ ಕರೆಸಿ ಹಲ್ಲೆ ನಡೆಸಿದ್ದಾರೆ ಎಂಬುದು ಸರಿಯಲ್ಲ. ಕೆಲವರು ಪೊಲೀಸರ ಮೇಲೆ ಇಲ್ಲ ಸಲ್ಲದ ಆರೋಪ ಮಾಡಿ ತಾಲೂಕಿನಲ್ಲಿ ಶಾಂತಿ ಕದಡುವ ಕೆಲಸಕ್ಕೆ ಮುಂದಾಗಿದ್ದು, ಅಂತಹ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಹಾಗೂ ಪಟ್ಟಣದಲ್ಲಿ ಶಾಂತಿ–ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ಸುಳ್ಳು ಸುದ್ದಿಗೆ ಪ್ರಾಮುಖ್ಯತೆ ನೀಡುವುದನ್ನು ಮುಖಂಡರು ಬಿಡಬೇಕು ಎಂದರು.

ಈ ವೇಳೆ ಡಾ.ಮನ್ಸೂರ್ ಆಲಿ, ಹಾಪ್ ಕಾಮ್ಸ್ ಮಾಜಿ ನಿರ್ದೇಶಕ ಪ್ರಕಾಶ್, ನಾಗರಾಜು, ಅಕ್ಬರ್, ನಿಂಗಣ್ಣ ಮತ್ತಿತರರಿದ್ದರು.

ಉತ್ತಮ ಲಾಭದತ್ತ ಗುಜ್ಜಪ್ಪನಹುಂಡಿ ಡೇರಿ

ವಾರ್ಷಿಕ ಮಹಾಸಭೆ ಮೈಮುಲ್ ನಿರ್ದೇಶಕ ಕೆ.ಈರೇಗೌಡ ಮಾಹಿತಿ

ಹೆಚ್.ಡಿ.ಕೋಟೆ, ಸೆ.11– ತಾಲೂಕಿನ ಗುಜ್ಜಪ್ಪನ ಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘ 2022–23ನೇ ಸಾಲಿನಲ್ಲಿ ಹಲವು ಕಾರಣಗಳಿಂದಾಗಿ ಸ್ಥಗಿತಗೊಂಡಿದ್ದು, ಗ್ರಾಮಸ್ಥರ ಒಮ್ಮತದಿಂದಾಗಿ 2024–25ನೇ ಸಾಲಿನ ಸೆಪ್ಟೆಂಬರ್ ತಿಂಗಳಲ್ಲಿ ಪ್ರಾರಂಭಗೊಂಡು ಉತ್ತಮ ಲಾಭದತ್ತ ಸಾಗುತ್ತಿದೆ ಎಂದು ಮೈಮುಲ್ ನಿರ್ದೇಶಕ ಕೆ.ಈರೇಗೌಡ ಮಾಹಿತಿ ನೀಡಿದರು.

ತಾಲೂಕಿನ ಗುಜ್ಜಪ್ಪನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಗುರುವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಇಲ್ಲಿನ ಡೇರಿ ಕೆಲ ಕಾರಣಾಂತರಗಳಿಂದ ಸ್ಥಗಿತಗೊಂಡಿತ್ತು. ಆದರೆ ಇದೀಗ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಕಳೆದ 7 ತಿಂಗಳ ಅವಧಿಯಲ್ಲಿ ಸಂಘದಲ್ಲಿ 500 ಲೀ.ಗಳಷ್ಟು ಹಾಲು ಶೇಖರಣೆಯಾಗುತ್ತಿತ್ತು. ಇದೀಗ ಸಾವಿರ ಲೀಟರ್‌ಗಳಿಗೆ ಏರಿಕೆಯಾಗಿದ್ದು, 1.5 ಲಕ್ಷ ರೂ. ಲಾಭ ಗಳಿಸಿದೆ ಎಂದರು.



ವಾರ್ಷಿಕ ಮಹಾಸಭೆಯಲ್ಲಿ ಮೈಮುಲ್ ನಿರ್ದೇಶಕ ಈರೇಗೌಡ ಮಾತನಾಡಿದರು.

ಹಾಲು ಉತ್ಪಾದಕರಿಗಾಗಿ ಮೈಮುಲ್ ಒಕ್ಕೂಟ ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದೆ. ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ಬೂದನೂರು ಬಸವರಾಜಪ್ಪ ಅವರು ಆದಷ್ಟು ಬೇಗ ಸಂಘದ ಕಟ್ಟಡ ನಿರ್ಮಿಸುವಂತೆ ಸಲಹೆ ನೀಡಿದರು. ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ ಬಸವರಾಜಪ್ಪ, ಮೈಮುಲ್ ಪಶು ವೈದ್ಯಾಧಿಕಾರಿ ಡಾ.ಮುಕುಲ್, ಅಧ್ಯಕ್ಷ ಸುರೇಂದ್ರ, ಉಪಾಧ್ಯಕ್ಷ ರಾಮೇಗೌಡ, ಪ್ರಶಾಂತ, ಗಣೇಶ್, ಅಮಿತ್, ನಾಗೇಶ್, ಪದ್ಮರಾಜ್, ಗೋವಿಂದರಾಜ್, ದೇವಣ್ಣ, ಕೃಷ್ಣಾಚಾರಿ, ಸುಂದರದಾಸ್, ದೇವೇಶ, ಕಾರ್ಯದರ್ಶಿ ಯೋಗೇಶ್, ಮನೋಜ್ ಕುಮಾರ್, ಗುಜ್ಜಪ್ಪನ ಹುಂಡಿ ಮತ್ತು ಬಸಾಪುರ ಗ್ರಾಮಸ್ಥರು ಹಾಜರಿದ್ದರು.

ಕ್ರೀಡಾಕೂಟದಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ

ಸರಗೂರು, ಸೆ.11– ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಪಡೆದ ಶಾಲೆಯ ವಿದ್ಯಾರ್ಥಿಗಳನ್ನು ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆ ವತಿಯಿಂದ ಅಭಿನಂದಿಸಲಾಯಿತು.

ಸರಗೂರಲ್ಲಿ ನಡೆದ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಶಾಲೆಯ ಬಾಲಕ, ಬಾಲಕಿಯರ ವಿಭಾಗದಲ್ಲಿ ವಿದ್ಯಾರ್ಥಿಗಳು ಹೆಚ್ಚು ಪ್ರಶಸ್ತಿಗಳನ್ನು ಗೆಲ್ಲುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದು, ಅವರನ್ನು ಶಾಲೆಯ ಶಿಕ್ಷಕರು, ಆಡಳಿತ ಮಂಡಳಿ ಸದಸ್ಯರು ಅಭಿನಂದಿಸಿದರು.



ಕ್ರೀಡಾಕೂಟದಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳನ್ನು ಕಾಣಬಹುದು.

ಅಥ್ಲೆಟಿಕ್ಸ್ ವಿಭಾಗದಲ್ಲಿ ಬಾಲಕರ 100ಮೀ ಓಟ ಪ್ರಥಮ, 200ಮೀ. ಓಟ ತೃತೀಯ, 800ಮೀ. ಓಟ ತೃತೀಯ, 3000 ಮೀ ಓಟ ತೃತೀಯ, 4x10 ರಿಲೇ ಪ್ರಥಮ, 4x400ಮೀ. ರಿಲೇ ದ್ವಿತೀಯ, ಜಾವೆಲಿನ್ ಥ್ರೋ ತೃತೀಯ, ಎತ್ತರ ಜಿಗಿತ ಪ್ರಥಮ, ಉದ್ದ ಜಿಗಿತ ಪ್ರಥಮ. ಬಾಲಕಿಯರ ವಿಭಾಗದಲ್ಲಿ 4x400 ಮೀಟರ್ ರಿಲೇ ದ್ವಿತೀಯ, ಎತ್ತರ ಜಿಗಿತ ಪ್ರಥಮ, ಉದ್ದ ಜಿಗಿತ ತೃತೀಯ, ಗುಂಡು ಎಸೆತ ಪ್ರಥಮ, ಜಾವೆಲಿನ್ ಪ್ರಥಮ, ತಟ್ಟೆ ಎಸೆತದಲ್ಲಿ ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದಿದ್ದಾರೆ.

ಹುಡುಗರ ಬಾಲ್ ಬ್ಯಾಡ್ಮಿಂಟನ್ ಪ್ರಥಮ, ಹುಡುಗಿಯರ ಬಾಲ್ ಬ್ಯಾಡ್ಮಿಂಟನ್ ಪ್ರಥಮ, ಬಾಲಕಿಯರ ಕಬ್ಬಡಿ ಪ್ರಥಮ, ಬಾಲಕಿಯರ ಥ್ರೋ ಬಾಲ್ ದ್ವಿತೀಯ, ಬಾಲಕಿಯರ ವಾಲಿಬಾಲ್ ದ್ವಿತೀಯ ಹಾಗೂ ಪಥ ಸಂಚಲನದಲ್ಲಿ ದ್ವಿತೀಯ ಬಹುಮಾನಗಳನ್ನು ಪಡೆದಿದ್ದಾರೆ. ಶರತ್ ಎಂಬ ವಿದ್ಯಾರ್ಥಿ ಶಾಲೆ ಚಾಂಪಿಯನ್ ಆಗಿ ಶಾಲೆಗೆ ಕೀರ್ತಿ ತಂದಿದ್ದಾರೆ.

ಈ ವೇಳೆ ದೈಹಿಕ ಶಿಕ್ಷಕ ವಿಜಯ್ ಕುಮಾರ್, ಪ್ರಾಂಶುಪಾಲ ಬಿ.ಡಿ.ದಾಸಾಚಾರಿ, ಮುಖ್ಯ ಶಿಕ್ಷಕಿ ಪದ್ಮಶ್ರೀ, ಸಹಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇನ್ನಿತರರು ಹಾಜರಿದ್ದರು.

ಹಾಲು ಉತ್ಪಾದಕರು ಸಂಘದ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಿ

ವಾರ್ಷಿಕ ಮಹಾಸಭೆಯಲ್ಲಿ ಮೈಮುಲ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಓಂ ಪ್ರಕಾಶ್

ತಿ.ನರಸೀಪುರ, ಸೆ.11– ಹಾಲು ಉತ್ಪಾದಕರು ಡೇರಿಗೆ ಗುಣಮಟ್ಟದ ಹಾಲು ಸರಬರಾಜು ಮಾಡುವ ಜೊತೆಗೆ ಸಂಘದಿಂದ ದೊರೆಯುವ ಸೌಲಭ್ಯಗಳನ್ನು ಪಡೆದು ಆರ್ಥಿಕವಾಗಿ ಸಬಲರಾಗಬೇಕು ಎಂದು ಮೈಮುಲ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಓಂ ಪ್ರಕಾಶ್ ತಿಳಿಸಿದರು.

ತಾಲೂಕಿನ ನಿಲಸೋಗೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಹೈನುಗಾರರು ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡಿದರೆ ಹೆಚ್ಚಿನ ಆದಾಯ ಗಳಿಸಬಹುದಾಗಿದ್ದು, ಇದನ್ನು ಗಮನದಲ್ಲಿಟ್ಟುಕೊಂಡು ಹಸುವಿಗೆ ಉತ್ತಮ ಆಹಾರ ನೀಡಬೇಕು. ಜೊತೆಗೆ ಆರೋಗ್ಯ ಕಾಪಾಡಬೇಕು. ಸಂಘದ ಸದಸ್ಯರು ಹಾಗೂ ಹೈನುಗಾರರು ಸರ್ಕಾರ, ಜಿಲ್ಲಾ ಹಾಲು ಒಕ್ಕೂಟದಿಂದ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಶುದ್ಧ ಹಾಗೂ ಗುಣಮಟ್ಟದ ಹಾಲನ್ನು ಸರಬರಾಜು ಮಾಡಿದರೆ ಸಂಘವು ಉಳಿಯುತ್ತದೆ ಮತ್ತು ಸರ್ಕಾರದ ಪ್ರೋತ್ಸಾಹ ಧನ ಬರಲು ಅನುಕೂಲವಾಗುತ್ತದೆ. ರೈತರು ಕೃಷಿ ಚಟುವಟಿಕೆ ಮತ್ತು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡರೆ ಯಾವುದೇ ನಷ್ಟ ಇಲ್ಲ. ರಾಸುಗಳಿಗೆ ಯಾವಾಗಲೂ ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು ಎಂದರು.



ಸಭೆಯಲ್ಲಿ ಮೈಮುಲ್ ನಿರ್ದೇಶಕ ಓಂ ಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ಇಂದು ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳು ಹೊರ ರಾಜ್ಯಗಳಲ್ಲದೇ ಪಾಶ್ಚಾತ್ಯ ದೇಶಗಳಿಗೂ ಮಾರುಕಟ್ಟೆ ವಿಸ್ತರಿಸಿರುವುದು ನಂದಿನಿ ಹಾಲಿನ ಉತ್ಕೃಷ್ಟತೆಗೆ ಸಾಕ್ಷಿಯಾಗಿದೆ. ಆರೋಗ್ಯವಂತ ಹಸುವಿನ ಶುದ್ಧ ಗುಣಮಟ್ಟದ ಹಾಲನ್ನು ಮಾತ್ರ ಸಂಘವು ತೆಗೆದುಕೊಳ್ಳುತ್ತದೆ. ಕೆಚ್ಚಲು ಬಾವು ಇರುವ ಹಾಲನ್ನು ಸಂಘಕ್ಕೆ ಸರಬರಾಜು ಮಾಡಬಾರದು ಎಂದು ತಿಳಿಸಿದರು.

ಮೈಮುಲ್ ವಿಸ್ತರಣಾಧಿಕಾರಿ ಕೆ.ಎನ್. ಶ್ರುತಿ ಮಾತನಾಡಿ, ಹಾಲು ಹಿಂಡಲು ಮತ್ತು ಹಾಲನ್ನು ಸಂಘಕ್ಕೆ ತರಲು ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳನ್ನು ಬಳಸಿದರೆ ಬಹಳ ಒಳ್ಳೆಯದು. ಹಾಲು ಕರೆಯುವ ಮೊದಲು ಕೈಗಳನ್ನು ಸಾಬೂನಿನಿಂದ ತೊಳೆದುಕೊಂಡು ಕೆಚ್ಚಲನ್ನು ಶುದ್ಧ ನೀರಿನಿಂದ ತೊಳೆದು ಒಣ ಬಟ್ಟೆಯಿಂದ ಸ್ವಚ್ಛಗೊಳಿಸಬೇಕು ಎಂದರು.

ಕಾರ್ಯ ನಿರ್ವಹಣಾಧಿಕಾರಿ ಎಲ್. ನಂಜುಂಡಸ್ವಾಮಿ ಸಂಘದ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘವು ಪ್ರಸಕ್ತ ಸಾಲಿನಲ್ಲಿ ಸರ್ವ ಸದಸ್ಯರ ಸಹಕಾರದಿಂದ 1,34,992 ಲಕ್ಷ ರೂ. ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ಮುನ್ನಡೆದಿದೆ. ಸಂಘದ ಷೇರುದಾರರ ಬೇಡಿಕೆ ಹಿನ್ನೆಲೆಯಲ್ಲಿ ನಿವ್ವಳ ಲಾಭಾಂಶದಲ್ಲಿ 62 ಸಾವಿರ ರೂ.ಗಳ ಬೋನಸ್ ಅನ್ನು ಹಾಲು ಉತ್ಪಾದಕರಿಗೆ ಹಂಚಿಕೆ ಮಾಡಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಈ ವೇಳೆ ಸಂಘಕ್ಕೆ 7.19 ಲಕ್ಷ ರೂ.ಗಳ ಹಾಲು ಸರಬರಾಜು ಮಾಡಿದ ಕುಮಾರ, 2.76 ಲಕ್ಷ ರೂ.ಗಳ ಹಾಲು ಸರಬರಾಜು ಮಾಡಿದ ದೇವರಾಜು, 1.74 ಲಕ್ಷ ರೂ.ಗಳ ಹಾಲು ಸರಬರಾಜು ಮಾಡಿದ ನಾಗರತ್ನರಿಗೆ ಬಹುಮಾನ ನೀಡಿ ಗೌರವಿಸಲಾಯಿತು.

> "ಗ್ರಾಮದ ಹಾಲು ಉತ್ಪಾದಕರು ಹಾಲನ್ನು ಖಾಸಗಿ ಡೈರಿಗೆ ಹಾಕದೇ ಸಹಕಾರ ಸಂಘಕ್ಕೆ ನೀಡುವ ಮೂಲಕ ಉತ್ತಮ ಕಾರ್ಯ ಸಾಧನೆ ಮಾಡಿದ್ದು, ಪ್ರಶಂಸೆಗೆ ಅರ್ಹರಾಗಿದ್ದಾರೆ. ಹಲವು ಕಾರಣಗಳಿಂದ ಅಂದರೆ ಡೈರಿ ಮುಖ್ಯರಸ್ತೆಗೆ ಹೊಂದಿಕೊಂಡಿಲ್ಲವಾದ್ದರಿಂದ ಗ್ರಾಮದಲ್ಲಿ ಬಿಎಂಸಿ ಕೇಂದ್ರ ಮಾಡಲು ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಬಿಎಂಸಿ ಕೇಂದ್ರ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು.
> –ಓಂ ಪ್ರಕಾಶ್, ಮೈಮುಲ್ ನಿರ್ದೇಶಕ.

ಸಭೆ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಲಿಂಗರಾಜು ವಹಿಸಿದ್ದರು. ಉಪಾಧ್ಯಕ್ಷ ಬಸವರಾಜು, ನಿರ್ದೇಶಕರಾದ ಎನ್.ಎಸ್.ಸುದರ್ಶನ್ ಕುಮಾರ್, ಎನ್.ಎಸ್.ಚಂದ್ರಶೇಖರ್, ಮರಿಸ್ವಾಮಿ, ಎನ್.ಸಿ.ಕೃಷ್ಣಮೂರ್ತಿ, ಎನ್.ಎಂ.ಗೋಪಾಲರಾಜು, ದೇವರಾಜು, ನಾಗರಾಜ ನಾಯಕ, ಸುಬ್ಬಮ್ಮ, ಶಿವಮ್ಮ, ಮಹದೇವ, ಹಾಲು ಪರೀಕ್ಷಕ ನಾಗರಾಜು ಸೇರಿದಂತೆ ಷೇರುದಾರರು, ಹಾಲು ಉತ್ಪಾದಕರು ಹಾಜರಿದ್ದರು.

ಕಂಪಲಾಪುರ ಪಿಎಸಿಎಸ್‌ಗೆ 27.31 ಲಕ್ಷ ಲಾಭ



ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ಸಾಧಕರನ್ನು ಸನ್ಮಾನಿಸಲಾಯಿತು.

ಕಂಪಲಾಪುರ, ಸೆ.11– ಪ್ರಸಕ್ತ ಸಾಲಿನಲ್ಲಿ ಕಂಪಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 27.31 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎನ್.ಹರ್ಷ ತಿಳಿಸಿದರು.

ಗ್ರಾಮದ ಸಂಘದ ಆವರಣದಲ್ಲಿ ಗುರುವಾರ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ವಾರ್ಷಿಕ ವರದಿ ಮಂಡಿಸಿ ಮಾತನಾಡಿದ ಅವರು, ಸಂಘದಲ್ಲಿ ಒಟ್ಟು 1422 ಮಂದಿ ಷೇರುದಾರರಿದ್ದು, ಉತ್ತಮ ಲಾಭ ಗಳಿಸಿ ಮುನ್ನಡೆಯುತ್ತಿದೆ ಎಂದರು.

ಸಂಘಕ್ಕೆ ಬರಬೇಕಾದ ಹಣದ ಬಾಕಿ ವಸೂಲಿ ಬಗ್ಗೆ ಕೆಲ ಸದಸ್ಯರ ಪ್ರಶ್ನೆಗೆ ಉತ್ತರಿಸಿದ ಸಿಇಓ, 52 ಸದಸ್ಯರಿಂದ ಅಂದಾಜು 1.50 ಕೋಟಿ ರೂ. ಸಾಲ ವಸೂಲಿಯಾಗಬೇಕಿದೆ. ಈಗಾಗಲೇ ಅವರಿಗೆ ಸಾಲ ಮರುಪಾವತಿಸುವಂತೆ ನೋಟಿಸ್ ನೀಡಿ, ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಅಧ್ಯಕ್ಷ ಎಸ್.ಟಿ. ಮಹದೇವ್ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಉಪಾಧ್ಯಕ್ಷ ಬಿ.ಎಂ.ತಮ್ಮಯ್ಯ, ನಿರ್ದೇಶಕರಾದ ನಾಗೇಗೌಡ, ಕುಮಾರ್, ಸಂತೋಷ್, ರವಿ, ಕೆ.ಎಂ.ಲಕ್ಷ್ಮಣ್, ಪ್ರಕಾಶ್‌ಗೌಡ, ಮಹದೇವ್, ಮಣಿ ಮಹೇಶ್, ಭಾಗ್ಯ ರಾಜೇಗೌಡ, ಕೆ.ಎನ್.ಗಿರೀಶ್ ಸೇರಿದಂತೆ ಸದಸ್ಯರು, ಸಿಬ್ಬಂದಿ ಹಾಜರಿದ್ದರು.

ಮೈಸೂರು ಮಿತ್ರ

ಅರಣ್ಯ ಇಲಾಖೆ ಹುತಾತ್ಮರಿಗೆ ಶ್ರದ್ಧಾಂಜಲಿ

●ಇದುವರೆಗೆ ಕರ್ತವ್ಯದಲ್ಲಿದ್ದಾಗ ಮೈಸೂರು ಜಿಲ್ಲೆಯಲ್ಲಿ 62 ಮಂದಿ ಹುತಾತ್ಮರು ●ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿಯವರಿಂದ ರಿತ್ ಅರ್ಪಿಸಿ, ನಮನ





ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ಆವರಣದಲ್ಲಿ ಗುರುವಾರ ನಡೆದ 'ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನ'ದ ಅಂಗವಾಗಿ ಹುತಾತ್ಮರ ಸ್ಮಾರಕಕ್ಕೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ರಿತ್ ಇರಿಸಿ, ಶ್ರದ್ಧಾಂಜಲಿ ಸಲ್ಲಿಸಿದರು. ಹುತಾತ್ಮರ ಆತ್ಮಕ್ಕೆ ಶಾಂತಿಕೋರಿ ಸಿಬ್ಬಂದಿ ಮೌನಾಚರಣೆ

ಮೈಸೂರು, ಸೆ.11(ಎಂಟಿವೈ)– ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಹಿನ್ನೆಲೆಯಲ್ಲಿ ಗುರುವಾರ ಅರಣ್ಯ ಪ್ರದೇಶ ಹಾಗೂ ವನ್ಯಜೀವಿ ಸಂರಕ್ಷಣೆ ವೇಳೆ ಕರ್ತವ್ಯದಲ್ಲಿದ್ದಾಗಲೇ ಹುತಾತ್ಮರಾದ ಅರಣ್ಯ ಇಲಾಖೆಯ ಸಿಬ್ಬಂದಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ಆವರಣದಲ್ಲಿರುವ ಹುತಾತ್ಮರ ಸ್ಮಾರಕದ ಬಳಿ ಇಂದು ಬೆಳಗ್ಗೆ ಅರಣ್ಯ ಇಲಾಖೆ ಆಯೋಜಿಸಿದ್ದ 'ರಾಷ್ಟ್ರೀಯ ಹುತಾತ್ಮರ ದಿನಾಚರಣೆ' ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಡಳಿತದ ವತಿಯಿಂದ ಹುತಾತ್ಮ ಅರಣ್ಯ ಯೋಧರ ಸ್ಮರಣಾರ್ಥ ಹುತಾತ್ಮರ ಸ್ಮಾರಕಕ್ಕೆ ರಿತ್ ಅರ್ಪಿಸಿ, ಶ್ರದ್ಧಾಂಜಲಿ ಸಲ್ಲಿಸಿದರು.

ಇದೆ ವೇಳೆ ಹಿರಿಯ ಐಎಫ್‌ಎಸ್ ಅಧಿಕಾರಿಗಳಾದ ದಿ. ಶ್ರೀನಿವಾಸನ್, ದಿ. ಮಣಿಕಂದನ್ ಸೇರಿದಂತೆ ಕರ್ತವ್ಯದ ವೇಳೆ ವನ್ಯಜೀವಿ, ಕಾಡುಗಳ್ಳರ ದಾಳಿ ಸೇರಿದಂತೆ ವಿವಿಧ ಕಾರಣಗಳಿಂದ ಹುತಾತ್ಮರಾದ 62 ಹುತಾತ್ಮರ ಹೆಸರನ್ನು ಡಿಸಿಎಫ್ ಕೆ.ಪರಮೇಶ್ ಅವರು ವಾಚಿಸಿ, ಹುತಾತ್ಮರ ದಿನದ ವಿವರಣೆ ನೀಡಿದರು. ಬಳಿಕ ನಗರ ಸಶಸ್ತ್ರ ಮೀಸಲು ಪಡೆಯ ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ, ಹುತಾತ್ಮರಿಗೆ ಗೌರವ ಸಮರ್ಪಿಸಿದರು. ಇದೇ ವೇಳೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಹುತಾತ್ಮರ ಸ್ಮಾರಕಕ್ಕೆ ಹಿರಿಯ ಅರಣ್ಯಾಧಿಕಾರಿಗಳು ಪುಷ್ಪ ನಮನ ಸಲ್ಲಿಸಿದರು.

ಇದೇ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ ವೇಳೆ ಕರ್ತವ್ಯದಲ್ಲಿದ್ದಾಗಲೇ ಇದುವರೆಗೆ 62 ಮಂದಿ ಹುತಾತ್ಮರಾಗಿದ್ದಾರೆ. ಅವರ ತ್ಯಾಗಕ್ಕೆ ಬೆಲೆಕಟ್ಟಲಾಗದು. ಮುಂದಿನ ಪೀಳಿಗೆಗೆ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಿಸಿ ಕೊಡುಗೆ ನೀಡಲು ಅರಣ್ಯ ಸಿಬ್ಬಂದಿ ಶ್ರಮಿಸುತ್ತಿದ್ದಾರೆ. ಹುತಾತ್ಮರಾದ ಅರಣ್ಯ ಯೋಧರು ಅರಣ್ಯ ಸಂಪತ್ತನ್ನು ಸಂರಕ್ಷಿಸಲು ಹೋಗಿ ಪ್ರಾಣ ತೆತ್ತಿದ್ದಾರೆ. ಅವರ ತ್ಯಾಗದ ಮನೋಭಾವ, ಕರ್ತವ್ಯದ ಮೇಲಿನ ಬದ್ಧತೆ ಎಲ್ಲರಿಗೂ ಪ್ರೇರಣೆಯಾಗಿ ವನ್ಯ ಸಂಪತ್ತಿನ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಕರ್ತವ್ಯದ ವೇಳೆ ಎಚ್ಚರಿಕೆಯಿಂದ ಕೆಲಸ ನಿರ್ವಹಿಸಲು ಎಲ್ಲರೂ ಮುಂದಾಗಬೇಕು. ಯಾವುದೇ ಕಾರಣಕ್ಕೂ ಮೈಮರೆಯಬಾರದು. ಅರಣ್ಯ ಸಿಬ್ಬಂದಿ ಸೇವೆ ಮಹತ್ವದ್ದಾಗಿದ್ದು, ಈ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವೃತ್ತದ ಸಿಎಫ್ ಡಾ.ಎಸ್.ಎಸ್. ರವಿಶಂಕರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಿಸಿಪಿ ಸುಂದರರಾಜ್, ಕಾರ್ಯಯೋಜನೆ ಡಿಸಿಎಫ್ ಲಿಂಗರಾಜು, ಆರ್‌ಎಫ್‌ಓ ಸಂತೋಷ್ ಹೂಗಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ದಸರಾ ಹಿನ್ನೆಲೆ

ಆತಿಥ್ಯ ವಲಯದ ಪ್ರತಿನಿಧಿಗಳೊಂದಿಗೆ ಪೊಲೀಸ್ ಆಯುಕ್ತರ ಸಭೆ

ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಪೊಲೀಸರೊಂದಿಗೆ ಸಹಕರಿಸಲು ಸೂಚನೆ



ದಸರಾ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಗುರುವಾರ ಲಾಡ್ಜ್, ಹೋಟೆಲ್, ಸರ್ವೀಸ್ ಅಪಾರ್ಟ್‌ಮೆಂಟ್, ಪಿಜಿ ಮಾಲೀಕರು ಹಾಗೂ ವ್ಯವಸ್ಥಾಪಕರ ಸಭೆ ನಡೆಸಲಾಯಿತು.

ಮೈಸೂರು, ಸೆ.11– ದಸರಾ ಹಿನ್ನೆಲೆಯಲ್ಲಿ ಅಗತ್ಯ ಸುರಕ್ಷತಾ ಕ್ರಮ ವಹಿಸಲು ಆತಿಥ್ಯ ವಲಯದ ಪ್ರತಿನಿಧಿಗಳಿಗೆ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ನವರಾತ್ರಿ ಆರಂಭಕ್ಕೆ ದಿನಗಣನೆ ಆರಂಭವಾಗಿರುವುದರಿಂದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುರುವಾರ ನಗರದ ಹೋಟೆಲ್, ಲಾಡ್ಜ್‌ಗಳು, ಸರ್ವೀಸ್ ಅಪಾರ್ಟ್‌ಮೆಂಟ್ ಹಾಗೂ ಪಿಜಿಗಳ ಮಾಲೀಕರು ಹಾಗೂ ವ್ಯವಸ್ಥಾಪಕರ ಸಭೆ ನಡೆಸಿದ ಅವರು, ಅನೇಕ ಸಲಹೆ–ಸೂಚನೆ ನೀಡಿದರು.

ದಸರಾ ಮಹೋತ್ಸವಕ್ಕಾಗಿ ದೇಶ–ವಿದೇಶಗಳಿಂದ ಪ್ರವಾಸಿಗರು ಆಗಮಿಸುತ್ತಾರೆ. ಆದರೆ ಈ ಸಂದರ್ಭವನ್ನು ದುರುಪಯೋಗಪಡಿಸಿಕೊಳ್ಳುವವರು ಬರಬಹುದು. ಹಾಗಾಗಿ ಆತಿಥ್ಯ ವಲಯದಲ್ಲಿ ತುಂಬಾ ಎಚ್ಚರಿಕೆ ವಹಿಸಬೇಕು. ಪ್ರವಾಸಿಗರ ಸುರಕ್ಷತೆ ಹಾಗೂ ಭದ್ರತೆ ದೃಷ್ಟಿಯಿಂದ ಪೊಲೀಸರಿಗೆ ಸಹಕರಿಸಬೇಕು. ಅನುಮಾನಾಸ್ಪದ ವ್ಯಕ್ತಿಗಳ ಮೇಲೆ ನಿಗಾ ಇಡಬೇಕು. ತಡ ಮಾಡದೆ ಪೊಲೀಸರಿಗೆ ಮಾಹಿತಿ ನೀಡಬೇಕು. ಸಿಸಿಟಿವಿ ಕ್ಯಾಮರಾಗಳು ಸುಸ್ಥಿತಿಯಲ್ಲಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ವಾಸ್ತವ್ಯ ಇರುವವರ ವಿವರವನ್ನು ಕಡ್ಡಾಯವಾಗಿ ದಾಖಲಿಸಿ, ಅವರ ಮೊಬೈಲ್ ಸಂಖ್ಯೆ ಚಾಲ್ತಿಯಲ್ಲಿರುವುದನ್ನು ಖಚಿತಪಡಿಸಿಕೊಂಡು ನಮೂದಿಸಬೇಕು. ಈ ವಿವರವನ್ನು ಪೊಲೀಸ್ ಇಲಾಖೆಗೆ ನೀಡಿ, ಕಾನೂನು–ಸುವ್ಯವಸ್ಥೆ ರಕ್ಷಣೆಗೆ ಕೈಜೋಡಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಡಿಸಿಪಿಗಳಾದ ಬಿಂದುಮಣಿ, ಸುಂದರ್‌ರಾಜ್, ಎಸಿಪಿಗಳು, ವಿವಿಧ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳು, ಸಬ್‌ಇನ್ಸ್‌ಪೆಕ್ಟರ್‌ಗಳು, ಹಲವು ಲಾಡ್ಜ್, ಹೋಟೆಲ್, ಸರ್ವೀಸ್ ಅಪಾರ್ಟ್‌ಮೆಂಟ್ ಮಾಲೀಕರು ಹಾಗೂ ವ್ಯವಸ್ಥಾಪಕರು ಭಾಗವಹಿಸಿದ್ದರು.

ಮದ್ದೂರು 'ಗಣೇಶ' ಗಲಾಟೆಗೆ ಸಚಿವ ಚಲುವರಾಯಸ್ವಾಮಿ ಕುತಂತ್ರವೇ ಕಾರಣ

●ಮಾಜಿ ಸಂಸದ ಪ್ರತಾಪ್ ಸಿಂಹ ಗಂಭೀರ ಆರೋಪ ●ಮಂಡ್ಯ ಉಸ್ತುವಾರಿ ಸಚಿವರಾದ ಮೇಲೆ ಮುಸ್ಲಿಂರ ಎತ್ತಿ ಕಟ್ಟುತ್ತಿದ್ದಾರೆ

ಮೈಸೂರು, ಸೆ.11(ಎಂಕೆ)– ಮದ್ದೂರು ಗಣಪತಿ ಗಲಾಟೆಗೆ ಸಚಿವ ಚಲುವರಾಯಸ್ವಾಮಿ ಕುತಂತ್ರವೇ ಕಾರಣ. ಅವರೇ ಮುಸಲ್ಮಾನರನ್ನು ಎತ್ತಿಕಟ್ಟುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪಿಸಿದರು.



ಪ್ರತಾಪ್ ಸಿಂಹ

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗುರುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಚಲುವರಾಯಸ್ವಾಮಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ನಂತರವೇ ಕೆರೆಗೋಡಿನಲ್ಲಿ ತ್ರಿವರ್ಣ ಧ್ವಜವನ್ನು ಕೆಳಗಿಳಿಸುವ ಕೆಲಸವಾಯಿತು. ನಾಗಮಂಗಲದಲ್ಲಿ ಗಣೇಶೋತ್ಸವದ ಮೇಲೆ ಕಲ್ಲು ತೂರಾಟ ನಡೆದು, ಗಣೇಶ ಮೂರ್ತಿಯನ್ನು ಪೊಲೀಸ್ ವಾಹನದಲ್ಲಿ ತೆಗೆದುಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಹಿಂದೂಗಳ ಅಂಗಡಿಗಳಿಗೆ ಬೆಂಕಿ ಹಾಕಲಾಗಿತ್ತು. ಹಾಗಾಗಿ ಚಲುವರಾಯಸ್ವಾಮಿ ಬಂದೇ ಇವತ್ತು ಮದ್ದೂರಿನಲ್ಲಿ ಈ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

ಮಂಡ್ಯ ಜಿಲ್ಲೆ ಜೆಡಿಎಸ್ ಭದ್ರನೆಲೆಯಾಗಿದ್ದು, ಈ ಹಿಂದಿನ ಜೆಡಿಎಸ್ ಶಾಸಕರುಗಳಿದ್ದಾಗ ಇಂತಹ ಒಂದೇ ಒಂದು ಘಟನೆಯೂ ನಡೆದಿಲ್ಲ. ತಮ್ಮ ಸಾಮ್ರಾಜ್ಯ ಸ್ಥಾಪಿಸಲು ಮುಸಲ್ಮಾನರನ್ನು ಎತ್ತಿಕಟ್ಟುವ ಕುತಂತ್ರ ನಡೆಸುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯದಲ್ಲಾಗುತ್ತಿರುವ ಗಲಭೆಗಳಿಗೆ ಅಮಿತ್ ಶಾ ಷಡ್ಯಂತರ ಹೇಳಿಕೆಗೆ ಪ್ರತಿಕ್ರಿಯಿಸಿ, ಅಮಿತ್ ಶಾ ಅವರಂತಹ ಸಮರ್ಥ ಗೃಹ ಸಚಿವರು ಇರುವುದಕ್ಕಾಗಿಯೇ ನೇಪಾಳ, ಪಾಕಿಸ್ತಾನ, ಶ್ರೀಲಂಕಾ ಮತ್ತು ಬಾಂಗ್ಲಾದೇಶದ ಪರಿಸ್ಥಿತಿ ಭಾರತದಲ್ಲಿ ಸೃಷ್ಟಿಯಾಗಿಲ್ಲ. ಜೊತೆಗೆ ದೇಶವನ್ನು ರಕ್ಷಣೆ ಮಾಡಲು ಮೋದಿಯವರಿದ್ದಾರೆ. ಒಂದು ವೇಳೆ ಅವರಿಬ್ಬರು ಇಲ್ಲವಾಗಿದ್ದರೆ ಕಾಂಗ್ರೆಸ್‌ನವರು ಅದನ್ನೇ ಮಾಡುತ್ತಿದ್ದರು ಎಂದು ಚಾಟಿ ಬೀಸಿದರು.

ಕಾಂಗ್ರೆಸ್ಸಿಗರಿಗೆ ಎಬಿವಿಪಿ ಮೇಲೆ ಗೌರವವಿದೆ!: ಗೃಹ ಸಚಿವ ಡಾ.ಪರಮೇಶ್ವರ್ ಎಬಿವಿಪಿ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಕುರಿತು ಪ್ರತಿಕ್ರಿಯಿಸಿದ ಪ್ರತಾಪ್ ಸಿಂಹ, ಕಾಂಗ್ರೆಸ್‌ನ ಎಷ್ಟೋ ನಾಯಕರು ಆರ್‌ಎಸ್‌ಎಸ್ ಶಾಖೆಗೆ ಹೋಗಿದ್ದಾರೆ. ಅಲ್ಲಿಂದಲೇ ಅವರ ನೇಚರ್ ಪ್ರಾರಂಭವಾಗಿದೆ. ಆರ್‌ಎಸ್‌ಎಸ್ ದೇಶಕಟ್ಟುವ ಕಾರ್ಯದಲ್ಲಿ ತೊಡಗಿದೆ ಎಂಬುದು ಕಾಂಗ್ರೆಸ್‌ನ ಬಹಳ ಮಂದಿಗೆ ಗೊತ್ತು. ಆದರೆ, ಪಕ್ಷದ ವಿರೋಧವಾಗಿ ಮಾಧ್ಯಮಗಳ ಮುಂದೆ ಮಾತನಾಡುತ್ತಿಲ್ಲವಷ್ಟೇ ಎಂದರು.

ಗುಜರಾತ್‌ನ ಇಬ್ಬರು ದೇಶದ ಜನರ ವಿಭಜಿಸುತ್ತಿದ್ದಾರೆ: ಖರ್ಗೆ ಹೇಳಿಕೆಗೆ ಬಿಜೆಪಿ ಖಂಡನೆ



ಬಿಜೆಪಿ ಕಚೇರಿಯಲ್ಲಿ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಗುರುವಾರ ಪತ್ರಿಕಾಗೋಷ್ಠಿ ನಡೆಸಿದರು.

ಮೈಸೂರು, ಸೆ.11(ಎಂಕೆ)– ಗುಜರಾತ್‌ನ ಇಬ್ಬರು ದೇಶದ ಜನರನ್ನು ವಿಭಜಿಸುವ ಕೆಲಸ ಮಾಡುತ್ತಿದ್ದಾರೆ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯನ್ನು ಬಿಜೆಪಿ ತೀವ್ರವಾಗಿ ಖಂಡಿಸುತ್ತದೆ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಆಕ್ಷೇಪಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ಜಗತ್ತೇ ಪ್ರಧಾನಿ ಮೋದಿಯವರ ನಾಯಕತ್ವವನ್ನು ಕೊಂಡಾಡುತ್ತಿದ್ದು, ಅವರ ನಾಯಕತ್ವವನ್ನು ದೇಶವೇ ಒಪ್ಪಿಕೊಂಡಿದೆ. ಅಂತಹದರಲ್ಲಿ ಖರ್ಗೆಯವರು ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ಅವರಿಂದ ದೇಶ ವಿಭಜನೆಯಾಗುತ್ತಿದೆ ಎಂಬ ಹೇಳಿಕೆ ಖಂಡನೀಯ ಎಂದು ಕಿಡಿಕಾರಿದರು.


ಇತ್ತೀಚೆಗೆ ಮಲ್ಲಿಕಾರ್ಜುನ ಖರ್ಗೆ ಅವರು ನೀಡುತ್ತಿರುವ ಹೇಳಿಕೆಗಳನ್ನು ಗಮನಿಸುತ್ತಿದ್ದರೆ, ಅವರಿಗೆ ಮತಿ ಭ್ರಮಣೆಯಾಗಿರುವಂತಿದೆ. ಸ್ವಾತಂತ್ರ್ಯ ಸಂದರ್ಭದಲ್ಲಿ ಈ ದೇಶವನ್ನು ವಿಭಜನೆ ಮಾಡಿದ್ದೇ ಕಾಂಗ್ರೆಸ್. ದೇಶದ ಭಾಗವಾಗಿರುವ ಗುಜರಾತ್ ಬಗ್ಗೆ ಖರ್ಗೆ ಅವರ ಹೇಳಿಕೆಗಳು ಸರಿಯಲ್ಲ. ಅವರ ಹೇಳಿಕೆಯನ್ನು ಬಿಜೆಪಿ ತೀವ್ರವಾಗಿ ಖಂಡಿಸಲಿದೆ ಎಂದರು.

ಲಕ್ಷ್ಮಣ್ ಮಾನಸಿಕ ರೋಗಿ: ರಾಜ್ಯದಲ್ಲಿ ಕೋಮು ಗಲಭೆ ಸೃಷ್ಟಿಯಾಗುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಷಡ್ಯಂತರ ರೂಪಿಸುತ್ತಿದ್ದಾರೆ ಎಂದು ಹೇಳಿಕೆ ನೀಡಿರುವ ಕಾಂಗ್ರೆಸ್ ವಕ್ತಾರ ಲಕ್ಷ್ಮಣ್, ಓರ್ವ ಮಾನಸಿಕ ರೋಗಿ. ಇಂತಹವರನ್ನು ಕಾಂಗ್ರೆಸ್ ವಕ್ತಾರರನ್ನಾಗಿ ನೇಮಿಸಿದೆ ಎಂದು ವ್ಯಂಗ್ಯವಾಡಿದರಲ್ಲದೆ ಇಂತಹವರಿಗಾಗಿ ಬಿಜೆಪಿ ಮಾನಸಿಕ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸುವ ಕೆಲಸ ಮಾಡಬೇಕಿದೆ. ನೆಲೆ ವಿಸ್ತರಣೆಗೆ ಕೋಮು ಗಲಭೆ ಮಾಡಿಸುವ ಅವಶ್ಯಕತೆ ಬಿಜೆಪಿಗೆ ಇಲ್ಲ ಎಂದು ಹರಿಹಾಯ್ದರು.

ಸದನದಲ್ಲಿ ಆರ್‌ಎಸ್‌ಎಸ್ ಗೀತೆ ಹಾಡಿದ ಡಿಸಿಎಂ ಕ್ಷಮೆಯಾಚನೆ ಕುರಿತು ಪ್ರತಿಕ್ರಿಯಿಸಿ, ತಾಯಿಯನ್ನು ವಂದಿಸಿ, ಕ್ಷಮೆ ಕೇಳುವುದು ಎಷ್ಟು ಸರಿ. ತಾಯಿನಾಡನ್ನು ಹೊಗಳಿ ಕ್ಷಮೆ ಕೇಳುತ್ತಾರೆ ಎಂದರೆ, ಕಾಂಗ್ರೆಸ್ ಪಕ್ಷದಲ್ಲಿ ಅವರ ದಯನೀಯ ಪರಿಸ್ಥಿತಿ ಹೇಗಿದೆ ಎಂಬುದು ಎಲ್ಲರಿಗೂ ಅರ್ಥವಾಗುತ್ತದೆ ಎಂದು ಕಾಲೆಳೆದರು.

ಮೃಗಾಲಯ ಪ್ರಾಧಿಕಾರ ಮಾಜಿ ಅಧ್ಯಕ್ಷ ಶಿವಕುಮಾರ್, ಮಹಿಳಾ ಮೋರ್ಚಾ ಮುಖಂಡರಾದ ರೇಣುಕಾ ರಾಜು, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಸಹ ಸಂಚಾಲಕ ಬಿ.ಎಂ.ಸಂತೋಷ್ ಕುಮಾರ್, ಮಹಿಳಾ ಮೋರ್ಚಾ ನಗರ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ರಶ್ಮಿ ಉಪಸ್ಥಿತರಿದ್ದರು.

ಸುತ್ತೂರು ಶ್ರೀಗಳಿಂದ ರಾಷ್ಟ್ರಪತಿ ಭೇಟಿ



ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, ಸ್ಮರಣಿಕೆ ನೀಡಿ ಗೌರವಿಸಿದರು. ಈ ವೇಳೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಡಾ. ಸುರೇಶ್, ಚಿನ್ನಪ್ಪ ಇನ್ನಿತರರಿದ್ದರು.

ಛತ್ತೀಸ್‌ಗಢ: ನಾರಾಯಣಪುರದಲ್ಲಿ 16 ನಕ್ಸಲರು ಪೊಲೀಸರಿಗೆ ಶರಣು

ನಾರಾಯಣಪುರ: ಛತ್ತೀಸ್‌ಗಢದ ನಾರಾಯಣಪುರ ಜಿಲ್ಲೆಯಲ್ಲಿ 16 ನಕ್ಸಲರು ಶರಣಾಗಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. ಬುಧವಾರ ಸಂಜೆ ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ 16 ಮಾವೋವಾದಿಗಳು ಶರಣಾಗಿದ್ದಾರೆ. ಟೊಳ್ಳು ಮಾವೋವಾದಿ ಸಿದ್ಧಾಂತ, ಮುಗ್ಧ ಬುಡಕಟ್ಟು ಜನಾಂಗದವರ ಮೇಲೆ ನಕ್ಸಲರು ನಡೆಸಿದ ದೌರ್ಜನ್ಯಗಳು ಮತ್ತು ನಿಷೇಧಿತ ಸಂಘಟನೆಯಲ್ಲಿ ಹೆಚ್ಚುತ್ತಿರುವ ಆಂತರಿಕ ಭಿನ್ನಾಭಿಪ್ರಾಯಗಳಿಂದ ಅವರು ನಿರಾಶೆಗೊಂಡಿದ್ದಾರೆ ಎಂದು ನಾರಾಯಣಪುರ ಪೊಲೀಸ್ ವರಿಷ್ಠಾಧಿಕಾರಿ ರಾಬಿನ್ಸನ್ ಗುರಿಯಾ ತಿಳಿಸಿದ್ದಾರೆ.

ಎಲ್ಲಾ 16 ನಕ್ಸಲರು ಜನತಾನ ಸರ್ಕಾರ್, ಚೇತನ ನಾಟ್ಯ ಮಂಡಳಿ ಮತ್ತು ಮಾವೋವಾದಿಗಳ ಪಂಚಾಯತ್ ಮಿಲಿಟಿಯಾ ಸದಸ್ಯರು ಸೇರಿದಂತೆ ವಿವಿಧ ಘಟಕಗಳಿಗೆ ಸೇರಿದ ಕೆಳ ಹಂತದ ನಕ್ಸಲರು ಶರಣಾಗಿದ್ದಾರೆ. ವಿಚಾರಣೆ ವೇಳೆ ಉನ್ನತ ಮಾವೋವಾದಿ ನಾಯಕರು ಬುಡಕಟ್ಟು ಜನಾಂಗದವರ ನಿಜವಾದ ಶತ್ರುಗಳು ಎಂದು ಶರಣಾದ ನಕ್ಸಲರು ಪೊಲೀಸರಿಗೆ ತಿಳಿಸಿದ್ದಾರೆ ಎಂದು ಅಧಿಕಾರಿ ಹೇಳಿದ್ದಾರೆ.

ಹೊರರಾಜ್ಯದವರಿಗೆ ಕ್ಷೌರಿಕ ವೃತ್ತಿಗೆ ಅನುಮತಿ ನೀಡದಂತೆ ಆಗ್ರಹಿಸಿ ಡಿಸಿಗೆ ಸವಿತಾ ಸಮಾಜ ಮನವಿ

ಮೈಸೂರು, ಸೆ.11(ಎಂಕೆ)– ಹೊರರಾಜ್ಯದಿಂದ ಬಂದು ರಾಜ್ಯದಲ್ಲಿ ಕ್ಷೌರಿಕ ವೃತ್ತಿ ಮಾಡುವವರು ಹಾಗೂ ಬಂಡವಾಳಶಾಹಿಗಳಿಗೆ ಲೈಸೆನ್ಸ್ ನೀಡುವುದನ್ನು ಕೂಡಲೇ ನಿಲ್ಲಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೈಸೂರು ಜಿಲ್ಲಾ ಸವಿತಾ ಸಮಾಜದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಶತಮಾನಗಳಿಂದ ಕುಲ ಕಸುಬಾದ ಕ್ಷೌರಿಕ ವೃತ್ತಿಯನ್ನೇ ಮಾಡಿಕೊಂಡು ಬರುತ್ತಿದ್ದು, ಇತ್ತೀಚೆಗಿನ ವರ್ಷಗಳಲ್ಲಿ ವಾರದಲ್ಲಿ 3 ದಿನವಷ್ಟೇ ಗ್ರಾಹಕರು ಬರಲಿದ್ದು, ಉಳಿದ ದಿನಗಳ ಬರಿಗೈಯಲ್ಲಿ ಮನೆಗೆ ಹೋಗಬೇಕು. ಇಂತಹ ಆರ್ಥಿಕ ಸಂದಿಗ್ಧ ಪರಿಸ್ಥಿತಿಯಲ್ಲಿ ಹೊರರಾಜ್ಯದವರು ಹಾಗೂ ಬಂಡವಾಳಶಾಹಿಗಳು ಸಲೂನ್‌ಗಳನ್ನು ತೆರೆಯುತ್ತಿರುವುದರಿಂದ ಮೂಲ ವೃತ್ತಿದಾರರಿಗೆ ಇನ್ನಷ್ಟು ಕಷ್ಟವಾಗುತ್ತಿದೆ.

ಆದ್ದರಿಂದ ಹೊರ ರಾಜ್ಯದವರು ಮತ್ತು ಬಂಡವಾಳಶಾಹಿಗಳಿಗೆ ಸಲೂನ್ ತೆರೆಯಲು ಅನುಮತಿ ನೀಡಬಾರದು. ಹಾಗೆಯೇ ಸವಿತಾ ಸಮಾಜವನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಬೇಕು. ಬಡವರಿಗೆ ನಿವೇಶನಗಳನ್ನು ನೀಡಬೇಕು. ಹಜಾಮ ಪದ ಬಳಸಿದವರ ವಿರುದ್ಧ ಅಟ್ರಾಸಿಟಿ ಕೇಸ್ ಹಾಕುವಂತೆ ಕಾನೂನು ಜಾರಿಗೊಳಿಸಬೇಕು ಎಂದು ಮನವಿ ಮಾಡಲಾಯಿತು.



ವಿವಿಧ ಬೇಡಿಕೆ ಈಡೇರಿಕೆಗೆ ಮೈಸೂರು ಜಿಲ್ಲಾ ಸವಿತಾ ಸಮಾಜದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಮೈಸೂರು ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎ.ಎಂ.ನಾಗರಾಜು, ಎಂ.ರಮೇಶ್, ಶ್ರೀಧರ್ ಮತ್ತಿತರರಿದ್ದರು.

ಅವೈಜ್ಞಾನಿಕವಾಗಿ ಅಳವಡಿಸಿದ್ದ ಕಂಬಗಳ ತೆರವು

ಮೈಸೂರು,ಸೆ.11(ಪಿಎಂ)–ವಿದ್ಯುತ್ ದೀಪಾಲಂಕಾರಕ್ಕಾಗಿ ರಸ್ತೆಯಲ್ಲಿಯೇ ಅವೈಜ್ಞಾನಿಕವಾಗಿ ಅಳವಡಿಸಿದ್ದ 3 ಕಬ್ಬಿಣದ ಕಂಬಗಳನ್ನು ತೆರವುಗೊಳಿಸಲಾಗಿದೆ. ಮೈಸೂರಿನ ಬೋಗಾದಿ ರಸ್ತೆಯಲ್ಲಿ (ಕ್ರಾಫರ್ಡ್ ಭವನ ಪಕ್ಕದ ರಸ್ತೆ) ಈ ರೀತಿಯಲ್ಲಿ ಅಳವಡಿಸಿದ್ದ ಕಂಬಗಳಿಂದ ಅನೇಕ ವಾಹನ ಸವಾರರು ಅಪಘಾತಕ್ಕೀಡಾಗಿ ಗಾಯಗೊಂಡಿದ್ದರು. ಈ ಸಂಬಂಧ 'ಮೈಸೂರು ಮಿತ್ರ'ನಲ್ಲಿ ಚಿತ್ರಸಹಿತ ಸುದ್ದಿ ಪ್ರಕಟಿಸಿ, ಸಂಬಂಧಿಸಿದವರು ಗಮನ ಸೆಳೆಯಲಾಗಿತ್ತು.




ರಾಜ್ಯ ಶಿಕ್ಷಣ ನೀತಿಯಲ್ಲಿ ತಂತ್ರಜ್ಞಾನ ಜೊತೆಗೆ ಕೌಶಲಾಧಾರಿತ ತಂತ್ರಗಳ ಬಳಕೆಗೆ ಸಲಹೆ

ಸಸ್ಯಶಾಸ್ತ್ರ ಸಂಬಂಧ ರಾಷ್ಟ್ರೀಯ ಸಮ್ಮೇಳನದಲ್ಲಿ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷ ಎಸ್.ಆರ್.ನಿರಂಜನ್ ವಿವರಣೆ

ಮೈಸೂರು, ಸೆ.11(ಎಂಕೆ)– ರಾಜ್ಯ ಶಿಕ್ಷಣ ನೀತಿಯಲ್ಲಿ ತಂತ್ರಜ್ಞಾನದ ಸದ್ಬಳಕೆಯ ಜೊತೆಗೆ ಕೌಶಲಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಕರ್ನಾಟಕ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷ ಎಸ್.ಆರ್.ನಿರಂಜನ್ ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ 'ಸಸ್ಯಶಾಸ್ತ್ರದಲ್ಲಿ ಹೊಸ ಆಯಾಮಗಳು ಮತ್ತು ಸೈಟೋಲಜಿ ಮತ್ತು ಜೆನೆಟಿಕ್ಸ್' ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಇಂದಿನ ಯುವ ಸಮೂಹದ ಶ್ರೇಯೋಭಿವೃದ್ಧಿಗಾಗಿ ರಾಜ್ಯ ಸರ್ಕಾರ ಬದ್ಧವಾಗಿದ್ದು, ರಾಜ್ಯ ಶಿಕ್ಷಣ ನೀತಿಯಲ್ಲಿ ಕೌಶಲಾಧಾರಿತ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಡಲಾಗಿದೆ ಎಂದರು.

ಪದವಿ ವಿದ್ಯಾರ್ಥಿಗಳು ಮೂರು ವಿಷಯಗಳ ಜೊತೆಗೆ ಮತ್ತೊಂದು ವಿಷಯ(ಓಪನ್ ಎಲೆಕ್ಟಿವ್)ವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಹಾಗೆಯೇ ಸಸ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿಯೂ ಕಲಿಕೆ, ಕೌಶಲತೆ ಜೊತೆಗೆ ಹೆಚ್ಚೆಚ್ಚು ಸಂಶೋಧನೆಗಳಾಗಬೇಕು ಎಂದು ತಿಳಿಸಿದರು.



ಮೈಸೂರು ವಿವಿ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ 'ಸಸ್ಯಶಾಸ್ತ್ರದಲ್ಲಿ ಹೊಸ ಆಯಾಮಗಳು ಮತ್ತು ಸೈಟೋಲಜಿ ಮತ್ತು ಜೆನೆಟಿಕ್ಸ್' ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಕರ್ನಾಟಕ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷ ಎಸ್.ಆರ್.ನಿರಂಜನ್ ಉದ್ಘಾಟಿಸಿದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮತ್ತಿತರರಿದ್ದರು.

ಸ್ವಾತಂತ್ರ್ಯ ನಂತರ ದೇಶದ ಸವಾಲುಗಳಾಗಿದ್ದ ಬಡತನ, ನಿರುದ್ಯೋಗ ಹಾಗೂ ಆಹಾರ ಕೊರತೆ ನೀಗಿಸಲು ಸಸ್ಯಶಾಸ್ತ್ರ ಮಹತ್ವದ ಕೊಡುಗೆ ನೀಡಿದೆ. ಹಸಿರು ಕ್ರಾಂತಿಯ ಮೂಲಕ ಆಹಾರದ ಕೊರತೆಯನ್ನು ಬಗೆಹರಿಸಲಾಗಿದೆ. ಹಾಗೆಯೇ ಶಿಕ್ಷಣ ವ್ಯವಸ್ಥೆಯೂ ಹಂತ ಹಂತವಾಗಿ ಬೆಳೆದಿದ್ದು, ದೇಶದಲ್ಲಿಂದು ಸಾವಿರಾರು ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಮಹತ್ತರ ಸೇವೆ ನೀಡುತ್ತಿವೆ ಎಂದು ಶ್ಲಾಘಿಸಿದರು.

ಸಮ್ಮೇಳನ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಸಹಯೋಗ ಮತ್ತು ಸಹಕಾರದೊಂದಿಗೆ ಸಂಶೋಧನೆಗಳು ಹೆಚ್ಚಾಗಬೇಕು. ಬದಲಾಗುತ್ತಿರುವ ಜಗತ್ತಿನಲ್ಲಿ ತಂತ್ರಜ್ಞಾನವೂ ಬದಲಾಗುತ್ತಿದ್ದು, ಸಂದರ್ಭಕ್ಕೆ ಅನುಗುಣವಾಗಿ ಕಲಿಕೆಯಲ್ಲಿಯೂ ಬದಲಾವಣೆಯಾಗಬೇಕು. ನಾವು ಕೂಡ ಹುದ್ದೆಗಳನ್ನು ಪಡೆಯುವ ನಿಟ್ಟಿನಲ್ಲಿ ಹೊಂದಾಣಿಕೆ ಮಾಡಿಕೊಂಡು ಅಧ್ಯಯನ ನಡೆಸಬೇಕು. ಎಪಿಜೆ ಅಬ್ದುಲ್ ಕಲಾಂ ಅವರು ಹೇಳುವಂತೆ ಎಕ್ಸಲೆನ್ಸ್ ಆಗಬೇಕಾದರೆ ಸಮಯ ತೆಗೆದುಕೊಳ್ಳುತ್ತದೆ. ಸಕ್ಸಸ್ ಎಂಬುದು ಎಸ್ಕಲೇಟರ್ ಮೂಲಕ ಬರಲ್ಲ. ಮೆಟ್ಟಿಲುಗಳನ್ನು ಹತ್ತಿಯೇ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಭಾರತದ ಸೈಟಾಲಜಿಸ್ಟ್‌ಗಳು ಮತ್ತು ತಳಿಶಾಸ್ತ್ರಜ್ಞರ ಸಮಾಜದ ಅಧ್ಯಕ್ಷ ಪ್ರೊ. ರಾಕೇಶ್ ಸಿ.ವರ್ಮಾ, ಉಪಾಧ್ಯಕ್ಷ ಪ್ರೊ.ಬಿ.ಎಂ.ಹೆಚ್.ನಿಜಲಿಂಗಪ್ಪ, ಕಾರ್ಯದರ್ಶಿ ಪ್ರೊ.ಎಂ.ಸಿ.ಗಾಯತ್ರಿ, ಜಂಟಿ ಕಾರ್ಯದರ್ಶಿ ಪ್ರೊ.ಎಲ್.ರಾಜಣ್ಣ, ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ರಾಜ್‌ಕುಮಾರ್ ಹೆಚ್.ಗರಂಪಳ್ಳಿ ಮತ್ತಿತರರಿದ್ದರು.

ಮೈಸೂರು ಮಾನ್ಸೂನ್ ರೇಸ್

4ನೇ ದಿನ, ಶುಕ್ರವಾರ, 12–09–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ಪ್ಯಾಡಕ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್) ಮ.2.30ಕ್ಕೆ
1 ವಾರಿಯರ್ ವುಮನ್ 2. ಅಡ್ಮಿರಲ್ 3. ಸೆಡೆಕ್ಟೀವ್

II. ಸಿಕೆಂದ್ರಬಾದ್ ಪ್ಲೇಟ್–1100 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1 ಚಿರಾಗ್ 2. ರ್‍ಯಾಫಲ್ಸ್ 3. ಬಾರ್ ಬನ್ ಬಾಯ್

III. ಪೊಲೀಸ್ ಟ್ರೋಫಿ–1200 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್) ಮ.3.30ಕ್ಕೆ
1 ಕ್ರಿಯೆಟೀವ್ ಗರ್ಲ್ 2 ಶರೂಕ್ 3. ಫಾಲ್ಕನ್ ಫ್ಯೂರಿ

IV. ಎಫ್.ಕೆ.ಇರಾಣಿ ಮೆಮೋರಿಯಲ್ ಮಿಲಿಯನ್–1200 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಮ್ಯಾಗ್ನೆಟಾರ್ 2. ಸ್ಪ್ಲೆಂಡಿಡ್ ಡ್ರೀಮ್ 3. ಮಿಡ್‌ನೈಟ್ ಬ್ಲೂ

V. ಎಂ.ಡಬ್ಲ್ಯೂ.ಚಿನ್ನಪ್ಪ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1 ನ್ಯಾಟಿ ಬ್ಲಶ್ 2. ಜರ್ಸಿ ಕಿಂಗ್ 3. ಸೆರೋನಾ

VI. ಜೋಗ್‌ಫಾಲ್ಸ್ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಟೋಲ್ ಕಿನ್ 2. ಸುಪ್ರೀಮ್ ಸಕ್ಸಸ್ 3. ಥ್ರಿಲ್ ಆಫ್ ಬ್ರೆಥಿಲ್

ದಿನದ ಅತ್ಯುತ್ತಮ	: ಮ್ಯಾಗ್ನೆಟಾರ್
ಡಬ್ಬಲ್	: ಚಿರಾಗ್, ಟೋಲ್ ಕಿನ್
ಜಾಕ್‌ಪಾಟ್	: 2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	: 3, 4, 5 ಮತ್ತು 6
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 4, 5 ಮತ್ತು 6
ಎಕ್ಸ್‌ಆಕ್ಟ್	: 1 ರಿಂದ 6

ಟಿಪ್‌ಸ್ಟರ್ ಪಿಜಿಸಿ

ಜಯಮ್ಮ ನಿಧನ



ಮೈಸೂರು, ಸೆ.11–ಮೈಸೂರಿನ ವಿಜಯನಗರ ಮೊದಲನೇ ಹಂತದ ನಿವಾಸಿ ಎಲ್‌ಐಸಿ ನಿವೃತ್ತ ಮ್ಯಾನೇಜರ್ ದಿವಂಗತ ಎಂ.ಮಲ್ಲಪ್ಪ ಅವರ ಪತ್ನಿ ಜಯಮ್ಮ (75) ಇಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ನಾಳೆ(ಸೆ.12) ಮಧ್ಯಾಹ್ನ 12 ಗಂಟೆಗೆ ಲಲಿತಾದ್ರಿಪುರಂನಲ್ಲಿರುವ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

40ನೇ ವರ್ಷದ ಚಿರಸ್ಮರಣೆ



ಲೇಟ್ ಶ್ರೀಮತಿ ಶಂಕರಮ್ಮ
ಒಂಟಿಕೊಪ್ಪಲ್, ಮೈಸೂರು

ನಿಮ್ಮ ದಿವ್ಯ ಜ್ಯೋತಿಯ ಬೆಳಕಿನಲ್ಲಿ ಸಂಸ್ಕಾರವೆಂಭ ದಾರಿಯಲ್ಲಿ ನಿಮ್ಮ ಸ್ಮರಣೆಯಲ್ಲೇ ಸಾಗುತ್ತಿರುವ

ನಿಮ್ಮ ಮಗ, ಸೊಸೆ, ಮತ್ತು ಮೊಮ್ಮಗ ಮೊಮ್ಮಗಳು ಹಾಗೂ ನಿಮ್ಮ ಪ್ರೀತಿಯ ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗ







Change of Name

I, HASEEN TAJ, residing at # 1246, Mysore Road, Ya Allah Masjid, Naga Mangala Town and Taluk, Mandya District, Karnataka State, I have Changed my name from MAQBOOL AHAMED KHAN HASEEN TAJ to HASEEN TAJ Vide Affidavit Sworn Before Notary MAHADEVA On11/09/2025,
Sd/- Haseen Taj

ಸ್ಥಾಪನೆ:1983 ದೂರವಾಣಿ ಸಂಖ್ಯೆ: 0821–2422127

ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ.,

ನಂ.361/1, ಸಿ.ಹೆಚ್–15, ಡಿ.ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು–24

ಈ ಸೊಸೈಟಿಯ 2024–2025ನೇ ಸಾಲಿನ 43ನೇ ವಾರ್ಷಿಕ ಮಹಾಸಭೆಯನ್ನು ಸೆಪ್ಟೆಂಬರ್ ಮಾಹೆ ದಿನಾಂಕ: 14.09.2025ರ ಭಾನುವಾರ ಬೆಳಿಗ್ಗೆ 10.00 ಘಂಟೆಗೆ
ಶ್ರೀ ಶ್ರೀ. ಪಂಡಿತ ನಾರಾಯಣಚಾರ್ಯ ಕಲ್ಯಾಣ ಮಂಟಪ,
ಚಾಮರಾಜ ಜೋಡಿರಸ್ತೆ, (ಸುಬ್ಬರಾಯನ ಕೆರೆ) ಮೈಸೂರಿನಲ್ಲಿ

ಸಂಘದ ಅಧ್ಯಕ್ಷರಾದ
ಶ್ರೀ ಎನ್. ಶಿವಕುಮಾರ್ ರವರ
ಅಧ್ಯಕ್ಷತೆಯಲ್ಲಿ ನಡೆಯಲಿದೆ.

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಮಾನ್ಯ ಸದಸ್ಯರುಗಳಿಗೆ ಕಳುಹಿಸಲಾಗಿದೆ. ಮಾನ್ಯ ಸದಸ್ಯರುಗಳೆಲ್ಲರೂ ಸಕಾಲಕ್ಕೆ ಸಭೆಗೆ ಹಾಜರಾಗಬೇಕಾಗಿ ಕೋರಲಾಗಿದೆ.

ವಿಶೇಷ ಸೂಚನೆ:
1) ವಾರ್ಷಿಕ ಮಹಾಸಭೆಗೆ ಹಾಜರಾಗುವ ಮಾನ್ಯ ಸದಸ್ಯರುಗಳು ಸಂಘದಿಂದ ನೀಡಿರುವ ಷೇರು ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತರಬೇಕಾಗಿ ಕೋರಲಾಗಿದೆ.
2) ತಿದ್ದುಪಡಿಯಾದ ಸಹಕಾರ ಕಾಯಿದೆ ರೀತ್ಯಾ ವಾರ್ಷಿಕ ಮಹಾಸಭೆಗೆ ಹಾಜರಾತಿ ಕಡ್ಡಾಯವಾಗಿರುತ್ತದೆ. ಮಾನ್ಯ ಸದಸ್ಯರುಗಳು ತಪ್ಪದೇ ಸಭೆಗೆ ಹಾಜರಾಗಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಎಂ.ವಿ.ರವಿ, ಕಾರ್ಯದರ್ಶಿ, ಮೊಬೈಲ್: 9741202595

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ವನಿತಾ. ಎಂ

ನೀವು ನಮ್ಮನ್ನು ಅಗಲಿ ಒಂದು ವರ್ಷವಾದರು ಸದಾ ನಿಮ್ಮ ನೆನಪಿನಲ್ಲಿರುವ ಪತಿ ರಾಜೇಶ್, ಮಕ್ಕಳಾದ – ತೇಜಸ್‌ಗೌಡ, ದರ್ಶನ್‌ಗೌಡ, ತಾಯಿ– ಮಂಗಳಮ್ಮ ಮರಿಗೌಡ, ಮಾವ – ವೆಂಕಟೇಶ್, ಭಾಗ್ಯಮ್ಮ, ತಮ್ಮಂದಿರು– ಕುಮಾರ್, ಮೂರ್ತಿ, ರಮೇಶ್





ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಯಪಡಿಸುವುದೇನೆಂದರೆ ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಮಾದಪುರ ಗ್ರಾಮದ ಸರ್ವೆ ನಂ. 1/2 ರಲ್ಲಿ 1 ಎಕರೆ 28 ಗುಂಟೆ ಸರ್ವೆ ನಂ 1/4 0.37 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮೈಸೂರಿನ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 1374/2025 ಎಂದು ದಾವೆ ಹೂಡಲಾಗಿದೆ.
ಮೇಲ್ಕಂಡ ಗ್ರಾಮದ ಸರ್ವೆ ನಂ. ಜಮೀನುಗಳಿಗೆ ಸಂಬಂಧಿಸಿದಂತೆ ವಾದಿಗಳಾದ ಶ್ರೀಮತಿ. ಲಕ್ಷ್ಮಿ, ಶ್ರೀ. ರಮೇಶ ವಿ. ಮತ್ತು ಸುರೇಶ ವಿ. ರವರುಗಳು ಘೋಷಣಾತ್ಮಕ ತೀರ್ಪು ಮತ್ತು ಡಿಕ್ರಿ ಇತರೆ ಪರಿಹಾರಗಳಿಗಾಗಿ ಪ್ರತಿವಾದಿಗಳಾದ ರಾಮಯ್ಯ @ ರಾಮೇಗೌಡ, ಸಿದಯ್ಯ @ ಸಿದ್ದೇಗೌಡ, ಶ್ರೀ. ರಾಮು, ಮಹದೇವ, ಸಿದ್ದರಾಜು, ಸಿದ್ದರಾಮು, ಸಿದ್ದಯ್ಯ ಇವರ ವಿರುದ್ಧ ದಾವೆಯನ್ನು ಹೂಡಿರುತ್ತಾರೆ. ಆದ್ದರಿಂದ ಈ ಪ್ರಕರಣ / ದಾವೆ ಬಗೆಹರಿಯುವವರೆಗೂ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಮೇಲ್ಕಾಣಿಸಿದ ಪ್ರತಿವಾದಿಗಳಿಂದ ಕ್ರಯ, ಧಾನ, ಭೋಗ್ಯ, ಅಡಮಾನ, ಪಾಲುಗಾರಿಕೆ, ಬಾಡಿಗೆ, ಪರವಾನಗೆ ಒಪ್ಪಂದದ ಮೂಲಕ ಖರೀದಿ ಮಾಡಬಾರದು ಎಂದು ಸಾರ್ವಜನಿಕರಿಗೆ ಈ ಮೂಲಕ ಮನವಿ ಮಾಡುತ್ತೇವೆ ಎಂದು ವಾದಿಗಳು ತಿಳಿಸಿರುತ್ತಾರೆ. ಒಂದು ವೇಳೆ ಯಾರಾದರು ಈ ದಾವೆ ಬಗೆ ಹರಿಯುವ ಮೊದಲು ಮೇಲ್ಕಂಡ ಸರ್ವೆ ನಂಬರುಗಳ ಜಮೀನುಗಳನ್ನು ಖರೀದಿ ಮಾಡಿದರೆ ಅವರು ನಾಯಾಲಯಕ್ಕೆ ಉತ್ತರದಾರರಾಗುವರು ಮತ್ತು ದಾವೆಯಲ್ಲಿ ಪಕ್ಷಗಾರರಾಗಿ ಸೇರ್ಪಡೆಯಾಗುವರು ಹಾಗೆಯೇ ವಾದಿಗಳಿಗೆ ತಗಲುವ ಪರಿಹಾರ ಪಾವತಿಸಲು ಹೊಣೆಗಾರರಾಗುವರು.

Sd/- RAHUL R. S.
B. Com, LL.B. Advocate,
KAR No.5239/2021, Mob.: 7795836541
ದಿನಾಂಕ: 12.09.2025, ಸ್ಥಳ: ಮೈಸೂರು

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್.ಸ್ಟೇಷನ್ ಎದುರು, ಹೈಟೆನ್ಷನ್, ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ – 570018
ಕಛೇರಿ : 0821-2001737, ವೆಬ್‌ಸೈಟ್: http://www.hootagallicity.mrc.gov.in ಇಮೇಲ್: ka.hootagalli.cmc@gmail.com

ಸಂ: ಹೂನಸ/ವಾಹನ/ಸಿಆರ್/01/2025–26 ದಿನಾಂಕ: 10.09.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಹೂಟಗಳ್ಳಿ ನಗರಸಭೆಯ ಈ ಕೆಳಕಂಡ ವಾಹನಗಳನ್ನು ಸರಬರಾಜು ಮಾಡಲು ಕೆಟಿಪಿಪಿ ನಿಯಮದಂತೆ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆ/ಗುತ್ತಿಗೆದಾರರು ಕೆಪಿಪಿ ಪೋರ್ಟಲ್ ನಿಂದ ಟೆಂಡರ್ ಷರತ್ತು ಹಾಗೂ ಸಲ್ಲಿಸಬೇಕಾಗಿರುವ ದಾಖಲಾತಿಗಳ ವಿವರಗಳಿಗೆ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು. ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸುವ ಕೊನೆ **ದಿನಾಂಕ:26–09–2025 ರ ಸಂಜೆ 5.30 ಗಂಟೆ,** ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:29–09–2025 ರ ಬೆ.11.00 ಗಂಟೆ.**

ಕ್ರ ಸಂ.	ಕಾಮಗಾರಿಗಳ ಇಂಡೆಂಟ್ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)
1	DMA/2025-26/IND5321	23.77	48,000/-
2	DMA/2025-26/IND5322	11.50	28,750/-

DIPR/MYS/KAVITA/947/25-26 ಸಹಿ/– ಪೌರಾಯುಕ್ತರು, ನಗರಸಭೆ, ಹೂಟಗಳ್ಳಿ

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈಅಪ್ರಾ/ವ.ಕ–4/70/2025–26 ದಿನಾಂಕ : 10–07–2025

ಪತ್ರಿಕಾ ಪ್ರಕಟಣೆ

ಶ್ರೀ ಎ.ಎಸ್. ಸಿದ್ದನಂಜಪ್ಪ ರವರಿಗೆ ಜಯಲಕ್ಷ್ಮೀಪುರಂ 3ನೇ ಬ್ಲಾಕ್ ಬಡಾವಣೆಯಲ್ಲಿ ಮಾದರಿ ಮನೆ ಸಂಖ್ಯೆ: 48 ರ ನಿವೇಶನವು ಪ್ರಾಧಿಕಾರದಿಂದ ದಿನಾಂಕ: 19–06–1967 ರಂದು ಮಂಜೂರಾಗಿರುತ್ತದೆ. ಮೂಲ ಮಂಜೂರಾತಿದಾರರಾದ ಶ್ರೀ ಎ.ಎಸ್. ಸಿದ್ದನಂಜಪ್ಪ ರವರು ದಿನಾಂಕ: 21–10–1981 ರಂದು ಮರಣ ಹೊಂದಿರುತ್ತಾರೆ. ಇವರ ಪತ್ನಿ **ಶ್ರೀಮತಿ ಸ್ವರ್ಣಮ್ಮ** ಮತ್ತು ನಾಲ್ಕು ಜನ ಮಕ್ಕಳಿದ್ದು, ಮಕ್ಕಳೆಲ್ಲರು ಸೇರಿ ತಾಯಿಗೆ ಕ್ರಯಪತ್ರ ನೀಡಲು ತಮ್ಮದೇನು ಅಭ್ಯಂತರವಿರುವುದಿಲ್ಲವೆಂದು ಪ್ರಮಾಣ ಸಲ್ಲಿಸಿರುತ್ತಾರೆ. ಶ್ರೀಮತಿ ಸ್ವರ್ಣಮ್ಮ ರವರು ತಮ್ಮ ಪ್ರತಿನಿಧಿ ಶ್ರೀ ಕೆ.ಡಬ್ಲ್ಯೂ ಪೂಣಚ್ಚ ರವರಿಗೆ ಹಿರಿಯ ಪತ್ರಾಂಕಿತ ಉಪ ನೊಂದಣಾಧಿಕಾರಿ ಮೈಸೂರು ದಕ್ಷಿಣ ರವರ ಕಛೇರಿಯಲ್ಲಿ 4ನೇ ಪುಸ್ತಕದ 235ನೇ ಸಂಪುಟದಲ್ಲಿ 134–135 ನೇ ಪುಟದಲ್ಲಿ 863ನೇ ನಂಬರಾಗಿ ದಿನಾಂಕ: 19–08–1955 ರಂದು ನೊಂದಾಯಿತ ಜಿ.ಪಿ.ಎ ನೀಡಿರುತ್ತಾರೆ. ಶ್ರೀಮತಿ ಸ್ವರ್ಣಮ್ಮ ರವರು ಇವರ ಮಕ್ಕಳು ಹಾಗೂ ಜಿ.ಪಿ.ಎ ದಾರರಾದ ಶ್ರೀ ಕೆ.ಡಬ್ಲ್ಯೂ ಪೂಣಚ್ಚ ರವರು ಮಾದರಿ ಮನೆ ಸಂಖ್ಯೆ:48 ಅನ್ನು ಶ್ರೀಮತಿ ಅನಿತ ಪೂಣಚ್ಚ ಎಂಬುವರಿಗೆ ಉಪ ನೊಂದಣಾಧಿಕಾರಿ ಮೈಸೂರು ದಕ್ಷಿಣ ರವರ ಕಛೇರಿಯಲ್ಲಿ 1ನೇ ಪುಸ್ತಕದ 4563ನೇ ಸಂಪುಟದಲ್ಲಿ 31–37 ನೇ ಪುಟದಲ್ಲಿ 2479ನೇ ನಂಬರಾಗಿ ದಿನಾಂಕ: 28–08–1995 ರಂದು ನೊಂದಾಯಿತ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ವರ್ಗಾವಣೆ ಪತ್ರ ಪಡೆದಿರುತ್ತಾರೆ. ಶ್ರೀಮತಿ ಅನಿತ ಪೂಣಚ್ಚ ರವರು ನಿವೇಶನದ ನಕಲು ಮಂಜೂರಾತಿ ಪತ್ರ, ಸ್ವಾಧೀನ ಪತ್ರ ಹಾಗೂ ನಿವೇಶನದ ಖಾತಾ ಮತ್ತು ಕಂದಾಯ ಪತ್ರ ಕೋರಿ ಅರ್ಜಿಸಲ್ಲಿಸಿರುವುದರಿಂದ ಸದರಿಯವರಿಗೆ ಮಂಜೂರಾತಿ ಪತ್ರ, ಸ್ವಾಧೀನ ಪತ್ರ ಹಾಗೂ ನಿವೇಶನದ ಖಾತಾ ಮತ್ತು ಕಂದಾಯ ಪತ್ರ ನಕಲು ಪ್ರತಿಗಳನ್ನು ನೀಡಬೇಕಾಗಿದ್ದು ಹಾಗೂ ವರ್ಗಾವಣೆ ಮಾಡಿ ಕ್ರಯಪತ್ರ ನೀಡುವ ಸಂಬಂಧ ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್‌ರವರು, ವಲಯ ಕಛೇರಿ–4
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು